ಸೋಮವಾರ, ಏಪ್ರಿಲ್ 14, 2025 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

## ಅರ್ಧಶತಕಗಳ 'ಶತಕ'

ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅವರು ಜೈಪುರದಲ್ಲಿ ಭಾನುವಾರ ನಡೆದ ರಾಜಸ್ಥಾನ ರಾಯಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಅಜೇಯ 62 ರನ್ ಗಳಿಸಿದರು. ಅವರು ಟಿ20 ಕ್ರಿಕೆಟ್ ಮಾದರಿಯಲ್ಲಿ ಗಳಿಸಿದ 100ನೇ ಅರ್ಧಶತಕ ಇದಾಗಿದೆ. ಅಂತರರಾಷ್ಟ್ರೀಯ, ಐಪಿಎಲ್, ಚಾಂಪಿಯನ್ಸ್ ಲೀಗ್ ಮತ್ತು ದೇಶಿ ಕ್ರಿಕೆಟ್‌ನಲ್ಲಿ ಅವರು ಒಟ್ಟು 405 ಚುಟುಕು ಮಾದರಿ ಪಂದ್ಯಗಳನ್ನು ಆಡಿದ್ದಾರೆ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ವಿದ್ಯಾವಂತರಾಗಿ,
ಸಂಘಟಿತರಾಗಿ ಮತ್ತು
ಉತ್ತೇಜಿತರಾಗಿರಿ..!
-ಡಾ. ಬಿ.ಆರ್. ಅಂಬೇಡ್ಕರ್

**134ನೇ ಜನ್ಮದಿನಾಚರಣೆ**

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ
**ಡಾ. ಬಿ.ಆರ್. ಅಂಬೇಡ್ಕರ್** ರವರ
**ಪ್ರತಿಮೆಗೆ ಮಾಲಾರ್ಪಣೆ**
ಏಪ್ರಿಲ್ 14, 2025 ಸೋಮವಾರ, ಬೆಳಿಗ್ಗೆ 10.30 ಗಂಟೆಗೆ
ವಿಧಾನಸೌಧದ ಪೂರ್ವ ದ್ವಾರ, ಬೆಂಗಳೂರು

**ವೇದಿಕೆ ಕಾರ್ಯಕ್ರಮ**
ವಿಧಾನಸೌಧದ ಮುಂಭಾಗ, ಪೂರ್ವದ್ವಾರ ಭವ್ಯ ಮೆಟ್ಟಿಲುಗಳು, ಬೆಂಗಳೂರು
ಸಮಯ - ಬೆಳಿಗ್ಗೆ 10.45 ಗಂಟೆಗೆ

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು, ಇಲಾಖೆಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸುತ್ತಿರುವುದು.

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

@SWDGok

ನಾಡಿನ ಸಮಸ್ತ ಜನತೆಗೆ
ಡಾ|| ಬಿ.ಆರ್. ಅಂಬೇಡ್ಕರ್‌ರವರ
ಜಯಂತಿಯ ಶುಭಾಶಯಗಳು
ದಿನಾಂಕ : 14-04-2025 ಮಧ್ಯಾಹ್ನ 2-00 ಗಂಟೆಗೆ
ತುಮಕೂರು ಪುರಭವನ ಮುಂಭಾಗದಲ್ಲಿ
ನೂತನವಾಗಿ ನಿರ್ಮಿಸಲಾದ ಭಾರತರತ್ನ
ಡಾ. ಬಿ.ಆರ್.ಅಂಬೇಡ್ಕರ್‌ರವರ
12 ಅಡಿ ಕಂಚಿನ ಪುತ್ಥಳಿ
ಅನಾವರಣ ಕಾರ್ಯಕ್ರಮ
ಸರ್ವರಿಗೂ
ಸುಸ್ವಾಗತ
ಶ್ರೀ ಬಿ.ವಿ.ಜಯರಾಮು
ಕಾಂಗ್ರೆಸ್ ಮುಖಂಡರು
ಜಯರಾಮು ಅಭಿಮಾನಿಗಳ ಬಳಗ
ಕೇಶವಮೂರ್ತಿ
ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ
ಶ್ರೀ ಸುನೀಲ್ ಪ್ರಕಾಶ್
ಪ್ರಧಾನ ಕಾರ್ಯದರ್ಶಿ, ಬೆಂ.ದ.ಜಿ.ಕಾಂಗ್ರೆಸ್ ಸಮಿತಿ
ಚಂದ್ರಶೇಖರ್ ಗೌಡ
ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ತುಮಕೂರು
ಆರ್. ರಾಮಕೃಷ್ಣ
ಕಾರ್ಯದರ್ಶಿ, ಕೆಪಿಸಿಸಿ
ದಿನೇಶ್
ಕಾರ್ಯದರ್ಶಿ, ಕೆಪಿಸಿಸಿ
ವಾಲೆ ಚಂದ್ರು
ಮಾಜಿ ಉಪಾಧ್ಯಕ್ಷರು, ನಗರಸಭೆ
ಜಗದೀಶ್
ಕಾಂಗ್ರೆಸ್ ಮುಖಂಡರು
ಶ್ರೀ ಸಿ. ಜಯಚಂದ್ರ
ಗುತ್ತಿಗೆದಾರರು

ಸೋಮವಾರ, ಏಪ್ರಿಲ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 103 | ಪುಟ 16
www.prajavani.net
prajavani.net prajavani prajavani prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಮೊಕದ್ದಮೆ: 11 ವರ್ಷದಲ್ಲಿ ₹561 ಕೋಟಿ ವೆಚ್ಚ**

- ಕೋರ್ಟ್‌ನಲ್ಲಿ ಮೊಕದ್ದಮೆ ಎದುರಿಸಲು 2014–15 ರಿಂದ 2024–25ನೇ ಸಾಲಿನ ಡಿಸೆಂಬರ್‌ವರೆಗೆ ಕೇಂದ್ರ ಸರ್ಕಾರದಿಂದ ₹561.08 ಕೋಟಿ ವೆಚ್ಚ
- ಆರ್ಥಿಕ ಸಚಿವಾಲಯದ 1.93 ಲಕ್ಷ ಪ್ರಕರಣ ಸೇರಿದಂತೆ ವಿವಿಧ ಸಚಿವಾಲಯಗಳು, ಇಲಾಖೆಗಳ ವಿರುದ್ಧದ 7.18 ಲಕ್ಷ ಪ್ರಕರಣಗಳ ವಿಚಾರಣೆ ಬಾಕಿ
- ಮೊಕದ್ದಮೆ ಎದುರಿಸಲು ವರ್ಷದಿಂದ ವರ್ಷಕ್ಕೆ ವೆಚ್ಚ ಹೆಚ್ಚಳ, ಕೆಲವೊಮ್ಮೆ ಅಲ್ಪ ಇಳಿಕೆ
- 2023-24ನೇ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ಅಂದರೆ ₹66.57 ಕೋಟಿ ಖರ್ಚು

ಆಧಾರ: ಸಂಸದೀಯ ಸ್ಥಾಯಿ ಸಮಿತಿ ವರದಿ

ಆಳ–ಅಗಲ
ನವೋದ್ಯಮ: ಭಾರತದಲ್ಲಿ ಆಗಬೇಕಿರುವುದೇನು?

ಪ್ರಜಾ ಪ್ಲಸ್
ಒಂದೇ ರೀತಿ ಪಾತ್ರ ಮಾಡಲು ಇಷ್ಟವಿಲ್ಲ 11

ಡಿಕೆಶಿ ವಿರುದ್ಧ ರಾಜ್ಯಪಾಲಗೆ ಮುನಿರತ್ನ ದೂರು 4

‘ಲಿಂಗಾಯತ–ಒಕ್ಕಲಿಗರನ್ನು ಒಡೆದ ಜಾತಿಗಣತಿ’ 7

ಪರಿಶ್ರಮ
ಪಿಯು ಕಾಲೇಜು | ನೀಟ್ ಅಕಾಡೆಮಿ
Your Rank Deserves a Reward!
ARE YOU AMONG THE STATE'S TOP 10 OR DISTRICT TOPPERS?
Join PARISHRAMA PU COLLEGE for FREE (College + Hostel included)
No admission charges at all. Just show your rank proof, & your future begins here!
PUC Admission Started 080 24413400, 74838 30545 www.parishramaneetacademy.com

## ಇಂದು ರಾತ್ರಿಯಿಂದಲೇ ಲಾರಿ ಮುಷ್ಕರ

ಬೆಂಗಳೂರು: ಡೀಸೆಲ್ ದರ ಏರಿಕೆ ಖಂಡಿಸಿ, ಐದು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏಪ್ರಿಲ್ 14ರ ರಾತ್ರಿಯಿಂದಲೇ ಸಂಚಾರ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘ ಪ್ರಕಟಿಸಿದೆ. 10

**ಚಿನಕುರುಳಿ**

ಪ್ರಕಾಶ್ ಶೆಟ್ಟಿ

ಮನೆ ಅಂಗಳದಲ್ಲಿ ಆಟವಾಡುತ್ತಿದ್ದ ಐದು ವರ್ಷದ ಬಾಲಕಿಯ ಅಪಹರಣ, ಲೈಂಗಿಕ ದೌರ್ಜನ್ಯ, ಹತ್ಯೆ

# ಪೊಲೀಸ್ ಗುಂಡಿಗೆ ಆರೋಪಿ ಬಲಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮನೆಯಂಗಳದಲ್ಲಿ ಆಟವಾಡುತ್ತಿದ್ದ ಐದು ವರ್ಷದ ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಲಾಗಿದೆ. ಕೃತ್ಯ ಎಸಗಿದ ಆರೋಪಿ ಬಿಹಾರ ಮೂಲದ ರಿತೇಶ ಕುಮಾರ್ (35) ಎಂಬಾತ ಭಾನುವಾರ ಸಂಜೆ ನಗರದ ತಾರಿಹಾಳ ಸೇತುವೆ ಬಳಿ ಪೊಲೀಸರ ಗುಂಡೇಟಿನಿಂದ ಮೃತಪಟ್ಟಿದ್ದಾನೆ.

‘ತಾರಿಹಾಳ ಬಳಿ ಸ್ಥಳ ಪರಿಶೀಲನೆಗೆ ಕರೆದೊಯ್ದಾಗ ಪೊಲೀಸ್ ವಾಹನದ ಮೇಲೆ ಕಲ್ಲು ತೂರಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ. ಅಶೋಕನಗರದ ಪಿಎಸ್‌ಐ ಅನ್ನಪೂರ್ಣ ಅವರು ಗಾಳಿಯಲ್ಲಿ ಗುಂಡು ಹಾರಿಸಿದರೂ ಆರೋಪಿ ತಪ್ಪಿಸಿಕೊಂಡು ಓಡಲು ಯತ್ನಿಸಿದ. ಈ ಸಂದರ್ಭದಲ್ಲಿ ಪೊಲೀಸರು ಗುಂಡು ಹಾರಿಸಿದಾಗ ಆತನ ಕಾಲಿಗೆ ಹಾಗೂ ಬೆನ್ನಿಗೆ ಗುಂಡು ತಗುಲಿದೆ’ ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಗಾಯಗೊಂಡಿದ್ದ ಅವನನ್ನು ತಕ್ಷಣ ಕೆಎಂಸಿ–ಆರ್‌ಐ ಆಸ್ಪತ್ರೆಗೆ ತರಲಾಯಿತು. ಅಷ್ಟರಲ್ಲಿ ಮೃತಪಟ್ಟಿದ್ದ’ ಎಂದರು.

4ನೇ ಪುಟ ನೋಡಿ

ಬಾಲಕಿಯನ್ನು ಅಪಹರಿಸಿ ಹತ್ಯೆ ಮಾಡಿರುವುದನ್ನು ಖಂಡಿಸಿ ಹುಬ್ಬಳ್ಳಿಯ ಅಶೋಕನಗರ ಪೊಲೀಸ್ ಠಾಣೆ ಎದುರು ಭಾನುವಾರ ಜನರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

### ಸಾರ್ವಜನಿಕರ ಸಂಭ್ರಮ

ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಘಟಕದಲ್ಲಿ ಇದು ಮೊದಲನೇ ಎನ್‌ಕೌಂಟರ್ ಆಗಿದ್ದು, ಇಂಥ ಕೃತ್ಯ ಎಸಗುವವರಿಗೆ ತಕ್ಕ ಸಂದೇಶ ರವಾನೆಯಾಗಿದೆ ಎಂದು ಸಾರ್ವಜನಿಕರು ಸಂಭ್ರಮಿಸಿದರು. ಈ ಹಿಂದೆ ನೇಹಾ ಹಿರೇಮಠ ಮತ್ತು ಅಂಜಲಿ ಅಂಬಿಗೇರ ಅವರನ್ನು ಕೊಲೆ ಮಾಡಿದಾಗಲೂ, ಆರೋಪಿಗಳ ಎನ್‌ಕೌಂಟರ್ ಮಾಡಬೇಕು ಎಂದು ಪ್ರತಿಭಟಿಸಲಾಗಿತ್ತು. 4

### ಘಟನಾವಳಿ

- ಬೆಳಿಗ್ಗೆ 10.45ಕ್ಕೆ ಬಾಲಕಿ ಅಪಹರಣ
- ಬೆಳಿಗ್ಗೆ 11.40ಕ್ಕೆ ಬಾಲಕಿಯ ಶವ ಪತ್ತೆ
- ಮಧ್ಯಾಹ್ನ 12ಕ್ಕೆ ಆರೋಪಿ ಪೊಲೀಸ್ ವಶಕ್ಕೆ
- ಮಧ್ಯಾಹ್ನ 2ಕ್ಕೆ ಅಶೋಕನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ
- ಸಂಜೆ 5.30 ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಬಾಲಕಿಯ ಶವ ಪರೀಕ್ಷೆ
- ಸಂಜೆ 6.30ಕ್ಕೆ ಕೆಎಂಸಿ–ಆರ್‌ಐ ಆಸ್ಪತ್ರೆ ಎದುರು, ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಬಳಿ ಪ್ರತಿಭಟನೆ
- ಸಂಜೆ 6.30ಕ್ಕೆ ಹುಬ್ಬಳ್ಳಿ ಹೊರವಲಯದ ತಾರಿಹಾಳ ಸೇತುವೆ ಬಳಿ ಆರೋಪಿ ರಿತೀಶ್ ಕುಮಾರ್ ಎನ್‌ಕೌಂಟರ್
- ರಾತ್ರಿ 8ಕ್ಕೆ ಪೊಲೀಸ್ ಕಮಿಷನರ್ ಸುದ್ದಿಗೋಷ್ಠಿಯಲ್ಲಿ ಎನ್‌ಕೌಂಟರ್ ಘೋಷಣೆ
- ಬಾಲಕಿ ಕುಟುಂಬಕ್ಕೆ ಮುಖ್ಯಮಂತ್ರಿ ನಿರ್ದೇಶನದ ಮೇರೆಗೆ ₹10 ಲಕ್ಷ ಪರಿಹಾರ

# ಮುರ್ಶಿದಾಬಾದ್ ತೊರೆಯುತ್ತಿರುವ ಜನ

**ವಕ್ಫ್ ವಿರೋಧಿಸಿ ಹಿಂಸಾಚಾರ**

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ಕೋಮು ಹಿಂಸಾಚಾರದಿಂದ ತೊಂದರೆಗೆ ಒಳಗಾದ ನೂರಾರು ಮಂದಿ ಭಾಗೀರಥಿ ನದಿಯನ್ನು ದಾಟಿ, ನೆರೆಯ ಮಾಲ್ದಾದಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೀಗೆ ಬರುತ್ತಿರುವವರಿಗೆ ಸ್ಥಳೀಯ ಆಡಳಿತವು ಶಾಲೆಗಳಲ್ಲಿ ಆಶ್ರಯ ಮತ್ತು ಆಹಾರ ಒದಗಿಸಿದೆ. ದೋಣಿಗಳನ್ನು ಬಳಸಿ ನದಿ ದಾಟುತ್ತಿರುವವ-ರಿಗೆ ಸಹಾಯ ಒದಗಿಸಲು ಸ್ವಯಂಸೇವಕರನ್ನು ನಿಯೋಜಿಸಲಾಗಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ವಿರೋಧಿಸಿ ಮುಸ್ಲಿಂ ಬಾಹುಳ್ಯದ ಮುರ್ಶಿದಾಬಾದ್, ಸೂತಿ, ಧುಲಿಯಾನ್, ಜಂಗೀಪುರ ಮತ್ತು ಶಂಶೇರ್‌ಗಂಜ್ ಪ್ರದೇಶಗಳಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿವೆ. ಈ ಪ್ರತಿಭಟನೆಗಳು ಕೋಮು ಹಿಂಸಾಚಾರವಾಗಿ ಪರಿವರ್ತನೆ ಕಂಡಿವೆ. ಇದರಿಂದಾಗಿ ಜನ ಬೇರೆಡೆ ತೆರಳುತ್ತಿ-ದ್ದಾರೆ. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇನ್ನೂ 12 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

‘ನಮ್ಮ ಮನೆಗಳಿಗೆ ಬೆಂಕಿ ಹಾಕಲಾಯಿತು, ಹೊರಗಿನವರು ಹಾಗೂ ಸ್ಥಳೀಯರು ಸೇರಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರು. ಹೀಗಾಗಿ ಧುಲಿಯಾನ್‌ನ ಮಂದಿರ್‌ಪಾರಾ ಪ್ರದೇಶದಿಂದ ತಪ್ಪಿಸಿಕೊಂಡು ಬರಬೇಕಾಯಿತು’ ಎಂದು ಕುಟುಂಬದ ನಾಲ್ಕು ಜನರ ಜೊತೆ ಬಂದಿರುವ ಯುವತಿಯೊಬ್ಬರು ಹೇಳಿದರು.

7ನೇ ಪುಟ ನೋಡಿ

### ಅಮಿತ್ ಶಾಗೆ ಪತ್ರ

ಪಶ್ಚಿಮ ಬಂಗಾಳದ ಗಡಿಯಲ್ಲಿ ಇರುವ ಕೆಲವು ಜಿಲ್ಲೆಗಳನ್ನು ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆಯ ಅಡಿಯಲ್ಲಿ ‘ಪ್ರಕ್ಷುಬ್ಧ ಪ್ರದೇಶಗಳು’ ಎಂದು ಘೋಷಿಸುವಂತೆ ಕೋರಿ ಪುರುಲಿಯಾ ಕ್ಷೇತ್ರದ ಬಿಜೆಪಿ ಸಂಸದ ಜ್ಯೋತಿರ್ಮಯಿ ಸಿಂಗ್ ಮಹತೊ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ. ಈ ಜಿಲ್ಲೆಗಳಲ್ಲಿ ಹಿಂದೂಗಳ ಮೇಲೆ ಮತ್ತೆ ಮತ್ತೆ ದಾಳಿ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ.

LOVED IN 100 COUNTRIES
BAJAJ
THE WORLD'S FAVOURITE INDIAN
2 CRORE
pulsar CELEBRATION
SPECIAL CELEBRATION PRICES
SAVE UP TO ₹5 900/-*
ಪಲ್ಸರ್, ಭಾರತದ ನಂ. 1 ಸ್ಪೋರ್ಟ್ಸ್ ಮೋಟಾರ್‌ಸೈಕಲ್ 2 ಕೋಟಿ ಗಡಿ ತಲುಪಿದೆ ಮತ್ತು ಸಂಭ್ರಮಾಚರಣೆಯ ಆನಂದದಲ್ಲಿ ನಾವಿದ್ದೇವೆ! ನಾವು ನಮ್ಮ ಗ್ರಾಹಕರಿಗೆ ಇದುವರೆಗೆ ಎಂದಿಗೂ ಕಾಣದ ವಿಶೇಷ ಬೆಲೆಗಳೊಂದಿಗೆ ಧನ್ಯವಾದ ಹೇಳುತ್ತಿದ್ದೇವೆ. ಬನ್ನಿ, ಪಲ್ಸರ್ ಮ್ಯಾನಿಯಕ್ಸ್ ಬಳಗಕ್ಕೆ ಸೇರಿ.
ಡೌನ್-ಪೇಮೆಂಟ್ ₹5 544/-* ರಿಂದ ಪ್ರಾರಂಭವಾಗುತ್ತದೆ

| | 125 NEON | 125 CARBON FIBRE | 150 SINGLE DISC | N160 USD |
|---|---|---|---|---|
| ಉಳಿತಾಯ | ₹2 310/- | ₹2 000/- | ₹3 000/- | ₹5 914/- |
| ವಿಶೇಷ ಬೆಲೆ (ಉಳಿತಾಯದ ನಂತರ) | ₹85 792/- | ₹92 666/- | ₹1 12 768/- | ₹1 36 992/- |

*ಎಕ್ಸ್–ಶೋರೂಮ್ ಬೆಲೆ
pulsar DEFINITELY DARING
O&M KAN
72198 21111 | BAJAJ SECURE • AMC • ROAD SIDE ASSISTANCE | BAJAJ CREDIT
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. *ಸೂಚಿಸಲಾದ ಪಲ್ಸರ್ ಮತ್ತು ಪ್ಲಾಟಿನಾ ವೇರಿಯಂಟ್‌ಗಳಿಗೆ ಎಕ್ಸ್–ಶೋರೂಂ ಬೆಲೆ. ಮಾರ್ಚ್ 31, 2025 ರಂತೆ ಉಲ್ಲೇಖಿಸಲಾದ ಪಲ್ಸರ್ ವೇರಿಯಂಟ್‌ಗಳ ಎಕ್ಸ್–ಶೋರೂಂ ಬೆಲೆಗೆ ಹೋಲಿಸಿದರೆ ಬೆಲೆ ಪರಿಷ್ಕರಣೆ. *ಪಲ್ಸರ್ 125 ನಿಯಾನ್‌ಗೆ ಡೌನ್–ಪೇಮೆಂಟ್ ಮಾರ್ಜಿನ್ ಮನಿ ಆಗಿದೆ. ಮಾರ್ಜಿನ್ ಮನಿಯು DCC ಶುಲ್ಕಗಳು, ಸಂಸ್ಕರಣಾ ಶುಲ್ಕಗಳು, ಇತರ ಶುಲ್ಕಗಳನ್ನು ಹೊರತುಪಡಿಸಿದೆ ಮತ್ತು ಇದು ಕ್ರೆಡಿಟ್ ನಿಯತಾಂಕಗಳ ನೆರವೇರಿಕೆಯನ್ನು ಆಧರಿಸಿದೆ. ಪೂರ್ವ ಸೂಚನೆ ಇಲ್ಲದೆ, ಯಾವುದೇ ಅಥವಾ ಎಲ್ಲಾ ಕೊಡುಗೆಗಳನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಬಜಾಜ್ ಆಟೋ ಕಾಯ್ದಿರಿಸಿದೆ. ಸಾಮಾನ್ಯ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ, ವೃತ್ತಿಪರ ಮೇಲ್ವಿಚಾರಣೆಯಲ್ಲಿ, ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ, ಸಾಹಸಗಳನ್ನು ತಜ್ಞರು ನಿರ್ವಹಿಸಿದ್ದಾರೆ. ಈ ಸಾಹಸಗಳನ್ನು ಪುನರಾವರ್ತಿಸಲು ಪ್ರಯತ್ನಿಸಬೇಡಿ ಮತ್ತು ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ನಿರ್ದಿಷ್ಟ ಮಾದರಿಗಳಲ್ಲಿ ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ AMC ಲಭ್ಯವಿದೆ. ಹೆಚ್ಚಿನ ವಿವರಗಳನ್ನು ಬಜಾಜ್ ಡೀಲರ್ ರಿಂದ ತಿಳಿದುಕೊಳ್ಳಿ. ರಸ್ತೆ ಬದಿಯ ಸಹಾಯ ರೋಡ್ ಸೈಡ್ ಅಸಿಸ್ಟನ್ಸ್ ಥರ್ಡ್ ಪಾರ್ಟೀಸ್, ಅವರ ನಿಯಮಗಳು ಮತ್ತು ಷರತ್ತುಗಳಡಿ ನೀಡಲಿದ್ದಾರೆ.

**Authorised Dealers for Bajaj Auto Ltd.: Bangalore** • **Bommanahalli** AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9008030908 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872. • **Chikodi** JAGASHREE BAJAJ: 7349773953 • **Gokak** JAGASHREE BAJAJ: 7349773965 • **Bellary AADI BAJAJ: 9606050246• Raichur SHREE BALAJI AUTOMOBILES: 9880235539• Koppal AADI BAJAJ: 9632512938• Hospet AADI BAJAJ:9731361414 • Hagaribommanahalli AADI BAJAJ: 9900363010• SIRUGUPPA AADI BAJAJ: 9110217558 • Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.

DHEEEP

# ಉದಯೋನ್ಮುಖ ಮತ್ತು ಸ್ಥಾಪಿತ ದಲಿತೋದ್ಯಮಿಗಳ ವೇದಿಕೆ, [ದೀಪ್]

## DHALITH EMERGING & ESTABLISHED ENTREPRENEURS' PLATFORM, (DHEEEP)

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸ್ಮರಣಾರ್ಥ 2025ನೇ ಸಾಲಿನ
'ಅಂಬೇಡ್ಕರ್ ಪ್ರಶಸ್ತಿ'ಗೆ ಭಾಜನರಾದವರು :
ಮಾವಳ್ಳಿ ಶಂಕರ್ (ಹೋರಾಟ), ಬೆಂಗಳೂರು
ಎಫ್.ಎಚ್.ಜಕ್ಕಪ್ಪನವರ್ (ಹೋರಾಟ), ಧಾರವಾಡ
ದತ್ತಾತ್ರೇಯ ಇಕ್ಕಳಕಿ (ಪ್ರಕಾಶನ), ಕಲಬುರಗಿ; ಈರಪ್ಪ (ದಲಿತ ಹೋರಾಟ), ಹಾಸನ
ಹೊನ್ನೂರು ಗೌರಮ್ಮ (ಜನಪದ ಕಲೆ), ಚಾಮರಾಜನಗರ

ಹೆಚ್. ಸತೀಶ್‌ಕುಮಾರ್
ಅಧ್ಯಕ್ಷರು, ದೀಪ್

ಮಾವಳ್ಳಿ ಶಂಕರ್

ಎಫ್.ಎಚ್.
ಜಕ್ಕಪ್ಪನವರ್



ದತ್ತಾತ್ರೇಯ
ಇಕ್ಕಳಕಿ

ಈರಪ್ಪ

ಹೊನ್ನೂರು
ಗೌರಮ್ಮ

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ 2025ನೇ ಸಾಲಿನ

## "ಅಂಬೇಡ್ಕರ್ ಪ್ರಶಸ್ತಿ"

ಪುರಸ್ಕೃತರಿಗೆ ನಮ್ಮ ಅಭಿನಂದನೆಗಳು

ಮಾರುಕಟ್ಟೆಗೆ ಬಂದಿರುವ ಮಾವುಗಳನ್ನು ಮಾರಾಟಕ್ಕಾಗಿ ತಾಯಿ ಮತ್ತು ಮಗ ಮಂದಿರದಂತೆ ಜೋಡಿಸಿಡುತ್ತಿರುವುದು ಬಸವನಗುಡಿಯ ದೊಡ್ಡ ಬಸವೇಶ್ವರ ಗುಡಿ ರಸ್ತೆಯಲ್ಲಿ ಕಂಡುಬಂತು

ಚಿತ್ರ: ಕಿಶೋರ್ ಕುಮಾರ್ ಬೋಳಾರ್

## ಕಲೆಯ ಉಳಿವಿಗೆ ಮಾಧ್ಯಮದ ಪ್ರೋತ್ಸಾಹ ಅಗತ್ಯ: ಪದ್ಮನಾಭ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಇಂದಿನ ಡಿಜಿಟಲ್ ಜಗತ್ತಿನಲ್ಲಿ ಸಂಗೀತ, ನೃತ್ಯಗಳಂತಹ ಕಲೆಗಳನ್ನು ಉಳಿಸಿ ಬೆಳೆಸಲು ಮಾಧ್ಯಮಗಳ ಪ್ರೋತ್ಸಾಹ ಅತ್ಯಗತ್ಯ' ಎಂದು ಕರ್ನಾಟಕ ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ ಅಭಿಪ್ರಾಯಪಟ್ಟರು.

ಶ್ರೀಮದ್ ವಾದಿರಾಜ ಆರಾಧನಾ ಟ್ರಸ್ಟ್, ಶಾರದಾ ಕಲಾ ಕೇಂದ್ರ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಾಗ್ಗೇಯಕಾರರ ಆರಾಧನೋತ್ಸವ ಕಾರ್ಯಕ್ರಮದಲ್ಲಿ 'ಸುಧಾ' ವಾರ ಪತ್ರಿಕೆಯ ಮುಖ್ಯ ಉಪ ಸಂಪಾದಕಿ ಉಮಾ ಅನಂತ್ ಅವರ 'ಸಂಗೀತ ಸಾಂಗತ್ಯ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಕಲಾ ಪ್ರಕಾರಗಳು ಉಳಿಯಬೇಕಾದರೆ ಪತ್ರಿಕೆಗಳು ಸ್ವಲ್ಪಮಟ್ಟಿನ ಜಾಗವನ್ನಾದರೂ ಕಲೆಗೆ ಮೀಸಲಿಡಬೇಕು. ಇತ್ತೀಚೆಗೆ ಮಾಧ್ಯಮಗಳಲ್ಲಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಷ್ಟಾಗಿ ಆದ್ಯತೆ ಸಿಗುತ್ತಿಲ್ಲ. ಇದರಿಂದ ಸಾಂಸ್ಕೃತಿಕ ಜಗತ್ತು ಬಡವಾಗುತ್ತಿದೆಯೋ ಎಂಬ ಆತಂಕ ಕಾಡುತ್ತಿದೆ' ಎಂದರು.

'ಕಲಾವಿದರಿಗೆ ಗೌರವ, ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಯಾದರೂ ಮಾಧ್ಯಮಗಳು ಸಾಂಸ್ಕೃತಿಕ ಲೋಕವನ್ನು ಶ್ರೀಮಂತ ಗೊಳಿಸಬೇಕು. ಹೀಗಾದಲ್ಲಿ ಮಾತ್ರ ಮುಂದಿನ ಪೀಳಿಗೆಗೆ ಸಂಗೀತ ಸೇರಿ ವಿವಿಧ ಕಲಾ ಪ್ರಕಾರಗಳು ಉಳಿಯುತ್ತವೆ' ಎಂದು ಹೇಳಿದರು.

ಉಮಾ ಅನಂತ್, 'ಸಂಗೀತಗಾರರಿಗೆ ಕೇಳುಗರು ಜೀವಾಳವಿದ್ದಂತೆ, ಬರಹಗಾರರು ಹಾಗೂ ಪತ್ರಿಕೆಗಳಿಗೆ ಓದುಗರೇ ಜೀವಾಳ. ಈ ನಿಟ್ಟಿನಲ್ಲಿ ಯುವ ಪೀಳಿಗೆಯಲ್ಲಿ ಓದುವ ಹವ್ಯಾಸದ ಜೊತೆಗೆ ಸುಮಧುರ ಸಂಗೀತ ಕೇಳುವ ಹವ್ಯಾಸವೂ ಇರಬೇಕು. ಆಗ ಮಾತ್ರ ಸಮಾಜದಲ್ಲಿ ಸದ್ಭಾವನೆ ಮೂಡಲು ಸಾಧ್ಯ' ಎಂದರು.

ಬಳಿಕ ಬೆಂಗಳೂರು ಸಹೋದರರಾದ ಹರಿಹರನ್ ಹಾಗೂ ಅಶೋಕ್ ಅವರ ಯುಗಳ ಗಾಯನ ನಡೆಯಿತು.

ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿ. ಬಾಲಸುಬ್ರಮಣಿಯನ್ ಅವರಿಗೆ 'ರೇಷ್ಮೆ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸದ ಡಾ. ಸಿ.ಎನ್. ಮಂಜುನಾಥ್, ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ಗೌರವಾಧ್ಯಕ್ಷ ಸಿ. ನಾರಾಯಣಸ್ವಾಮಿ ಮತ್ತು ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ಕಾರ್ಯದರ್ಶಿ ಎಂ. ರಾಮಚಂದ್ರಗೌಡ ಉಪಸ್ಥಿತರಿದ್ದರು

– ಪ್ರಜಾವಾಣಿ ಚಿತ್ರ

## ರೇಷ್ಮೆ ಇಲಾಖೆ ಸುಧಾರಣೆಗೆ ಪ್ರಯತ್ನ: ಮಂಜುನಾಥ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೇಷ್ಮೆ ಇಲಾಖೆಯನ್ನು ಸಶಕ್ತಗೊಳಿಸಬೇಕಿದೆ. ವಿಶೇಷ ರೇಷ್ಮೆ ವಲಯ ಸ್ಥಾಪಿಸಬೇಕಿದೆ. ಈ ಕುರಿತು ಕೇಂದ್ರ ಸರ್ಕಾರದ ಗಮನ ಸೆಳೆಯಲು ಪ್ರಯತ್ನ ಮಾಡುತ್ತೇನೆ. ಇಲಾಖೆಯ ಸುಧಾರಣೆಗೆ ಪ್ರಯತ್ನಿಸುತ್ತೇನೆ' ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಭರವಸೆ ನೀಡಿದರು.

ಸಿಲ್ಕ್ ಅಸೋಸಿಯೇಷನ್ ಆಫ್ ಇಂಡಿಯಾ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಅವರಿಗೆ 'ರೇಷ್ಮೆ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ರೇಷ್ಮೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದ ವಿ.ಬಾಲಸುಬ್ರಮಣಿಯನ್ ಅವರು, ತಾವು ಕೆಲಸ ಮಾಡಿದಷ್ಟು ಅವಧಿಯಲ್ಲೇ, ರೇಷ್ಮೆ ಕ್ಷೇತ್ರದ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಿದ್ದರು. ರಾಷ್ಟ್ರ ಮಟ್ಟದಲ್ಲಿ ರೇಷ್ಮೆ ಉತ್ಪಾದನೆ ಹೆಚ್ಚಿಸುವ ಕಾರ್ಯಯೋಜನೆಯನ್ನು ಸಾಕಾರಗೊಳಿಸಿದ್ದರು. ಅವರಲ್ಲಿದ್ದ ಪ್ರಾಮಾಣಿಕತೆ, ಸಕಾರಾತ್ಮಕ ನಿಲುವಿನಿಂದಾಗಿ ಇಷ್ಟೆಲ್ಲ ಪ್ರಗತಿ ಸಾಧಿಸಲು ಸಾಧ್ಯವಾಯಿತು' ಎಂದು ಶ್ಲಾಘಿಸಿದರು.

ನಿವೃತ್ತ ಲೋಕಾಯುಕ್ತ, ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಮಾತನಾಡಿ, 'ಇವತ್ತು ಅಧಿಕಾರಸ್ಥರು, ಶ್ರೀಮಂತರಿಗೆ ಬೆಲೆ ಇದೆ. ಪ್ರಾಮಾಣಿಕರಿಗೆ ಬೆಲೆ ಇಲ್ಲ ಎಂಬ ಸನ್ನಿವೇಶವಿದೆ. ಆದರೆ, ಉತ್ತಮ ಕೆಲಸ ಮಾಡುವ ಅಧಿಕಾರಿಗಳನ್ನು ನಿವೃತ್ತಿ ನಂತರವೂ ಗೌರವಿಸುತ್ತಿರುವುದು ಅಭಿನಂದನೀಯ ನಡೆ. ಉತ್ತಮ ಕಾರ್ಯಗಳು ಎಂದೆಂದೂ ನೆನಪಿನಲ್ಲಿರುತ್ತವೆ' ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಬಾಲಸುಬ್ರಮಣಿಯನ್ ಅವರು, 'ಶತಮಾನಗಳ ಇತಿಹಾಸವಿರುವ ರೇಷ್ಮೆ ಕೃಷಿಯನ್ನು ಸರ್ಕಾರ ರಕ್ಷಿಸಬೇಕಿದೆ. ರೇಷ್ಮೆ ಇಲಾಖೆಯಲ್ಲಿ ಶೇಕಡ 70ರಷ್ಟು ಸಿಬ್ಬಂದಿ ಕೊರತೆ ಇದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲಾಖೆಯ ಬಲವರ್ಧನೆಗೊಳಿಸಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ರೇಷ್ಮೆ ಸಂಸ್ಥೆ ಗೌರವಾಧ್ಯಕ್ಷ ಸಿ. ನಾರಾಯಣಸ್ವಾಮಿ ಮಾತನಾಡಿದರು. ಸಂಸ್ಥೆಯ ಪದಾಧಿಕಾರಿಗಳಾದ ಎಸ್.ಬಿ. ದಂಡಿನ, ಸವಿತಾ ಅಮರಶೆಟ್ಟಿ, ಎಂ. ರಾಮಚಂದ್ರಗೌಡ, ಇ. ಮುನಿರಾಜು ಹಾಜರಿದ್ದರು.

## ಅಂಬೇಡ್ಕರ್ ಹೆಸರಲ್ಲಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂಬೇಡ್ಕರ್ ಜಯಂತಿ ಆಚರಿಸುತ್ತಿದ್ದು, ಬಿ.ಆರ್. ಅಂಬೇಡ್ಕರ್ ಸಮಾಜಸೇವಾ ರತ್ನ, ಬಿ.ಆರ್. ಅಂಬೇಡ್ಕರ್ ರತ್ನ ಮತ್ತು ಬಿ.ಆರ್. ಅಂಬೇಡ್ಕರ್ ಭೂಷಣ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದೆ.

ನಗರದ ಪುರಭವನದಲ್ಲಿ ಏಪ್ರಿಲ್ 15ರಂದು ನಡೆಯುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ, ಸಾಧಕ, ಸಾಧಕಿಯರು, ಮತ್ತು ಬಿಬಿಎಂಪಿ ಅಧಿಕಾರಿ, ನೌಕರರಿಗೆ ಅಂಬೇಡ್ಕರ್ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮಾಹಿತಿ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ ಆರ್. ದೇವದಾಸ್ ಮತ್ತು ಶಿಕ್ಷಣ ತಜ್ಞ ವೂಡೇ ಪಿ.ಕೃಷ್ಣ ಭಾಗವಹಿಸಲಿದ್ದಾರೆ. ಜನಪದ ಗಾಯಕ ಗುರುರಾಜ್ ಹೊಸಕೋಟೆ ಮತ್ತು ತಂಡದವರಿಂದ ಸಂಗೀತ ಸಂಜೆ ಏರ್ಪಡಿಸಲಾಗಿದೆ.

## ಕೈದಿಗಳಿಗೆ ಸಿಹಿ ವಿತರಣೆಗೆ ಆದೇಶ

**ಬೆಂಗಳೂರು:** ಪ್ರತಿ ವರ್ಷ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನ (ಏ.14) ಮತ್ತು ಬುದ್ಧ ಪೂರ್ಣಿಮೆಯಂದು (ಮೇ 12) ರಾಜ್ಯದ ಎಲ್ಲ ಕಾರಾಗೃಹಗಳಲ್ಲಿರುವ ಬಂದಿಗಳಿಗೆ ಸಿಹಿ ವಿತರಿಸುವಂತೆ ಗೃಹ ಇಲಾಖೆ ಇದೇ 5ರಂದು ಆದೇಶ ಹೊರಡಿಸಿದೆ. 2014ರಿಂದ ವಿಶೇಷ ದಿನಗಳಲ್ಲಿ ಬಂದಿಗಳಿಗೆ ಸಿಹಿ ವಿತರಿಸುವ ಪದ್ಧತಿ ಜಾರಿಯಲ್ಲಿದೆ. ಗಣರಾಜ್ಯೋತ್ಸವ, ಯುಗಾದಿ, ರಂಜಾನ್, ಕ್ರಿಸ್‌ಮಸ್ ಸೇರಿದಂತೆ ರಾಷ್ಟ್ರೀಯ ಹಬ್ಬಗಳು ಹಾಗೂ ಪ್ರಮುಖ ಹಬ್ಬಗಳಂದು ಕೈದಿಗಳಿಗೆ ಸಿಹಿ ವಿತರಿಸಲಾಗುತ್ತಿದೆ. ಇದಕ್ಕಾಗಿ ಬಂದಿಖಾನೆ ಇಲಾಖೆಗೆ ಪ್ರತ್ಯೇಕ ಅನುದಾನವನ್ನೂ ಒದಗಿಸಲಾಗುತ್ತಿದೆ.

### ಪ್ರಶ್ನೆ ಕೇಳಿ ಗೊಂದಲ ಪರಿಹರಿಸಿಕೊಂಡ ವಿದ್ಯಾರ್ಥಿಗಳು, ಪೋಷಕರು

# 'ಎಲ್ಲರ ಸಲಹೆಗಳಿರಲಿ... ನಿರ್ಧಾರ ನಿಮ್ಮದೇ ಆಗಿರಲಿ'

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ DH ಎಡ್ಯುವರ್ಸ್ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

**ಬೆಂಗಳೂರು:** 'ಮುಂದೇನು ಮಾಡಬೇಕು ಎಂಬ ಬಗ್ಗೆ ಎಲ್ಲ ಕಡೆಯಿಂದ ಬರುವ ಸಲಹೆಗಳನ್ನು ಸ್ವೀಕರಿಸಿ. ಕುರುಡಾಗಿ ಯಾವುದನ್ನೂ ಆಯ್ಕೆ ಮಾಡಬೇಡಿ. ಯಾವ ಕೋರ್ಸ್, ಯಾವ ಕ್ಷೇತ್ರ ಎಂಬುದನ್ನು ಅಂತಿಮವಾಗಿ ನೀವೇ ನಿರ್ಧರಿಸಿ' ಎಂದು 'ಐ ವಿಶ್ ಸಮ್‌ಒನ್ ಟೋಲ್ಡ್ ಮಿ ದಿಸ್ ಬಿಫೋರ್ ಮೈ ಫಸ್ಟ್ ಜಾಬ್' ಮತ್ತು 'ಮೈಂಡ್‌ಫುಲ್ ಮೊಮೆಂಟಮ್' ಕೃತಿಗಳ ಲೇಖಕ ಸುಶಾಂತ್ ರಜಪೂತ್ ಸಲಹೆ ನೀಡಿದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಎರಡು ದಿನ ಆಯೋಜಿಸಿದ್ದ 'ಎಡ್ಯುವರ್ಸ್: ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ' ಕಾರ್ಯಕ್ರಮದಲ್ಲಿ ಭಾನುವಾರ 'ಎಐ ಮತ್ತು ನವೀನ ತಂತ್ರಜ್ಞಾನಗಳ ಪ್ರಾಮುಖ್ಯದ ಮೇಲೆ ಕೇಂದ್ರೀಕರಿಸುವ ಪರ್ಯಾಯ ವೃತ್ತಿ ಅವಕಾಶಗಳು' ಕುರಿತು ಅವರು ಮಾಹಿತಿ ನೀಡಿದರು.

ಕುರುಡಾಗಿ ಆಯ್ಕೆ ಮಾಡಿಕೊಂಡು ಆನಂತರ ಬೇರೆಯವರನ್ನು ದೂರುತ್ತಾ ಕೂರುವ ಬದಲು ತಾರ್ಕಿಕವಾಗಿ ಯೋಚಿಸಿ ಮತ್ತು ಧೈರ್ಯದಿಂದ ಕೋರ್ಸ್‌ಗಳ ಆಯ್ಕೆ ಮಾಡಿಕೊಳ್ಳಬೇಕು. ಗೊಂದಲ ಇದ್ದರೆ 'ಎಡ್ಯುವರ್ಸ್'ನಂಥ ಶಿಕ್ಷಣ ಮೇಳಗಳಲ್ಲಿ ಪಾಲ್ಗೊಂಡು ಮಾರ್ಗದರ್ಶನ ಪಡೆಯಿರಿ ಎಂದು ಹೇಳಿದರು.

'ಇವತ್ತು ಇರುವ ತಂತ್ರಜ್ಞಾನಗಳು ಇನ್ನು ಐದು ವರ್ಷಗಳ ಬಳಿಕ ಇರುವುದಿಲ್ಲ. ಇದನ್ನು ನೆನಪು ಇಟ್ಟುಕೊಂಡು ಹೊಸತನಕ್ಕೆ ತೆರೆದುಕೊಳ್ಳಬೇಕು. ನಿಮ್ಮನ್ನು ನೀವು ವಿಕಸನಗೊಳಿಸಿ-ಕೊಳ್ಳಬೇಕು' ಎಂದರು.



ಸುಶಾಂತ್ ರಜಪೂತ್

ಅರಮನೆ ಮೈದಾನದ 'ತ್ರಿಪುರ ವಾಸಿನಿ'ಯಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಜ್ಞರಿಗೆ ಪ್ರಶ್ನೆ ಕೇಳಿ ಅನುಮಾನ ಪರಿಹರಿಸಿಕೊಂಡರು. ಪ್ರಜಾವಾಣಿ ಚಿತ್ರ

### 'ಒಳ್ಳೆಯ ಯೋಚನೆ ಕ್ರಿಯೆಯಾಗಿ ಬದಲಾಗಲಿ'

ಉತ್ತಮ ಯೋಚನೆ, ಸ್ಪಷ್ಟ ಗುರಿಗಳು ಮಾತಿನಲ್ಲಿ ಇದ್ದರೆ ಆಗುವುದಿಲ್ಲ. ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದುವೃತ್ತಿ ಸಲಹೆಗಾರ ಅಮೀನ್-ಎ-ಮುದಸ್ಸರ್ ತಿಳಿಸಿದರು. ವೃತ್ತಿ ಸಮಾಲೋಚನೆಯ ಅಗತ್ಯದ ಕುರಿತು ಅವರು ಮಾತನಾಡಿದರು.

'ನಿಮ್ಮ ಯೋಗ್ಯತೆ ಏನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಯಾವುದರಲ್ಲಿ ಆಸಕ್ತಿ ಎಂಬುದನ್ನು ಸ್ಪಷ್ಟಪಡಿಸಿ-ಕೊಳ್ಳಬೇಕು. ಅದಕ್ಕೆ ಬೇಕಾದ ಕೌಶಲವನ್ನು ರೂಢಿಸಿಕೊಳ್ಳಬೇಕು. ಇವೆಲ್ಲದರ ಜೊತೆಗೆ ಉತ್ತಮ ವ್ಯಕ್ತಿತ್ವ ಹೊಂದಿರಬೇಕು. ತಜ್ಞರನ್ನು ಭೇಟಿ ಮಾಡಿ ವಿಷಯ ತಿಳಿದುಕೊಳ್ಳಬೇಕು. ನಮ್ಮ ನೆಮ್ಮದಿಗೆ, ಸಂತೋಷಕ್ಕೆ ಪೂರಕವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು' ಎಂದು ಹೇಳಿದರು.

'ಒಂದು ಕ್ಷೇತ್ರಕ್ಕೆ ಆದ್ಯತೆ ನೀಡಿದರೂ ಹಲವು ವಿಷಯಗಳ ಬಗ್ಗೆ ಕೌಶಲವನ್ನು ಹೊಂದಿರಬೇಕು. ಆಗ ನಿಮಗೆ ಬೇಡಿಕೆ ಹೆಚ್ಚಿರುತ್ತದೆ. ಕೃತಕ ಬುದ್ಧಿಮತ್ತೆ (ಎಐ) ಇನ್ನು ಮುಂದೆ ಬದುಕಿನ ಅಂಗವಾಗಲಿದೆ. ಎಐ ನಮಗೆ ಸಹಾಯಕವಾಗಿರಬೇಕೇ ಹೊರತು ಗುರುವಾಗಬಾರದು. ಅಂಥ ಎಚ್ಚರಿಕೆಯನ್ನು ಇಟ್ಟುಕೊಂಡು ಎಐ ಬಳಸಬೇಕು' ಎಂದು ಸಲಹೆ ನೀಡಿದರು.



ಅಮೀನ್ –ಎ– ಮುದಸ್ಸರ್

### ಅಭಿಪ್ರಾಯಗಳು

ಕಳೆದ ವರ್ಷಕ್ಕಿಂತಲೂ ಹೆಚ್ಚು ವ್ಯವಸ್ಥಿತವಾಗಿ ಈ ಬಾರಿ 'ಎಡ್ಯುವರ್ಸ್' ಮೇಳವನ್ನು 'ಡಿಎಚ್–ಪ್ರಜಾವಾಣಿ' ಹಮ್ಮಿಕೊಂಡಿವೆ. ಎಲ್ಲೂ ಗೊಂದಲಗಳಾಗದಂತೆ ವಿದ್ಯಾರ್ಥಿಗಳು ಸರಾಗವಾಗಿ ಬಂದು ಮಾಹಿತಿ ಪಡೆಯಲು ಅವಕಾಶ ಸಿಕ್ಕಿದೆ. ಬೇರೆ ಬೇರೆ ಪ್ರದೇಶಗಳಿಂದ ವಿದ್ಯಾರ್ಥಿಗಳಿಗೆ ಒಂದೇ ಕಡೆ ಮಾಹಿತಿ ನೀಡಲು ಸಾಧ್ಯವಾಗಿದೆ. ನಮ್ಮಲ್ಲಿರುವ ಕೋರ್ಸ್‌ಗಳು, ಹೊಸ ಕೋರ್ಸ್‌ಗಳು, ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲು, ವಿದ್ಯಾರ್ಥಿಗಳ, ಪೋಷಕರ ಮನಃಸ್ಥಿತಿ ಅರಿಯಲು ಸಾಧ್ಯವಾಗಿದೆ.

**ಜಯಶ್ರೀ ಮತ್ತು ಕಲ್ಪನಾ,** ಶೈಕ್ಷಣಿಕ ಸಮಾಲೋಚಕರು, ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯ

ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಹಲವು ವರ್ಷಗಳಿಂದ ಹಮ್ಮಿಕೊಂಡು ಬಂದಿರುವ 'ಎಡ್ಯುವರ್ಸ್' ಎಕ್ಸ್‌ಪೊದಲ್ಲಿ 5–6 ವರ್ಷಗಳಿಂದ ನಾವೂ ಭಾಗಿಯಾಗಿದ್ದೇವೆ. 48 ವರ್ಷಗಳ ಹಳೇ ಸಂಸ್ಥೆ ನಮ್ಮದು. ಯಾವ ಕೋರ್ಸ್‌ಗೆ ಎಷ್ಟು ಶುಲ್ಕ? ಹೊಸ ಕೋರ್ಸ್‌ಗಳು ಯಾವುದು? ಈಗಿರುವ ಕೋರ್ಸ್‌ಗಳಲ್ಲೇ ಹೆಚ್ಚು ಜನಪ್ರಿಯ ಯಾವುದು? ಎಂಬುದನ್ನು ನಾವು ತಿಳಿಸಿಕೊಡುತ್ತಿದ್ದೇವೆ. ವಿದ್ಯಾರ್ಥಿಗಳು, ಪೋಷಕರು ಬಹಳ ಕುತೂಹಲದಿಂದ ಕೇಳುತ್ತಿದ್ದಾರೆ.

**ಅಶೋಕ ಭಟ್,** ಉಪ ಪ್ರಧಾನ ವ್ಯವಸ್ಥಾಪಕ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ

ಕರ್ನಾಟಕದ ಜನರಿಗೆ ಇದೊಂದು ಉತ್ತಮ ಅವಕಾಶ. ಬಹಳ ಮಂದಿಗೆ ದ್ವಿತೀಯ ಪಿಯು ಮುಗಿದ ಬಳಿಕ ಏನು ಮಾಡಬೇಕು ಎಂಬುದು ಗೊತ್ತಿರುವುದಿಲ್ಲ. ಇನ್ನು ಕೆಲವರಿಗೆ ಕೆಲವೇ ಕೋರ್ಸ್‌ಗಳ ಬಗ್ಗೆ ಗೊತ್ತಿರುತ್ತದೆ. ಆಯ್ಕೆ ಮಾಡಿಕೊಳ್ಳಲು ಅನೇಕ ಹೊಸ ವಿಚಾರಗಳಿವೆ ಎಂಬುದರ ಅರಿವು ಇರುವುದಿಲ್ಲ. ಪಿಯುಸಿ ನಂತರ ವಾಸ್ತುಶಿಲ್ಪ (ಆರ್ಕಿಟೆಕ್ಚರ್) ಕಲಿಯುವವರಿಗೂ ಪ್ರವೇಶ ಪರೀಕ್ಷೆ ಇದೆ ಎಂಬುದು ಹೆಚ್ಚಿನವರಿಗೆ ಗೊತ್ತೇ ಇಲ್ಲ. 'ನೀಟ್' ಗೊತ್ತಿದೆ ಆದರೆ, 'ನಾಟ' ಗೊತ್ತಿರುವುದಿಲ್ಲ. ಅದೆಲ್ಲವನ್ನು ಇಲ್ಲಿ ತಿಳಿದುಕೊಳ್ಳಲು ಸಾಧ್ಯ.

**ಸುನೀಲ್ ಕುಮಾರ್ ಎಂ.,** ಪ್ರೊಫೆಸರ್, ರೇವಾ ವಿಶ್ವವಿದ್ಯಾಲಯ

ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. #ಶೈನ್ 100 ಖರೀದಿ ಮಾಡಿದಾಗ ₹5100 ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಲಭ್ಯವಿದೆ. #ಮೊದಲೇ ಸೂಚನೆ ನೀಡದೇ ಕೊಡುಗೆಗಳು/ವೈಶಿಷ್ಟ್ಯಗಳನ್ನು ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. #ಸ್ಕೀಮ್ ಅನ್ನು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳು ಒದಗಿಸುತ್ತಿದ್ದಾರೆ ಮತ್ತು ಅಧಿಕೃತ ಮುಖ್ಯ ಡೀಲರ್‌ಗಳು ಮತ್ತು ಸಹ ಡೀಲರ್‌ಗಳಿಂದ Shine 100 ಖರೀದಿ ಮಾಡಿದಾಗ ಪಡೆಯಬಹುದು. *ಸಾಲದ ಅನುಮೋದನೆಯು ಹಣಕಾಸುದಾರರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿ ಕಾಗದಪತ್ರಗಳು ಅಗತ್ಯವಿರಬಹುದು. *ಅರ್ಜಿದಾರರ ಸಾಲ ಪ್ರೊಫೈಲ್ ಅನ್ನು ಸಾಲದಾತರು ವಿಶ್ಲೇಷಿಸಿದ ಆಧಾರದಲ್ಲಿ ಬಡ್ಡಿ ದರಗಳು, ಡೌನ್ ಪೇಮೆಂಟ್ ಮತ್ತು ಅವಧಿ ಆಯ್ಕೆಗಳು ಇರುತ್ತವೆ. ಶೂನ್ಯ ಹೆಚ್ಚುವರಿ ಶುಲ್ಕವು (0/- ಪ್ರಕ್ರಿಯೆ ಶುಲ್ಕ , 0/- ಕಾಗದಪತ್ರ ಶುಲ್ಕ ಮತ್ತು 0/- ಮುಂಗಡ EMI) Shine 100 ಮಾಡೆಲ್‌ನ ಮೇಲೆ ಮಾತ್ರ ಅನ್ವಯಿಸುತ್ತದೆ. *ಮೊದಲೇ ಸೂಚನೆ ನೀಡದೇ ಕೊಡುಗೆಗಳು/ವೈಶಿಷ್ಟ್ಯಗಳನ್ನು ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. ಪೈನ್ ಲ್ಯಾಬ್ಸ್ ಯಂತ್ರಗಳ ಮೂಲಕ IDFC ಫಸ್ಟ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳು ಮತ್ತು HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳು ಮೂಲಕ ಮಾತ್ರ ಮಾಡಿದ ಆಯ್ದ Honda2wheelers ಮಾಡೆಲ್‌ಗಳ EMI ವಹಿವಾಟುಗಳ ಮೇಲೆ ಹೆಚ್ಚುವರಿ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿದೆ ಗರಿಷ್ಠ ₹5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗ್ರಾಹಕರು ಪಡೆಯಬಹುದು. ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್ ಮೇಲೆ ಮಾನ್ಯವಾಗಿದೆ. ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. ಮೊದಲೇ ಸೂಚನೆ ನೀಡದೇ ಕೊಡುಗೆಗಳು/ವೈಶಿಷ್ಟ್ಯಗಳನ್ನು ಯಾವುದೇ ಸಮಯದಲ್ಲಿ ಮಾರ್ಪಾಡು ಮಾಡಬಹುದು ಅಥವಾ ಹಿಂಪಡೆಯಬಹುದು. ಎಲ್ಲ ಕೊಡುಗೆಗಳು ಏಪ್ರಿಲ್ 30, 2025 ರ ವರೆಗೆ ಮಾನ್ಯವಾಗಿರುತ್ತದೆ. ಕ್ರಿಯೇಟಿವ್‌ನಲ್ಲಿ ತೋರಿಸಿದ ವೈಶಿಷ್ಟ್ಯಗಳು ಎಲ್ಲ ವೇರಿಯಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿ ಲಭ್ಯವಿರುವ ಅಸಲಿ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಾಗಿಲ್ಲದಿರಬಹುದು.

**Honda Motorcycle & Scooter India Pvt. Ltd., Registered Office:** Plot No. 1 , Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

**Honda Exclusive Authorised Dealerships:** **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 080-27830234, 9880417779; **City Honda** - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda** - **DOMLUR:** 49656565, 9342432156; **INDIRANAGAR:** 9342432157; **Dhruvdesh Honda** - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; **Raja Honda** - **KORAMANGALA:** 08067329000,9035310055; **Prime Honda** - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda** - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda** - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda** - **DODDABALLAPURA:** 7022620885; **NELAMANAGALA:** 080-27722333, 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Century Honda** - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda** - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9448214014; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda** - **BIDADI:** 9945966771, 9164871007; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999, 9686608579; **VIJAYAPURA:** 9108871999, 7899870207.
**For Bulk/Institutional enquiries, please write us at: institutionalsales@honda.hmsi.in**

ಹುಬ್ಬಳ್ಳಿ ಶಹರದಲ್ಲಿ ಕೃತ್ಯ • ಪೊಲೀಸ್ ಠಾಣೆ ಎದುರು ಜಮಾಯಿಸಿ ಸಾರ್ವಜನಿಕರು ಕಿಡಿ

# ಬಾಲಕಿ ಕೊಲೆಗೆ ಆಕ್ರೋಶ: ಭಾರಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಐದು ವರ್ಷದ ಮಗುವಿನ ಅತ್ಯಾಚಾರಕ್ಕೆ ಯತ್ನಿಸಿ ಕೊಲೆಗೈದ ಬಿಹಾರ ಮೂಲದ ಆರೋಪಿಯನ್ನು ಎನ್‌ಕೌಂಟರ್ ಮಾಡಬೇಕು' ಎಂದು ಆಗ್ರಹಿಸಿ ಭಾನುವಾರ ಇಲ್ಲಿನ ಅಶೋಕನಗರ ಪೊಲೀಸ್ ಠಾಣೆ ಎದುರು ವಿಜಯನಗರ, ಆದರ್ಶನಗರ, ಸಂತೋಷನಗರ, ದೇವಾಂಗಪೇಟೆ ಹಾಗೂ ಸುತ್ತಮುತ್ತಲಿನ ನಿವಾಸಿಗಳು ಪ್ರತಿಭಟನೆ ನಡೆಸಿದರು. ಠಾಣೆ ಎದುರು ಒಂದು ಸಾವಿರಕ್ಕೂ ಹೆಚ್ಚು ಮಂದಿ ಜಮಾಯಿಸಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೊಪ್ಪಳ ಮೂಲದ ಕುಟುಂಬವೊಂದು ಅನೇಕ ವರ್ಷಗಳ ಹಿಂದೆ ಹುಬ್ಬಳ್ಳಿಗೆ ಬಂದು ವಾಸವಾಗಿತ್ತು. ತಾಯಿ ಕೆಲವು ಮನೆಗಳಿಗೆ ತೆರಳಿ ಮನೆಗೆಲಸ ಮಾಡುತ್ತಿದ್ದರು. ಆ ವೇಳೆ ಚಿಕ್ಕ ಮಗಳನ್ನು ಕರೆದೊಯ್ಯುತ್ತಿದ್ದರು. ಮಗು ಮನೆಯ ಹೊರಗೆ ಆಟವಾಡುತ್ತಿದ್ದಾಗ, ಆರೋಪಿ ಅವಳನ್ನು ಅಪಹರಿಸಿದ್ದ. ಈ ಘಟನೆಯಿಂದ ಇಡೀ ನಗರವೇ ಬೆಚ್ಚಿಬಿದ್ದಿತ್ತು.

'ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಪ್ರಕ್ರಿಯೆ ನಡೆಸುವ ಬದಲು, ನಮ್ಮೆದುರಿಗೇ ಗುಂಡು ಹೊಡೆದು ಸಾಯಿಸಬೇಕು. ನಿಮ್ಮಿಂದ ಆಗದಿದ್ದರೆ, ಅವನನ್ನು ನಮಗೆ ಒಪ್ಪಿಸಿ, ತಕ್ಕ ಶಿಕ್ಷೆ ನೀಡುತ್ತೇವೆ' ಎಂದು ಪ್ರತಿಭಟನಕಾರರು ಕಿಡಿಕಾರಿದರು. ಅವರನ್ನು ಸಮಾಧಾನ ಪಡಿಸಲು ಪೊಲೀಸ್ ಕಮಿಷನರ್ ಹಾಗೂ ಹಿರಿಯ ಅಧಿಕಾರಿಗಳು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು.

ಮಧ್ಯಾಹ್ನ 2 ಗಂಟೆಗೆ ಆರಂಭವಾದ ಪ್ರತಿಭಟನೆ ಸಂಜೆ 5.30ರವರೆಗೂ ಮುಂದುವರಿದಿತ್ತು. ಕೆಲ ಸಂಘಟನೆಗಳು ಪ್ರತಿಭಟನಾ ಮೆರವಣಿಗೆ ಮಾಡುತ್ತ ಠಾಣೆ ಎದುರು ಜಮಾಯಿಸಿದವು. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಪಕ್ಷಾತೀತವಾಗಿ ಮುಖಂಡರು, ಸಾರ್ವಜನಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮಹಿಳಾ ಸಂಘಟನೆಗಳು ಸೇರಿದಂತೆ ಕೆಲ ಸಂಘಟನೆಯವರು ಪ್ರತಿಭಟನಾ ಮೆರವಣಿಗೆ ಮಾಡಿ ಠಾಣೆ ಎದುರು ಜಮಾಯಿಸಿ ಟೈರ್‌ಗೆ ಬೆಂಕಿ ಹಚ್ಚಿ, ವಾಹನ ಸಂಚಾರ ಸ್ಥಗಿತಗೊಳಿಸಿ ಆಕ್ರೋಶ ವ್ಯಕ್ತಪಡಿಸಿದರು. ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರ ಮತ್ತು ಪ್ರತಿಭಟನಕಾರರ ನಡುವೆ ವಾಗ್ವಾದ ನಡೆದು, ನೂಕುನುಗ್ಗಲು ಏರ್ಪಟ್ಟು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಸ್ಥಳಕ್ಕೆ ಬಂದು, ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಪ್ರತಿಭಟನಕಾರರು, 'ಏನು ಕಾನೂನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ಬಹಿರಂಗಪಡಿಸಬೇಕು' ಎಂದು ಪಟ್ಟು ಹಿಡಿದರು. ಸೂಕ್ತ ಸ್ಪಂದನೆ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿ ಪ್ರತಿಭಟನೆ ಮುಂದುವರಿಸಿದರು.

'ಆರೋಪಿ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಪ್ರಕ್ರಿಯೆ ಎನ್ನುವ ಬದಲು, ನಮ್ಮೆದುರಿಗೇ ಗುಂಡು ಹೊಡೆದು ಸಾಯಿಸಬೇಕು. ನಿಮ್ಮಿಂದ ಆಗದಿದ್ದರೆ, ಅವನನ್ನು ನಮಗೆ ಒಪ್ಪಿಸಿ, ತಕ್ಕ ಶಿಕ್ಷೆ ನೀಡುತ್ತೇವೆ' ಎಂದರು.

ಪೊಲೀಸ್ ಕಮಿಷನರ್ ಸೇರಿದಂತೆ ಹಿರಿಯ ಅಧಿಕಾರಿಗಳು, ನಾಲ್ಕು-ಐದು ಸುತ್ತು ಪ್ರತಿಭಟನಕಾರರ ಮನವೊಲಿಸಲು ಯತ್ನಿಸಿದರೂ, ಫಲಕಾರಿಯಾಗಲಿಲ್ಲ. ಸಂಜೆಯವರೆಗೂ ಠಾಣೆ ಎದುರು ಪ್ರತಿಭಟನೆ ಮುಂದುವರಿದಿತ್ತು. ನಂತರ ಚನ್ನಮ್ಮ ವೃತ್ತ ಹಾಗೂ ಕೆಎಂಸಿ–ಆರ್‌ಐ ಆಸ್ಪತ್ರೆ ಎದುರಿನ ಹುಬ್ಬಳ್ಳಿ–ಧಾರವಾಡ ಮುಖ್ಯ ರಸ್ತೆ ಬಂದ್ ಮಾಡಿ ರಾತ್ರಿಯವರೆಗೂ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮುಖಂಡ ಪ್ರೊ. ಐ.ಜಿ. ಸನದಿ, ಹುಡಾ ಅಧ್ಯಕ್ಷ ಶಾಕೀರ್ ಸನದಿ, ಪಾಲಿಕೆ ಸದಸ್ಯರಾದ ಸುವರ್ಣಾ ಕಲ್ಲಕುಂಟ್ಲಾ, ನಿರಂಜನ ಹಿರೇಮಠ, ಕಾಂಗ್ರೆಸ್ ಮುಖಂಡ ಅನಿಲಕುಮಾರ ಪಾಟೀಲ ಹಾಗೂ ಮಾರುತಿ ದೊಡ್ಡಮನಿ ಸೇರಿದಂತೆಅನೇಕರುಪಾಲ್ಗೊಂಡಿದ್ದರು.

ಬಾಲಕಿ ಕೊಲೆ ಖಂಡಿಸಿ ಭಾನುವಾರ ಸಂಜೆ ವಿವಿಧ ಸಂಘಟನೆಗಳಿಂದ ಹುಬ್ಬಳ್ಳಿ ಕೆಎಂಸಿ ಎದುರು ಪ್ರತಿಭಟನೆ ನಡೆಯಿತು

## ಆರೋಪಿ ಹತ್ಯೆ; ಜನರ ಸಂಭ್ರಮ

ಹುಬ್ಬಳ್ಳಿ ಧಾರವಾಡ ಮಹಾನಗರ ಪೊಲೀಸ್ ಘಟಕದಲ್ಲಿ ಇದು ಮೊದಲನೇ ಎನ್‌ಕೌಂಟರ್ ಆಗಿದ್ದು, ಇಂಥ ಕೃತ್ಯ ಎಸಗುವವರಿಗೆ ತಕ್ಕ ಸಂದೇಶ ರವಾನೆಯಾಗಿದೆ ಎಂದು ಸಾರ್ವಜನಿಕರು ಸಂಭ್ರಮಿಸಿದರು.

ಈ ಹಿಂದೆ ವಿದ್ಯಾರ್ಥಿ ನೇಹಾ ಹಿರೇಮಠ ಮತ್ತು ಅಂಜಲಿ ಅಂಬಿಗೇರ ಅವರನ್ನು ಕೊಲೆ ಮಾಡಿದಾಗಲೂ, ಆರೋಪಿಗಳನ್ನು ಎನ್‌ಕೌಂಟರ್ ಮಾಡಬೇಕು ಎಂದು ಪ್ರತಿಭಟಿಸಲಾಗಿತ್ತು. ಆದರೆ, ಅಂದಿನ ಪೊಲೀಸರು ಮೃದು ಧೋರಣೆ ಅನುಸರಿಸಿ ಆರೋಪಿಗಳ ರಕ್ಷಣೆಗೆ ಮುಂದಾದರು. ಆದರೆ, ಈ ಬಾರಿ ಪೊಲೀಸರ ಗಟ್ಟಿ ನಿರ್ಧಾರ ಮೆಚ್ಚುವಂತಹದ್ದಾಗಿದೆ' ಎಂದು ಕರ್ನಾಟಕ ದಲಿತ ವಿಮೋಚನಾ ಸಮಿತಿ ಶ್ರೀಧರ ಕಂದಗಲ್ ಹೇಳಿದರು.

'ಬಾಲಕಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ, ಆಕೆಯನ್ನು ಕೊಲೆ ಮಾಡಿದ ಆರೋಪಿಯನ್ನು ಪೊಲೀಸರು ಎನ್‌ಕೌಂಟರ್ ಮಾಡಿರುವುದು ಶ್ಲಾಘನೀಯ. ಆರೋಪಿ ಯಾರೇ ಇರಲಿ ಸಮಾಜಘಾತುಕ ಶಕ್ತಿಗಳಿಗೆ ಇದೇ ಸರಿಯಾದ ಶಿಕ್ಷೆ' ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದ್ದಾರೆ.

## ಹೈದರಾಬಾದ್ ಎನ್‌ಕೌಂಟರ್ ನೆನಪು

ಬೆಂಗಳೂರು: ಹುಬ್ಬಳ್ಳಿಯಲ್ಲಿ ನಡೆದ ಎನ್‌ಕೌಂಟರ್ ಘಟನೆಯು ದೇಶದಲ್ಲಿ ಈ ಹಿಂದೆ ನಡೆದಿರುವ ಎನ್‌ಕೌಂಟರ್‌ಗಳನ್ನು ನೆನಪಿಸಿದೆ.

ಜನರ ಭಾರಿ ಆಕ್ರೋಶಕ್ಕೆ ಕಾರಣವಾಗಿದ್ದ ಕೆಲವು ಪ್ರಕರಣಗಳಲ್ಲಿ ಆರೋಪಿಗಳನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ್ದಾರೆ.

2019ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಎನ್‌ಕೌಂಟರ್ ಘಟನೆಯು ದೇಶದಾದ್ಯಂತ ಸುದ್ದಿಯಾಗಿತ್ತು. 26 ವರ್ಷದ ಪಶುವೈದ್ಯೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆಯನ್ನು ಕೊಂದು ಸುಟ್ಟುಹಾಕಿದ್ದ ಪ್ರಕರಣದ ನಾಲ್ವರು ಆರೋಪಿಗಳನ್ನು ತೆಲಂಗಾಣ ಪೊಲೀಸರು ಎನ್‌ಕೌಂಟರ್‌ನಲ್ಲಿ ಕೊಂದಿದ್ದರು.

**ಇತರ ಪ್ರಕರಣಗಳು**

- **ಮಾರ್ಚ್ 21, 2025:** ಉತ್ತರ ಪ್ರದೇಶದ ಲಖನೌದಲ್ಲಿ ಮಹಿಳೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಆಕೆಯ ಹತ್ಯೆಗೈದ ಆರೋಪಿ ಅಜಯ್ ದ್ವಿವೇದಿ ಎಂಬಾತ ಪೊಲೀಸ್ ಎನ್‌ಕೌಂಟರ್‌ನಲ್ಲಿ ಬಲಿಯಾಗಿದ್ದ.
- **ಸೆ.23, 2024:** ಮಹಾರಾಷ್ಟ್ರದ ಬದ್ಲಾಪುರದಲ್ಲಿ ಇಬ್ಬರು ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಪ್ರಮುಖ ಆರೋಪಿ ಅಕ್ಷಯ್ ಶಿಂದೆ ಪೊಲೀಸರ ಗುಂಡೇಟಿಗೆ ಬಲಿಯಾಗಿದ್ದ. ಎನ್‌ಕೌಂಟರ್‌ಗೆ ಕಾರಣರಾಗಿದ್ದಾರೆ ಎನ್ನಲಾದ ಐವರು ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಬಾಂಬೆ ಹೈಕೋರ್ಟ್ ಈಚೆಗೆ ಆದೇಶಿಸಿದೆ.
- **ಜೂನ್ 1, 2024:** ಉತ್ತರ ಪ್ರದೇಶದ ಮಥುರಾದಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದ ಆರೋಪಿ, 29 ವರ್ಷದ ಮನೋಜ್ ಎಂಬಾತ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದ.

## ಸುದ್ದಿ 2 ನಿಮಿಷ

### 'ಬಿಜೆಪಿಯವರು ಮನೆ ನಿರ್ಮಿಸಿದ್ದು ಸಾಬೀತಾದರೆ ರಾಜಕೀಯ ನಿವೃತ್ತಿ'

ಹುಬ್ಬಳ್ಳಿ: 'ಪ್ರಧಾನಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಸೇರಿದಂತೆ ಯಾವುದೇ ಯೋಜನೆಯಡಿ ಬಿಜೆಪಿಯವರು ತಮ್ಮ ಅವಧಿಯಲ್ಲಿ ಒಂದೇ ಒಂದು ಮನೆ ನಿರ್ಮಿಸಿಕೊಟ್ಟಿದ್ದನ್ನು ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಸವಾಲು ಹಾಕಿದರು.

ಹುಬ್ಬಳ್ಳಿಯ ಮಂಟೂರ ರಸ್ತೆಯ ಹೊಸಯಲ್ಲಾಪುರದಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಪಿಎಂಎವೈ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳನ್ನು ಭಾನುವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ 1.80 ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಅದರಲ್ಲಿ ಕಳೆದ ವರ್ಷ 36,789 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಈ ವರ್ಷ 42,345 ಮನೆಗಳನ್ನು ಹಂಚಿಕೆ ಮಾಡಲಾಗುವುದು' ಎಂದರು.



'ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ತನ್ನ ಸಾಧನೆ ಆಧರಿಸಿ ಮತ ಕೇಳಿದರೆ, ಬಿಜೆಪಿಯವರು ಹಿಂದೂ ಮುಸ್ಲಿಮರ ಹೆಸರಿನಲ್ಲಿ ಚುನಾವಣೆ ಎದುರಿಸುತ್ತಾರೆ. ಅವರಿಗೆ ಬಡವರ ಬಗ್ಗೆ ಕಾಳಜಿ ಇಲ್ಲ, ಅಧಿಕಾರ ಮಾತ್ರ ಬೇಕು. ಎಚ್.ಡಿ.ಕುಮಾರಸ್ವಾಮಿ ಒಂದು ಕಡೆ ಇರಲು ಸಾಧ್ಯವಿಲ್ಲ. ಹೀಗಾಗಿ ಬಿಜೆಪಿ, ಜೆಡಿಎಸ್ ಮೈತ್ರಿ ಹೆಚ್ಚು ದಿನ ಉಳಿಯುವುದಿಲ್ಲ' ಎಂದರು.

### ನಾಗರಿಕ ಸಮಿತಿ ಸದಸ್ಯರಿಂದ 'ದೇವಾಲಯ ಪ್ರವೇಶ'

ಮಂಗಳೂರು: ದೇವಸ್ಥಾನದ ಒಳ ಆವರಣದಲ್ಲಿ ನಿಂತು ದರ್ಶನ ಪಡೆಯಲು ಎಲ್ಲರಿಗೂ ಮುಕ್ತ ಅವಕಾಶ ನೀಡಬೇಕು ಎಂಬ ಬೇಡಿಕೆ ಇರಿಸಿದ್ದ ಕೇರಳದ ಕಾಸರಗೋಡು ಜಿಲ್ಲೆಯ ಪಿಲಿಕೋಡ್ ಶ್ರೀ ರಯರಮಂಗಲ ಭಗವತಿ ದೇವಸ್ಥಾನದ ನಾಗರಿಕರ ಸಮಿತಿಯವರು ಭಾನುವಾರ 'ದೇವಸ್ಥಾನ ಪ್ರವೇಶ' ಮಾಡಿದರು.

ಕಣ್ಣೂರು ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ, ದೇವಸ್ವಂ ಬೋರ್ಡ್ (ಮುಜರಾಯಿ) ಅಧೀನದ ಈ ದೇವಸ್ಥಾನದಲ್ಲಿ ನಿತ್ಯ ಪೂಜೆ ಮತ್ತು ವಿಶೇಷ ಸಂದರ್ಭಗಳಲ್ಲಿ ದೇವರ ಕೈಂಕರ್ಯಗಳಲ್ಲಿ ಪಾಲ್ಗೊಳ್ಳುವ ವಿವಿಧ ಸಮುದಾಯದ ಜನರಿಗೆ ಮಾತ್ರ ಒಳಾಂಗಣಕ್ಕೆ ಪ್ರವೇಶವಿದೆ. ಈ ಅವಕಾಶವನ್ನು ಎಲ್ಲರಿಗೂ ಒದಗಿಸಬೇಕು ಎಂದು ನಾಗರಿಕರ ಸಮಿತಿ ಒತ್ತಾಯಿಸಿತ್ತು. ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಕಾರ್ಯಗಳು ಈಚೆಗೆ ನಡೆದಿದ್ದವು. ನಂತರವೂ ಹಿಂದಿನ ಸಂಪ್ರದಾಯ ಮುಂದುವರಿಸಿದ್ದನ್ನು ವಿರೋಧಿಸಿ ಒಳಗೆ ಹೋದರು.

'ಎಲ್ಲ ದೇವಸ್ಥಾನಗಳಲ್ಲಿ ಗರ್ಭಗುಡಿ ಮತ್ತು ಒಳ ಆವರಣದ ಮಧ್ಯದಲ್ಲಿ ನಿಂತು ದರ್ಶನ ಪಡೆಯಲಾಗುತ್ತದೆ. ಇಲ್ಲಿ ಮಾತ್ರ ವ್ಯತಿರಿಕ್ತ. ಈ ಪದ್ಧತಿಯನ್ನು ಬದಲಿಸಬೇಕು ಎಂಬ ಒತ್ತಾಯ ಪುನರ್ ಪ್ರತಿಷ್ಠಾ ಉತ್ಸವದ ಸಂದರ್ಭದಲ್ಲಿ ಕೇಳಿಬಂದಿತ್ತು. ಸಭೆಯಲ್ಲಿ ನಿರ್ಣಯವನ್ನೂ ಕೈಗೊಳ್ಳಲಾಗಿತ್ತು' ಎಂದು ನಾಗರಿಕ ಸಮಿತಿಯ ಅಧ್ಯಕ್ಷ ಉಮೇಶ್ ಪಿಲಿಕೋಡ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ದೇವಸ್ಥಾನದಲ್ಲಿ ಜಾತಿಯ ಆಧಾರದಲ್ಲಿ ಯಾರಿಗೂ ಪ್ರವೇಶ ನಿಷೇಧ ಇಲ್ಲ. ಪೂಜಾದಿ ಕೈಂಕರ್ಯಗಳಲ್ಲಿ ಪಾಲ್ಗೊಳ್ಳುವವರು ಮಾತ್ರ ಒಳಾಂಗಣಕ್ಕೆ ಹೋಗುತ್ತಾರೆ. ಅದೇ ಸಮುದಾಯದ ಇತರರಿಗೆ ಒಳಾಂಗಣಕ್ಕೆ ಪ್ರವೇಶ ಇಲ್ಲ. ಹೀಗಾಗಿ ನಿರ್ದಿಷ್ಟ ಜಾತಿಯವರು ಮಾತ್ರ ಒಳಗೆ ಹೋಗುತ್ತಾರೆ ಎಂಬುದು ಅಪಪ್ರಚಾರ' ಎಂದು ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ರವೀಂದ್ರನ್ ತಿಳಿಸಿದರು.

## ಪಿಎಸ್ಐ ಅನ್ನಪೂರ್ಣ ಸಾಹಸ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಾಲಕಿ ಹತ್ಯೆ ಮಾಡಿದ ಆರೋಪಿ ರಿತೀಶ ಕುಮಾರ್ ಓಡಿ ಹೋಗುತ್ತಿದ್ದಾಗ ಮೊದಲು ಮೂರು ಸುತ್ತು ಗುಂಡು ಹಾರಿಸಿ, ಬಳಿಕ ಆರೋಪಿಯು ಅದಕ್ಕೆ ಬೆದರದೇ ಇದ್ದಾಗ ಆತನ ಕಾಲಿಗೆ ಹಾಗೂ ಬೆನ್ನಿಗೆ ಗುಂಡು ಹೊಡೆದ ಅಶೋಕನಗರ ಪೊಲೀಸ್ ಠಾಣೆಯ ಪಿಎಸ್‌ಐ ಅನ್ನಪೂರ್ಣ ಆರ್. ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕಿನವರು.

ಅನ್ನಪೂರ್ಣ

2017ರ ಬ್ಯಾಚ್‌ನ ಅಧಿಕಾರಿಯಾಗಿರುವ ಇವರು, ಹುಬ್ಬಳ್ಳಿ ಶಹರ ಠಾಣೆ, ಸಿಇಎನ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿ, ಇದೀಗ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಪಿ ಪರಾರಿಯಾಗುವಾಗ ಹಲ್ಲೆಗೊಳಗಾಗಿರುವ ಅವರು, ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಪೊಲೀಸ್ ಗುಂಡಿಗೆ ಆರೋಪಿ ಬಲಿ.....

ಒಂದನೇ ಪುಟದಿಂದ...

'ಪೊಲೀಸ್ ಸಿಬ್ಬಂದಿ ಯಶವಂತ ಮೊರಬ ಮತ್ತು ವೀರೇಶ ಅವರೂ ಘಟನೆಯಲ್ಲಿ ಗಾಯಗೊಂಡಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ವಿವರಿಸಿದರು.

**ಏನಿದು ಘಟನೆ?:** 'ಭಾನುವಾರ ಬೆಳಿಗ್ಗೆ 10.45ರ ಸುಮಾರಿಗೆ ವಿಜಯನಗರದಲ್ಲಿ ಐದು ವರ್ಷದ ಮಗು ನಾಪತ್ತೆಯಾಗಿತ್ತು. ನಂತರ, ಮಗು ನಾಪತ್ತೆಯಾದ ಸ್ಥಳದ ಎದುರಿರುವ ಶೆಡ್‌ನಲ್ಲಿ ಮೃತದೇಹ ಪತ್ತೆಯಾಗಿತ್ತು' ಎಂದರು.

'ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ನಡೆಸಿದಾಗ, ಕೃತ್ಯದ ಕುರಿತು ಮಾಹಿತಿ ನೀಡಿದ್ದ. ಆದರೆ, ತನ್ನ ವಿಳಾಸ ಹಾಗೂ ಗುರುತಿನ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿ ನೀಡಿರಲಿಲ್ಲ' ಎಂದು ಹೇಳಿದರು.

'ಬಿಹಾರ ಮೂಲದ ಅವನು, ವಿವಿಧ ಊರುಗಳಲ್ಲಿ ಕೆಲಸ ಮಾಡಿದ್ದ. ಹುಬ್ಬಳ್ಳಿಯಲ್ಲೂ ಕೆಲಸ ಮಾಡುತ್ತ, ತಾರಿಹಾಳ ಸೇತುವೆ ಬಳಿಯ ಹಳೇ ಶೆಡ್‌ನಲ್ಲಿ ವಾಸಿಸುತ್ತಿರುವುದಾಗಿ ತಿಳಿಸಿದ್ದ. ಅವನ ಜೊತೆ ಯಾರಿದ್ದಾರೆಂದು ತಿಳಿದುಕೊಳ್ಳಲು, ಅವನನ್ನು ಸ್ಥಳಕ್ಕೆ ಕರೆದುಕೊಂಡು ಹೋದಾಗ ಎನ್‌ಕೌಂಟರ್ ನಡೆದಿದೆ' ಎಂದರು.

**ಕೊಲೆ ಮಾಡಿದ್ದು ಹೇಗೆ?:** 'ಮೂಲತಃ ಬಿಹಾರ ಪಾಟ್ನಾದ ನಿವಾಸಿಯಾದ ಆರೋಪಿ ರಿತೀಶ ಕುಮಾರ್ ಭಾನುವಾರ ಬೆಳಿಗ್ಗೆ 10.40ರ ಸುಮಾರು ವಿಜಯನಗರದ ವಾಸವಾಗಿದ್ದ ಬಾಲಕಿಗೆ ತಿಂಡಿ ತಿನಿಸುಗಳನ್ನು ನೀಡುವುದಾಗಿ ಪುಸಲಾಯಿಸಿ ಕರೆದಿದ್ದಾನೆ. ನಂತರ ಅವಳನ್ನು ಎತ್ತಿಹಾಕಿಕೊಂಡು ಎದುರಿನ ಮನೆಯಲ್ಲಿರುವ ಶೆಡ್‌ಗೆ ಕರೆದೊಯ್ದು ಅಸಭ್ಯವಾಗಿ ವರ್ತಿಸಿದ್ದಾನೆ. ಆಕೆ ಕೂಗಿಕೊಂಡಾಗ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಬಾಲಕಿಯ ಶವ ನೋಡಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಆತನನ್ನು ಹಿಡಿದು ಅಶೋಕ ನಗರ ಠಾಣೆಯ ಪೊಲೀಸರಿಗೆ ಒಪ್ಪಿಸಿದ್ದಾರೆ' ಎಂದು ಶಶಿಕುಮಾರ್ ತಿಳಿಸಿದರು.

'ಮಗುವಿನ ಮೇಲೆ ಅತ್ಯಾಚಾರವಾಗಿರುವ ಬಗ್ಗೆ ಮಾಹಿತಿಯಿಲ್ಲ. ವೈದ್ಯಕೀಯ ವರದಿ ಬಂದ ನಂತರ ತಿಳಿಯಲಿದೆ. ಪೋಕ್ಸೊ ಕಾಯ್ದೆ ಅಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದರು.

ಆರೋಪಿ ಎನ್‌ಕೌಂಟರ್‌ನಿಂದ ಮೃತಪಟ್ಟ ವಿಷಯ ತಿಳಿದು ಸಾರ್ವಜನಿಕರು ಪ್ರತಿಭಟನೆ ಕೈಬಿಟ್ಟು ಕೆಎಂಸಿ ಆಸ್ಪತ್ರೆ ಎದುರು ಸಂಭ್ರಮಿಸಿದರು. ಪೊಲೀಸ್ ಕಮಿಷನರ್ ಶಶಿಕುಮಾರ್ ಅವರಿಗೆ ಜೈಕಾರ ಹಾಕಿದರು.

**ಡ್ರಗ್ಸ್ ಮತ್ತು ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿದೆ. ಇದರಿಂದಾಗಿ ಇಂಥ ಪ್ರಕರಣ ಹೆಚ್ಚುತ್ತಿವೆ. ರಾಜ್ಯ ಸರ್ಕಾರ ಇದಕ್ಕೆ ಕಡಿವಾಣ ಹಾಕಬೇಕು**

**ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

## ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ರಘುನಾಥ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಉದ್ಯಮಿ ಎಸ್. ರಘುನಾಥ್ ಆಯ್ಕೆಯಾಗಿದ್ದಾರೆ.

ಪ್ರತಿಸ್ಪರ್ಧಿ ಶ್ರೀರಂಗಪಟ್ಟಣದ ವೈದಿಕ ವಿದ್ವಾಂಸ ಭಾನುಪ್ರಕಾಶ್ ಶರ್ಮ ಅವರನ್ನು 2,164 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ.

ರಾಜ್ಯದಲ್ಲಿ 66 ಸಾವಿರ ಮತದಾರರಿದ್ದಾರೆ. ಬೆಂಗಳೂರು ನಗರ ಪ್ರದೇಶದಲ್ಲೇ 34 ಸಾವಿರ ಮತದಾರರು ಇದ್ದಾರೆ. ಈ ಪೈಕಿ 24,634 ಮಂದಿ ಮತ ಚಲಾಯಿಸಿದರು. ಶರ್ಮ ಅವರಿಗೆ 11,235 ಮತ, ಎಸ್.ರಘುನಾಥ್ ಅವರು 13,399 ಮತ ಪಡೆದರು.

ಕಳೆದ ಬಾರಿ ಚುನಾವಣೆಯಲ್ಲಿ ಎಸ್. ರಘುನಾಥ್ ಅವರು ಅಶೋಕ ಹಾರನಹಳ್ಳಿ ಅವರ ವಿರುದ್ಧ 447 ಮತಗಳಿಂದ ಪರಾಭವಗೊಂಡಿದ್ದರು.

ಈ ಬಾರಿ ಅಶೋಕ ಹಾರನಹಳ್ಳಿ ಅವರ ಬೆಂಬಲ ದೊಂದಿಗೆ ಭಾನುಪ್ರಕಾಶ್ ಶರ್ಮ ಸ್ಪರ್ಧಿಸಿದ್ದರು. ಕಳೆದ ಬಾರಿ ಸೋತಿದ್ದ ಆರ್. ಲಕ್ಷ್ಮಿಕಾಂತ್ ಅವರು, ತಮ್ಮ ತಂಡದೊಂದಿಗೆ ರಘುನಾಥ್ ಅವರನ್ನು ಬೆಂಬಲಿಸಿದ್ದರು.

ಎಸ್. ರಘುನಾಥ್

ಇದೇ ಮೊದಲಿಗೆ ರಾಜ್ಯದ ಪ್ರತಿ ಜಿಲ್ಲೆಗೊಬ್ಬರು ಪ್ರತಿನಿಧಿ ಆಯ್ಕೆ ಮಾಡಲು ಚುನಾವಣೆ ನಡೆಸಲಾಗಿದೆ. ಬೆಂಗಳೂರು ನಗರ ಸೇರಿದಂತೆ ರಾಜ್ಯದ 21 ಜಿಲ್ಲೆಗಳಲ್ಲಿ (1000ಕ್ಕೂ ಮತ ಇರುವ ಜಿಲ್ಲೆಗಳಲ್ಲಿ) ಮತಗಟ್ಟೆ ಸ್ಥಾಪನೆ ಮಾಡಲಾಗಿತ್ತು. ಆಯಾ ಜಿಲ್ಲೆಯವರು ಅಲ್ಲಿಯೇ ಮತ ಚಲಾಯಿಸುವ ವ್ಯವಸ್ಥೆ ಮಾಡಲಾಗಿತ್ತು.

ಬೆಂಗಳೂರಿನಲ್ಲಿ ರಾಯರಾಯ ಕಲ್ಯಾಣ ಮಂಟಪ, ಚಂದ್ರಶೇಖರ ಭಾರತಿ ಕಲ್ಯಾಣ ಮಂಟಪ ಮತ್ತು ಎ.ಪಿ.ಎಸ್.ಕಾಲೇಜಿನಲ್ಲಿ ಮತದಾನ ಕೇಂದ್ರಗಳನ್ನು ತೆರೆಯಲಾಗಿತ್ತು. ಭಾನುವಾರ ಬೆಳಿಗ್ಗೆ 8 ರಿಂದ ಸಂಜೆ 4ರವರೆಗೆ ಮತದಾನ, ನಂತರ ಮತ ಎಣಿಕೆ ಕಾರ್ಯ ಜರುಗಿತು.

## ಜ್ಞಾನ ಹಂಚಿದ 'ಎಡ್ಯುವರ್ಸ್'ಗೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ ಎರಡು ದಿನದ 'ಎಡ್ಯುವರ್ಸ್: ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ' ಭಾನುವಾರ ತೆರೆಕಂಡಿತು. ಪೋಷಕರು, ವಿದ್ಯಾರ್ಥಿಗಳು ಅನುಮಾನ ಕಳೆದು, ಹೊಸ ಕನಸುಗಳನ್ನು ಹೊತ್ತು ತೆರಳಿದರು.

ಶನಿವಾರ ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾನುವಾರ ಪಾಲ್ಗೊಂಡಿದ್ದರು. ವಿವಿಧ ಕಾಲೇಜುಗಳಲ್ಲಿ ಇರುವ ಸೌಲಭ್ಯ, ಕೋರ್ಸ್‌ಗಳು, ಪ್ರವೇಶ ಶುಲ್ಕ, ಉದ್ಯೋಗಾವಕಾಶ, ಶೈಕ್ಷಣಿಕ ಸಾಲಗಳ ಬಗ್ಗೆ ಇದ್ದ ಪ್ರಶ್ನೆಗಳು, ಗೊಂದಲಗಳನ್ನು ಪರಿಹರಿಸಿಕೊಂಡರು. 70ಕ್ಕೂ ಅಧಿಕ ಮಳಿಗೆಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಮಾಹಿತಿಗಳನ್ನು ನೀಡಲಾಯಿತು.

ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೊಟಿಕ್ಸ್, ಪ್ರವಾಸೋದ್ಯಮ, ಎಂಬಿಎ, ಎಂಸಿಎ, ಫ್ಯಾಷನ್ ಡಿಸೈನಿಂಗ್, ಎಐ–ಎಂಎಸ್, ಸೈಬರ್ ಕ್ರೈಂ ಸೇರಿ ವಿವಿಧ ಕೋರ್ಸ್‌ಗಳು, ಕಾಲೇಜುಗಳ ವೈಶಿಷ್ಟ್ಯಗಳ ಬಗ್ಗೆ ವಿದ್ಯಾಸಂಸ್ಥೆಗಳ ಪ್ರತಿನಿಧಿಗಳು ಮಾಹಿತಿ ಒದಗಿಸಿದರು.

ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಕೋರ್ಸ್ ಹಾಗೂ ಸೌಲಭ್ಯಗಳ ಮಾಹಿತಿ ಒಳಗೊಂಡ ಕರಪತ್ರಗಳನ್ನು ಹಂಚಿದರು. ಕೆಲವು ಸಂಸ್ಥೆಗಳು ಮಾಹಿತಿ ಪರದೆಯನ್ನೂ ಅಳವಡಿಸಿದ್ದವು.

**ಅಣಕು ಪರೀಕ್ಷೆ:** ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ತಯಾರಿ ಮಟ್ಟ ಪರಿಶೀಲಿಸಿಕೊಳ್ಳಲು ಶನಿವಾರ ಅಣಕು ಸಿಇಟಿ ಪರೀಕ್ಷೆ ನಡೆದರೆ, ಭಾನುವಾರ ಅಣಕು ನೀಟ್ ನಡೆಯಿತು. ಅಣಕು ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದವರಿಗೆ ಬಹುಮಾನ ನೀಡಿ ಗೌರವಿಸಲಾಯಿತು.

ಬೆಂಗಳೂರು ಅರಮನೆ ಮೈದಾನದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್' ಶೈಕ್ಷಣಿಕ ಮೇಳದಲ್ಲಿ ಭಾನುವಾರ ವಿದ್ಯಾರ್ಥಿಗಳು, ಪೋಷಕರು ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು–ಪ್ರಜಾವಾಣಿ ಚಿತ್ರ

## ಡಿಕೆಶಿ ವಿರುದ್ಧ ರಾಜ್ಯಪಾಲರಿಗೆ ಶಾಸಕ ಮುನಿರತ್ನ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ₹2,000 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶೇ 15ರಷ್ಟು ಕಮಿಷನ್ ಪಡೆದಿದ್ದಾರೆ' ಎಂದು ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್‌ಗೆ ದೂರು ನೀಡಿದ್ದಾರೆ.

ಭಾನುವಾರ ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿದ ಅವರು, ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಿವರಿಸಿದ್ದಾರೆ. ಜತೆಗೆ, 'ಈ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮತ್ತು ಸಿಬಿಐಗೆ ದೂರು ನೀಡಿದ್ದು, ಡಿ.ಕೆ.ಶಿವಕುಮಾರ್ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಅನುಮತಿ ನೀಡಿ' ಎಂದು ಕೋರಿದ್ದಾರೆ.

'ವಿವಿಧ ಕಾಮಗಾರಿಗಳ ಗುತ್ತಿಗೆ ನೀಡಲು ಟೆಂಡರ್ ಕರೆಯದೆ, ಪ್ರಕ್ರಿಯೆ ನಡೆಸಲಾಗುತ್ತಿದೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರ ಸಂಬಂಧಿಗಳಿಗೆ ಗುತ್ತಿಗೆ ನೀಡಲು ಮುಂದಾಗಿದ್ದು, ಡಿ.ಕೆ.ಶಿವಕುಮಾರ್ ಅವರ ಪರವಾಗಿ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಗುತ್ತಿಗೆದಾರರಿಂದ ಶೇ 15ರಷ್ಟು ಕಮಿಷನ್ ಈಗಾಗಲೇ ಪಡೆದಿದ್ದಾರೆ' ಎಂದು ದೂರಿದ್ದಾರೆ.

'ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದರಲ್ಲಿ ನೇರವಾಗಿ ಭಾಗಿಯಾಗಿದ್ದಾರೆ. ರಾಜ್ಯದ ಗುತ್ತಿಗೆದಾರರ ಬಿಡ್‌ಗಳನ್ನು ಅನಗತ್ಯವಾಗಿ ತಿರಸ್ಕರಿಸುತ್ತಿದ್ದಾರೆ. ಕೆಲವು ಕಾಮಗಾರಿಗಳಲ್ಲಿ ತಮ್ಮದೇ ಬೇನಾಮಿ ಕಂಪನಿಗಳ ಮೂಲಕ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು, ಗುತ್ತಿಗೆ ಪಡೆದಿದ್ದಾರೆ' ಎಂದು ಆರೋಪಿಸಿದ್ದಾರೆ.

'ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ಸ್ಟಾರ್ ಚಂದ್ರು ಅವರ ಸ್ಟಾರ್ ಬಿಲ್ಡರ್ಸ್‌ಗೆ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ₹232 ಕೋಟಿ ಮೊತ್ತದ ಕಾಮಗಾರಿಗಳ ಗುತ್ತಿಗೆ ನೀಡಿದ್ದಾರೆ. ಈ ಎಲ್ಲ ಅಕ್ರಮಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಬೇಕು' ಎಂದು ಕೋರಿದ್ದಾರೆ.

## ಒಂದು ವಾರ ಮಳೆ?

ಬೆಂಗಳೂರು: ರಾಜ್ಯದ ವಿವಿಧೆಡೆ ಒಂದು ವಾರ ಮಳೆ ಮುಂದುವರಿಯುವ ಸಾಧ್ಯತೆಯಿದೆ. ಹವಾಮಾನ ಇಲಾಖೆಯು 18 ಜಿಲ್ಲೆಗಳಿಗೆ ಸೋಮವಾರ 'ಯೆಲ್ಲೊ ಅಲರ್ಟ್' ಘೋಷಿಸಿದೆ. ಆಂಧ್ರಪ್ರದೇಶದ ಕರಾವಳಿಯ ಮಧ್ಯಭಾಗಗಳು ಸೇರಿ ವಿವಿಧೆಡೆ ಚಂಡಮಾರುತದ ಪರಿಚಲನೆ ಸರಾಸರಿ ಸಮುದ್ರಮಟ್ಟದಿಂದ 0.9 ಕಿ.ಮೀ. ಎತ್ತರದಲ್ಲಿದೆ. ಇದರಿಂದಾಗಿ ವಿವಿಧೆಡೆ ಮಳೆ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ.

ರಾಯಚೂರು, ಕೊಪ್ಪಳ, ಗದಗ, ಧಾರವಾಡ, ಹಾವೇರಿ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ನಗರ, ತುಮಕೂರು ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಸೋಮವಾರ ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ನೆಚ್ಚರಿಕೆ ನೀಡಿದೆ. ಬೆಂಗಳೂರು ನಗರ ಸೇರಿ 15 ಜಿಲ್ಲೆಗಳಿಗೆ ಮಂಗಳವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವವಿದೆ. ಕಲಬುರಗಿ, ಯಾದಗಿರಿ ಹಾಗೂ ಬೀದರ್‌ನಲ್ಲಿ ಒಣಹವೆ ಇರಲಿದೆ ಎಂದಿದೆ.

## 'ಅಂಬೇಡ್ಕರನ್ನು ಭಗವಾನ್ ಆಗಿಸುವುದು ಬೇಡ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಭಗವಾನ್ ಆಗಿಸುವುದು ಬೇಡ, ಅವರ ವಿಚಾರಗಳನ್ನು ಪೂಜಿಸಿ, ಅನುಸರಿಸಿ, ಪಾಲಿಸಬೇಕು' ಎಂದು ಅಂಬೇಡ್ಕರ್ ಮರಿ ಮೊಮ್ಮಗ, ಭಾರತೀಯ ಬೌದ್ಧ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ರಾಜರತ್ನ ಅಂಬೇಡ್ಕರ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂಬೇಡ್ಕರ್ ಜಯಂತಿಯಂದು ಅವರ ಭಾವಚಿತ್ರ ಇಟ್ಟು, ಡಿಜೆ ಹಚ್ಚಿ ಕುಣಿಯುವ ಮೂಲಕ ಜಯಂತಿ ಆಚರಣೆ ಮಾಡುವುದು ಬೇಡ, ಕೆಲವು ವ್ಯಕ್ತಿಗಳು ಅಂಬೇಡ್ಕರ್ ಜಯಂತಿಗೆ ಡಿಜೆ ಹಚ್ಚಲು ದೇಣಿಗೆ ನೀಡಿ, ಅವರ ಆಶಯಗಳಿಗೆ ವಿರುದ್ಧದ ವಿಚಾರಗಳಿಗೆ ಮನ್ನಣೆ ನೀಡುವ ಷಡ್ಯಂತ್ರ ನಡೆಸಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.

ರಾಜರತ್ನ ಅಂಬೇಡ್ಕರ್

'ಶಿಕ್ಷಕರು ಹಾಗೂ ಪದವೀಧರರ ಮತಕ್ಷೇತ್ರಗಳಿಗೆ ಶಿಕ್ಷಕರು, ಪದವೀಧರರು ಮಾತ್ರ ಮತದಾರರು, ಉಳಿದವರಿಗೆ ಅಲ್ಲಿ ಮತದಾನಕ್ಕೆ ಅವಕಾಶವಿಲ್ಲ. ಅಂತೆಯೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲು ಮತಕ್ಷೇತ್ರಗಳಲ್ಲಿ ದಲಿತರಿಗಷ್ಟೇ ಮತದಾನ ಮಾಡುವ ಅವಕಾಶ ಕಲ್ಪಿಸಬೇಕು. ಈ ತೆರನಾದ ವ್ಯವಸ್ಥೆ ಜಾರಿಯಾಗಲು ಪ್ರಬಲವಾದ ಜನಾಂದೋಲನ ರೂಪಿತವಾಗಬೇಕಿದೆ' ಎಂದರು. .

## 'ಹೆಣ್ಣುಮಕ್ಕಳು ಅಂಬೇಡ್ಕರರಿಗೆ ಋಣಿಯಾಗಿರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದು ಶಿಕ್ಷಣ, ಆಸ್ತಿಯ ಹಕ್ಕು ಮತ್ತು ಸಮಾನತೆಯ ಕಾನೂನುಗಳ ಫಲವನ್ನು ಅನುಭವಿಸುತ್ತಿರುವ ದೇಶದ ಎಲ್ಲ ಹೆಣ್ಣುಮಕ್ಕಳೂ ಬಿ.ಆರ್.ಅಂಬೇಡ್ಕರ್ ಅವರಿಗೆ ಋಣಿಯಾಗಿರಬೇಕು' ಎಂದು ಪ್ರೊ.ರವಿಕುಮಾರ್ ಬಾಗಿ ಅಭಿಪ್ರಾಯಪಟ್ಟರು.

ಅಂಬೇಡ್ಕರ್ ಜಯಂತಿ ನಿಮಿತ್ತ ಜನಶಕ್ತಿ ಶಿಕ್ಷಣ ಟ್ರಸ್ಟ್, ಕ್ರಿಯಾ ಮಾಧ್ಯಮ ಜಂಟಿಯಾಗಿ ಏರ್ಪಡಿಸಿದ್ದ 'ಅಂಬೇಡ್ಕರ್ ಚಿಂತನೆಗಳು' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಬಂದಾಗಲೂ ದೇಶದಲ್ಲಿ ಹೆಣ್ಣುಮಕ್ಕಳನ್ನು ಭೋಗ ಮತ್ತು ಬಳಸಿ ಬಿಸಾಡುವ ವಸ್ತುವಿನಂತೆ ನೋಡಲಾಗುತ್ತಿತ್ತು. ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳೇ ಅಲ್ಲ ಎಂಬ ಮನುವಿನ ಪ್ರತಿಪಾದನೆಗೇ ಜೋತುಬಿದ್ದಿದ್ದ ಮನುವಾದಿಗಳು, ಆಕೆಯನ್ನು ದಾಸಿಯಂತೆಯೇ ನೋಡಿಕೊಳ್ಳುತ್ತಿದ್ದರು. ಇದಕ್ಕೆಲ್ಲಾ ಕೊನೆ ಹಾಡಬೇಕು ಎಂಬ ಉದ್ದೇಶದಿಂದಲೇ ಅಂಬೇಡ್ಕರ್‌ಅವರು 'ಹಿಂದೂಸಂಹಿತೆಮಸೂದೆ' ಯನ್ನು ಮಂಡಿಸಿದರು' ಎಂದರು.

'ಅಂಬೇಡ್ಕರರ ಈ ನಡೆ ಮನುವಾದಿಗಳನ್ನು ಕೆರಳಿಸಿತು. ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ ತರಲು ಹೊರಟ ಕಾನೂನಿನ ವಿರುದ್ಧ, ಮನುವಾದಿಗಳು ಹೆಣ್ಣುಮಕ್ಕಳನ್ನೇ ಎತ್ತಿಕಟ್ಟಿದರು. ಸಂಸತ್ ಭವನದ ಎದುರು ಪ್ರತಿಭಟನೆ ನಡೆಸಿದರು. ಹೀಗಿದ್ದರೂ ಅಂಬೇಡ್ಕರ್ ಅವರು ಆ ಮಸೂದೆ ನಾಲ್ಕು ವರ್ಷಗಳವರೆಗೆ ಚರ್ಚೆಯಲ್ಲಿ ಇರುವಂತೆ ನೋಡಿಕೊಂಡರು' ಎಂದರು.

'ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನಹಕ್ಕು, ಶಿಕ್ಷಣದ ಹಕ್ಕನ್ನು ಮಸೂದೆಯಲ್ಲಿ ಸೇರಿಸಿದ್ದರು. 1951ರಲ್ಲಿ ಸಂಸತ್ತಿನಲ್ಲಿ ಮಸೂದೆಗೆ ಅನುಮೋದನೆ ದೊರೆಯದೇ ಇದ್ದಾಗ, ಅಂಬೇಡ್ಕರ್ ರಾಜೀನಾಮೆ ನೀಡಿದರು. ಆದರೆ ಅವರು ಹಿಂದೂ ಸಂಹಿತೆ ಮೂಲಕ ತರಲು ಹೊರಟಿದ್ದ ಕಾನೂನುಗಳು, ನಂತರದ ವರ್ಷಗಳಲ್ಲಿ ಬೇರೆ–ಬೇರೆ ರೂಪದಲ್ಲಿ ಜಾರಿಗೆ ಬಂದವು' ಎಂದರು.

'ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನುಗಳು' ಕುರಿತು ವಕೀಲೆ ಅಶ್ವಿನಿ ಓಬುಳೇಶ್, '1952ರ ಚುನಾವಣೆಗೆ ಎಐಎಸ್‌ಸಿಎಫ್ ಪ್ರಣಾಳಿಕೆ' ಕುರಿತು ಸಾಮಾಜಿಕ ಕಾರ್ಯಕರ್ತ ಬಿ.ಆರ್. ಮಂಜುನಾಥ್ ವಿಷಯ ಮಂಡಿಸಿದರು.

ವಿವಿಧೆಡೆ ಭೇಟಿ ನೀಡಿರುವ ನಿಪ್ಪಾಣಿಯ ದೀಪಕ ಮಧಾಳೆ

## ಅಂಬೇಡ್ಕರ್‌ರ ಅಪರೂಪದ ಚಿತ್ರಗಳ ಸಂಗ್ರಹ

• ಇಮಾಮ್‌ಹುಸೇನ್ ಗೂಡುನವರ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ನಿಪ್ಪಾಣಿಯ ಚಿತ್ರ ಕಲಾವಿದ ದೀಪಕ ಮಧಾಳೆ ಅವರ ಬಳಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜೀವನಗಾಥೆ ಬಿಂಬಿಸುವ ಸಾವಿರಕ್ಕೂ ಅಧಿಕ ಚಿತ್ರಗಳಿವೆ. ಅಂಬೇಡ್ಕರ್ ಬದುಕಿನ ಅಪರೂಪದ ಕ್ಷಣಗಳನ್ನು ಸೆರೆ ಹಿಡಿದ ಹಲವು ಕಪ್ಪುಬಿಳುಪಿನ ಚಿತ್ರಗಳು ಅವರ ಬಳಿಯಿವೆ.

ವಯಸ್ಸು 60 ವರ್ಷವಾದರೂ ಉತ್ಸಾಹದ ಚಿಲುಮೆಯಂತಿರುವ ದೀಪಕ ಅವರ ಮೇಲೆ ಅಂಬೇಡ್ಕರ್ ಪ್ರಭಾವ ಅಪಾರ. ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಅಂಬೇಡ್ಕರ್ ಭೇಟಿ ನೀಡಿದ ಬಹುತೇಕ ಪ್ರದೇಶಗಳಿಗೆ ಅವರು ಭೇಟಿ ನೀಡಿದ್ದಾರೆ. ಎಲ್ಲೆಲ್ಲಿ ಅಪರೂಪದ ಚಿತ್ರಗಳು, ಚಿತ್ರಪಟಗಳು ಸಿಗುತ್ತವೆಯೋ, ಅವುಗಳನ್ನು ಎತ್ತಿಕೊಂಡು ಬಂದು ಒಪ್ಪ ಓರಣವಾಗಿ ಜತನ ಮಾಡಿದ್ದಾರೆ. ಮುಂದಿನ ಪೀಳಿಗೆಗೂ ಅಂಬೇಡ್ಕರ್ ಅವರ ನೈಜ ಚಿತ್ರಗಳು ಸಿಗುವಂತೆ ಮಾಡಿದ್ದಾರೆ.

'ಅಂಬೇಡ್ಕರ್ ಜೀವನ ಚರಿತ್ರೆ ಮೂರು ಬಾರಿ ಓದಿದ್ದೇನೆ. ಅದರಲ್ಲಿದ್ದ ಅಂಬೇಡ್ಕರ್ ಚಿತ್ರಗಳನ್ನು ಪ್ರಿಂಟ್ ಮಾಡಿಸಿ ಸಂಗ್ರಹಿಸಿದೆ. ನಂತರ ಕೊಲ್ಹಾಪುರದಲ್ಲಿ ಪಠಾಣ್ ಎಂಬುವರ ಬಳಿ ಅಂಬೇಡ್ಕರ್ ಭಾವಚಿತ್ರದ ಮೂಲಪ್ರತಿ (ಒರಿಜಿನಲ್) ಸಿಕ್ಕಿತು. ಅದರೊಂದಿಗೆ ವಿವಿಧ ಕೃತಿಗಳು, ಅಂಬೇಡ್ಕರ್ ಭೇಟಿ ಕೊಟ್ಟ ಸ್ಥಳಗಳ ಚಿತ್ರಗಳನ್ನೂ ಸಂಗ್ರಹಿಸಿದೆ. ಇದಕ್ಕೆ ಸಹೋದರ ಸಂತಕುಮಾರ ಕೂಡ ನೆರವಾದರು' ಎಂದು ದೀಪಕ ಮಧಾಳೆ 'ಪ್ರಜಾವಾಣಿ'ಗೆ ತಿಳಿಸಿದರು.

ಅಂಬೇಡ್ಕರ್ ಕಾನೂನು ಪದವಿ ಪಡೆದ ಹಂತದಿಂದ ಅಂತ್ಯದವರೆಗಿನ ಕಾಲಘಟ್ಟದ ಚಿತ್ರಗಳಿವೆ. ಚಳವಳಿ, ಸಂಸತ್ತಿನಲ್ಲಿ ಮಾತನಾಡಿದ ಸಂದರ್ಭ, ದೇಶ–ವಿದೇಶದ ಗಣ್ಯರನ್ನು ಭೇಟಿಯಾದ ಕ್ಷಣ ಮತ್ತು ಅವರ ಅಂತ್ಯಕ್ರಿಯೆ ಚಿತ್ರಗಳೂ ಇವೆ.

'ನಿಪ್ಪಾಣಿಯ ಬಳವಂತರಾವ್ ವರಾಳೆ ಅವರು ಅಂಬೇಡ್ಕರ್ ಅನುಯಾಯಿಯಾಗಿದ್ದರು. ನಮ್ಮೂರಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅಂಬೇಡ್ಕರ್, ಬಹಿಷ್ಕೃತ ಹಿತಕಾರಣಿ ಚಳವಳಿ, ಚುನಾವಣೆ ಪ್ರಚಾರ ಮತ್ತಿತರ ಕೆಲಸಕ್ಕಾಗಿ ಐದಾರು ಸಲ ಇಲ್ಲಿಗೆ ಭೇಟಿ ಕೊಟ್ಟಿದ್ದಾರೆ' ಎಂದು ವಿವರಿಸಿದರು.

**70 ಪ್ರದರ್ಶನ:** 'ಮಹಾರಾಷ್ಟ್ರ ಸರ್ಕಾರ ಪ್ರಕಟಿಸಿದ ಅಂಬೇಡ್ಕರ್ ಚಿತ್ರಗಳ 22ನೇ ಸಂಪುಟದಲ್ಲೂ ನಾನು ಸಂಗ್ರಹಿಸಿದ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. 1990ರಲ್ಲಿ ನಿಪ್ಪಾಣಿಯಲ್ಲಿ ಮೊದಲ ಸಲ ಪ್ರದರ್ಶನ ಆಯೋಜಿಸಿದ್ದೆ. ಬೆಳಗಾವಿ, ವಿಜಯಪುರ, ಕೊಲ್ಹಾಪುರ, ಸಾಂಗ್ಲಿ, ಗಡಹಿಂಗ್ಲಜ್ ಮತ್ತಿತರ ಕಡೆ ಶಾಲೆ–ಕಾಲೇಜುಗಳು ಮತ್ತು ಸಂಘ–ಸಂಸ್ಥೆಗಳ ಆವರಣ ಸೇರಿ ಸುಮಾರು 70 ಪ್ರದರ್ಶನವಾಗಿವೆ' ಎಂಬುದು ಅವರ ವಿವರ.

'ಮುಂದಿನ ದಿನಗಳಲ್ಲಿ ಈ ಚಿತ್ರಗಳನ್ನು ಡಿಜಿಟಲೀಕರಣ ಮಾಡಿಸಿ ಮತ್ತು ನಿಗದಿತ ಸ್ಥಳದಲ್ಲಿ ನಿರಂತರವಾಗಿ ಪ್ರದರ್ಶಿಸಲು ಯೋಜಿಸಿದ್ದೇನೆ. ಇದಕ್ಕೆ ರಾಜ್ಯ ಸರ್ಕಾರ ನೆರವಾಗಬೇಕು' ಎಂದು ಕೋರಿದರು.

ಅಂಬೇಡ್ಕರ್ ಅಪರೂಪದ ಚಿತ್ರಗಳೊಂದಿಗೆ ದೀಪಕ ಮಧಾಳೆ ಚಿತ್ರ: ಸುನಿಲ್ ಗಿರಿ

ನಿಪ್ಪಾಣಿಯಲ್ಲಿ ಕುದುರೆ ಏರಿ ಸುತ್ತಾಡಿದ್ದ ಅಂಬೇಡ್ಕರ್

**ಯುವಜನರಿಗೆ ಅಂಬೇಡ್ಕರ್ ಅವರನ್ನು ಪರಿಚಯಿಸುವುದು ನನ್ನ ಉದ್ದೇಶ. ಈಗಲೂ ಮನೆಗೆ ಬಂದರೂ ಚಿತ್ರಗಳನ್ನು ತೋರಿಸುತ್ತೇನೆ. ಪ್ರದರ್ಶನಕ್ಕೂ ಸಿದ್ಧ**

**ದೀಪಕ ಮಧಾಳೆ,** ಚಿತ್ರ ಕಲಾವಿದ

**ಅಂಬೇಡ್ಕರ್ ಜೀವನ ಮತ್ತು ಹೋರಾಟದ ಕಿಚ್ಚನ್ನು ಅಂಬೇಡ್ಕರೋತ್ತರ ತಲೆಮಾರಿಗೆ ತಲುಪಿಸುವ ಕಾರ್ಯವನ್ನು ದೀಪಕ ಮಧಾಳೆ ಮಾಡುತ್ತಿದ್ದಾರೆ**

**ಯಲ್ಲಪ್ಪ ಹಿಮ್ಮಡಿ,** ಬಂಡಾಯ ಸಾಹಿತಿ

## ಪ್ರಶಸ್ತಿ ಪ್ರದಾನ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಗಾಯಕ ವಿದ್ಯಾಭೂಷಣ ಅವರಿಗೆ 'ಎಸ್.ವಿ.ನಾರಾಯಣಸ್ವಾಮಿ ರಾವ್ ಜಾಗತಿಕ ಸಂಗೀತ ಪ್ರಶಸ್ತಿ'ಯನ್ನು ಭಾನುವಾರ ಪ್ರದಾನ ಮಾಡಲಾಯಿತು. (ಎಡದಿಂದ) ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಎಸ್.ಎನ್. ವರದರಾಜ್, ಇಂಟೆಕ್ವೆಸ್ಟ್ ಕಂಪನಿಯ ನಿರ್ದೇಶಕ ಎಚ್.ಎಸ್. ರಾಮಕೃಷ್ಣ, ಮಂಡಳಿ ಮುಖ್ಯಸ್ಥ ಸಿ.ಎಸ್. ಕೇದಾರ್ ಮತ್ತು ಗಾಯಕಿಯರಾದ ರಂಜನಿ ಮತ್ತು ಗಾಯತ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

# 'ವಕ್ಫ್ ಪರಮಾಧಿಕಾರಕ್ಕೆ ಮೋದಿಯ ಕಡಿವಾಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಸ್ಲಿಮರ ಓಲೈಕೆಗಾಗಿ ಕಾಂಗ್ರೆಸ್ ಸರ್ಕಾರವು ವಕ್ಫ್ ಮಂಡಳಿಗೆ ಅತೀವ ಅಧಿಕಾರವನ್ನು ನೀಡಿತ್ತು. ದೇಶದ ಯಾವುದೇ ಜಮೀನು ತನ್ನದು ಎಂದು ವಕ್ಫ್ ಮಂಡಳಿಯು ಕಸಿದುಕೊಳ್ಳಬಹುದಿತ್ತು. ಅದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಕಡಿವಾಣ ಹಾಕಿದ್ದಾರೆ' ಎಂದು ಸಂಸದ ತೇಜಸ್ವಿ ಸೂರ್ಯ ಭಾನುವಾರ ಹೇಳಿದರು.

ಬೆಂಗಳೂರು ದಕ್ಷಿಣ ವಿಭಾಗದ ಬಿಜೆಪಿ ಘಟಕ ಆಯೋಜಿಸಿದ್ದ ವಕ್ಫ್ ತಿದ್ದುಪಡಿ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

'1923 ಮತ್ತು 2013ರ ಮಧ್ಯೆ ದೇಶದಾದ್ಯಂತ ವಕ್ಫ್ ಅಧೀನದಲ್ಲಿ 18 ಲಕ್ಷ ಎಕರೆಯಷ್ಟು ಜಮೀನು ಇತ್ತು.

ತೇಜಸ್ವಿ ಸೂರ್ಯ

ಕೇಂದ್ರದಲ್ಲಿ ಯುಪಿಎ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿತು. ಪರಿಣಾಮವಾಗಿ 2025ರ ವೇಳೆಗೆ ವಕ್ಫ್ ಆಸ್ತಿ 21 ಲಕ್ಷ ಎಕರೆಗೆ ಏರಿಕೆ ಆಗಿತ್ತು' ಎಂದು ಕಳವಳ ವ್ಯಕ್ತಪಡಿಸಿದರು. 'ಯಾವ ದಾಖಲೆಗಳೂ ಇಲ್ಲದೆ, ಯಾವುದೇ ಆಸ್ತಿಯನ್ನು ತನ್ನದೆಂದು ವಕ್ಫ್ ಹೇಳಿಕೊಳ್ಳುವಂತಹ ಅಧಿಕಾರ ಅದಕ್ಕೆ ಇತ್ತು. ಈಗ ಅಂತಹ ಪರಮಾಧಿಕಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮೋದಿ ನೇತೃತ್ವದ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದಿದೆ. ವಕ್ಫ್ ಮಂಡಳಿಯ ಆಡಳಿತದಲ್ಲಿ ಪಾರದರ್ಶಕತೆ ತಂದಿದೆ' ಎಂದರು.

## ರಾಷ್ಟ್ರಪತಿ, ರಾಜ್ಯಪಾಲರಿಗೆ ಕಾಲಮಿತಿ: ಪುನರ್ ಪರಿಶೀಲನಾ ಅರ್ಜಿ?

**ನವದೆಹಲಿ (ಪಿಟಿಐ):** ರಾಜ್ಯ ವಿಧಾನಸಭೆ ಅಂಗೀಕಾರ ನೀಡಿದ ಮಸೂದೆಗಳ ವಿಚಾರವಾಗಿ ತೀರ್ಮಾನ ತೆಗೆದುಕೊಳ್ಳಲು ರಾಜ್ಯಪಾಲರು ಮತ್ತು ರಾಷ್ಟ್ರಪತಿಗೆ ಸಮಯಮಿತಿ ನಿಗದಿ ಮಾಡಿದ ಸುಪ್ರೀಂ ಕೋರ್ಟ್‌ನ ತೀರ್ಪು ಪ್ರಶ್ನಿಸಿ ಕೇಂದ್ರ ಸರ್ಕಾರವು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸುವ ಸಾಧ್ಯತೆ ಇದೆ.

ಸಮಯಮಿತಿ ನಿಗದಿ ಮಾಡಿರುವುದನ್ನು ಪ್ರಶ್ನಿಸುವುದಷ್ಟೇ ಅಲ್ಲದೆ, ರಾಜ್ಯಪಾಲರು ಕಳುಹಿಸಿದ ಮಸೂದೆಗೆ ಅಂಕಿತ ಹಾಕುವುದನ್ನು ರಾಷ್ಟ್ರಪತಿಯವರು ತಡೆಹಿಡಿದರೆ ರಾಜ್ಯ ಸರ್ಕಾರಗಳು ನೇರವಾಗಿ ಸುಪ್ರೀಂ ಕೋರ್ಟ್ ಕದ ತಟ್ಟಬಹುದು ಎಂದು ತೀರ್ಪಿನಲ್ಲಿ ಹೇಳಿರುವುದನ್ನು ಕೂಡ ಕೇಂದ್ರವು ಪ್ರಶ್ನಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

## ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

### 'ಬೆಳಗದ ಬೀದಿ ದೀಪಗಳು'

ನಗರದ ಕೇಂದ್ರ ಪ್ರದೇಶವಾದ ಕೆಂಪೇಗೌಡ ವೃತ್ತದ ಸುತ್ತಮುತ್ತಲೂ ಬೀದಿ ದೀಪಗಳು ಸರಿಯಾಗಿ ಬೆಳಗುತ್ತಿಲ್ಲ. ಇದರಿಂದ ಜನರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಕೆಂಪೇಗೌಡ ಮುಖ್ಯ ರಸ್ತೆಯ ಎಡಭಾಗದ ಉದ್ದಕ್ಕೂ ಹಾಗೂ ಅಡ್ಡ ರಸ್ತೆಗಳಲ್ಲಿ ಕಳೆದ ನಾಲ್ಕಾರು ತಿಂಗಳಿಂದ ಬೀದಿ ದೀಪಗಳು ಕೆಟ್ಟು ಹೋಗಿವೆ. ಸುಸ್ಥಿತಿಯಲ್ಲಿ ಇಲ್ಲದ ಪಾದಚಾರಿ ಮಾರ್ಗದಲ್ಲಿ ಹೆಜ್ಜೆ ಇರಿಸುವುದೇ ಕಷ್ಟಕರವಾಗಿದೆ. ಒಳ ಚರಂಡಿ ಮೇಲಿನ ಚಪ್ಪಡಿ ಕಲ್ಲುಗಳು ಕೂಡ ಕಿತ್ತುಹೋಗಿವೆ. ಇದರಿಂದಾಗಿ ರಾತ್ರಿ ಅವಧಿಯಲ್ಲಿ ಪಾದಚಾರಿಗಳು ಬಿದ್ದು ಗಾಯಗೊಳ್ಳುತ್ತಿದ್ದಾರೆ. ಕತ್ತಲಲ್ಲಿ ಓಡಾಡಲು ಜನರು ಭಯ ಪಡುತ್ತಿದ್ದಾರೆ. ಬೀದಿ ದೀಪಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಇನ್ನಾದರೂ ಎಚ್ಚೆತ್ತುಕೊಂಡು ಬೀದಿ ದೀಪಗಳನ್ನು ಸರಿಪಡಿಸಬೇಕು.

**ಶಿವಪ್ರಸಾದ್ ಎಸ್.,** ಕೆಂಪೇಗೌಡ ರಸ್ತೆ

### 'ವಾಲ್ಮೀಕಿ ನಗರದಲ್ಲಿ ಕಸಕ್ಕೆ ಬೆಂಕಿ'

ಬಿಬಿಎಂಪಿ ವಾರ್ಡ್ ಸಂಖ್ಯೆ 141ರ ವಾಲ್ಮೀಕಿ ನಗರದ 2ನೇ ಮುಖ್ಯರಸ್ತೆಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಿಂದಾಗಿ ದಿನದಿಂದ ದಿನಕ್ಕೆ ಕಸದ ರಾಶಿ ಬೆಳೆಯುತ್ತಿದೆ. ಸ್ಥಳೀಯ ನಿವಾಸಿಗಳು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಕಿಡಿಗೇಡಿಗಳು ಕಸಕ್ಕೆ ಬೆಂಕಿ ಹಾಕುತ್ತಿದ್ದಾರೆ. ಇದರಿಂದ ಅಕ್ಕಪಕ್ಕದ ಕಟ್ಟಡಗಳಿಗೆ ಹಾನಿಯಾದ ಘಟನೆಯೂ ನಡೆದಿದೆ. ಒಣ ಕಸದ ಜತೆಗೆ ಹಸಿ ಕಸವನ್ನು ಇಲ್ಲಿ ಎಸೆಯಲಾಗುತ್ತಿದೆ. ಗಾಳಿ–ಮಳೆಗೆ ಈ ಕಸ ರಸ್ತೆಗೆ ಹರಡಿಕೊಳ್ಳುತ್ತದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ತಡೆಯಲು ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

**ಸುಧಾಕರ್.ಕೆ,** ವಾಲ್ಮೀಕಿ ನಗರ ನಿವಾಸಿ

### 'ಮರಳಿನೊಂದಿಗೆ ಕಸದ ರಾಶಿ'

ಹನುಮಂತ ನಗರದ ಮೌಂಟ್ ಜಾಯ್ ಬಡಾವಣೆಯ ಮೂರನೇ ಅಡ್ಡರಸ್ತೆಯ ತಿರುವಿನಲ್ಲಿ ಹಲವು ತಿಂಗಳಿಂದ ಮರಳಿನ ರಾಶಿ ಇದೆ. ಇಲ್ಲೇ ಕಸವನ್ನೂ ಎಸೆಯಲಾಗುತ್ತಿದೆ. ಮರಳು ಹಾಗೂ ಕಸವು ರಸ್ತೆಯನ್ನು ಆವರಿಸಿಕೊಳ್ಳುತ್ತಿದೆ. ಇದು ತಿರುವಿನ ಜಾಗವಾಗಿರುವುದರಿಂದ ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಇಲ್ಲೇ ವಿದ್ಯಾಸಂಸ್ಥೆಯೂ ಇದ್ದು, ಮಕ್ಕಳು ಕೂಡ ತೊಂದರೆ ಅನುಭವಿಸುತ್ತಿದ್ದಾರೆ. ವಾಹನ ಸವಾರರು ಮರಳಿನ ರಾಶಿ ತಪ್ಪಿಸಲು ಹೋಗಿ, ಅಪಘಾತ ಸಂಭವಿಸುವ ಸಾಧ್ಯತೆಗಳಿವೆ. ಆದ್ದರಿಂದ ಮರಳಿನ ಹಾಗೂ ಕಸದ ರಾಶಿಯನ್ನು ತೆರವುಗೊಳಿಸಿ, ಶಾಶ್ವತ ಪರಿಹಾರ ಒದಗಿಸಬೇಕು. ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

**ಕೆ.ಎಸ್. ನಾಗರಾಜ್,** ಹನುಮಂತ ನಗರ

### 'ಮುರಿದು ಬಿದ್ದ ವಿದ್ಯುತ್ ಕಂಬ'

ರಾಜಾಜಿನಗರದ ಆರನೇ ಬ್ಲಾಕ್‌ನ ಪ್ರಸನ್ನ ಥಿಯೇಟರ್ ಸಿಗ್ನಲ್ ಬಳಿ ಇರುವ ಮಯೂರ ಹೋಟೆಲ್ ಸಮೀಪ ವಿದ್ಯುತ್ ಕಂಬ ಮುರಿದು ಬಿದ್ದಿದೆ. ಇಲ್ಲಿ ಹೊಸ ವಿದ್ಯುತ್ ಕಂಬವನ್ನು ಅಳವಡಿಸಲಾಗಿದೆ. ಆದರೆ, ಹಳೆಯ ಕಂಬವನ್ನು ಹಾಗೇ ಇರಿಸಲಾಗಿದೆ. ಈ ಕಂಬ ರಸ್ತೆಯಲ್ಲಿಯೇ ಇರುವುದರಿಂದ ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ಸಮಸ್ಯೆ ಆಗುತ್ತಿದೆ. ಇಲ್ಲಿ ಕಡಿದ ಮರದ ರೆಂಬೆಕೊಂಬೆಗಳನ್ನೂ ಪಾದಚಾರಿ ಮಾರ್ಗದಲ್ಲಿಯೇ ಹಾಕಲಾಗಿದೆ. ಆದ್ದರಿಂದ ವಿದ್ಯುತ್ ಕಂಬ ಹಾಗೂ ಮರದ ರೆಂಬೆಕೊಂಬೆಗಳನ್ನು ವಿಲೇವಾರಿ ಮಾಡಬೇಕು.

**ಎಂ. ಉಮಾಶಂಕರಬಾಬು,** ಕೆಂಪಾಪುರ ಅಗ್ರಹಾರ

ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಬಡಾವಣೆಗಳ 'ಅಭಿವೃದ್ಧಿಯ ಕಥೆ'

# 'ವಸತಿ'ಗೆ ಡಾಂಬರು, 'ಕೈಗಾರಿಕೆ'ಗೆ ಮಣ್ಣಿನ ರಸ್ತೆ!

• ಗಾಣಧಾಳು ಶ್ರೀಕಂಠ

**ಬೆಂಗಳೂರು:** ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಿಗಳರಪಾಳ್ಯ ಮುಖ್ಯರಸ್ತೆಯಲ್ಲಿರುವ (ಗರುಡಪ್ಪ ಸರ್ಕಲ್ ಸಮೀಪ) ಕೈಗಾರಿಕಾ ವಸಾಹತು ಪ್ರದೇಶಗಳ ಕೆಲವು ರಸ್ತೆಗಳು ದಶಕಗಳಿಂದ ಡಾಂಬರ್ ಕಂಡಿಲ್ಲ. ಇದರಿಂದ ಇಲ್ಲಿ ವಾಹನ ಸಂಚಾರಕ್ಕೆ ತೀವ್ರ ಸಮಸ್ಯೆ ಎದುರಾಗಿದೆ.

ಸುತ್ತಲಿನ ವಸತಿ ಪ್ರದೇಶಗಳ ರಸ್ತೆಗಳೆಲ್ಲ ಡಾಂಬರು ಹೊದ್ದುಕೊಂಡಿವೆ. ಕೈಗಾರಿಕೆಗಳಿರುವ ರಸ್ತೆಗಳು ಮಾತ್ರ ಮಣ್ಣಿನ ರಸ್ತೆಗಳಾಗೇ ಉಳಿದಿವೆ. ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿ, ಹೊಂಡಗಳಿವೆ. 'ಈ ರಸ್ತೆಗಳಲ್ಲಿ ಮತಗಳಿಲ್ಲ, ಉದ್ಯಮಗಳಷ್ಟೇ ಇವೆ. ಆ ಕಾರಣಕ್ಕೆ ಇಲ್ಲಿನ ಜನಪ್ರತಿನಿಧಿಗಳು ರಸ್ತೆಗೆ ಡಾಂಬರು ಹಾಕಿಸುತ್ತಿಲ್ಲ' ಎಂಬುದು ಸ್ಥಳೀಯ ಕೈಗಾರಿಕೋದ್ಯಮಿಗಳ ಆರೋಪ.

ರಸ್ತೆಗಳು ಹೀಗೆ ಅಧ್ವಾನವಾಗಿರುವುದರಿಂದ ಉದ್ದಿಮೆದಾರರು ಕಚ್ಚಾ ವಸ್ತುಗಳು, ತಯಾರಿಸಿದ ಉತ್ಪನ್ನಗಳನ್ನು ಸಾಗಿಸುವುದು ಮತ್ತು ವ್ಯಾಪಾರಕ್ಕಾಗಿ ಗ್ರಾಹಕರು ಬಂದು ಹೋಗುವುದು ಕಷ್ಟವಾಗಿದೆ. ಇದು ಉದ್ಯಮದ ಮೇಲೂ ಪರಿಣಾಮ ಬೀರುತ್ತಿದೆ ಎಂದು ಕೈಗಾರಿಕೋದ್ಯಮಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಈ ಬಡಾವಣೆಯಲ್ಲಿ ವಸತಿ ಪ್ರದೇಶಗಳ ಜೊತೆಗೆ ಕಿಯೋನಿಕ್ಸ್ ಸೇರಿದಂತೆ ಸಣ್ಣ ಸಣ್ಣ ಕೈಗಾರಿಕಾ ವಸಾಹತುಗಳಿವೆ. ಇದರಲ್ಲಿ ಸಣ್ಣ, ಮಧ್ಯಮ ಮತ್ತು ಸೂಕ್ಷ್ಮ ಕೈಗಾರಿಕೆಗಳಿರುವ ಶೀಟ್ ಮೆಟಲ್, ಪವರ್ ಪ್ರೆಸ್, ಏರೋಸ್ಪೇಸ್ ಕಂಪನಿಗಳಿಗೆ ಪೂರೈಸುವ ಸ್ಟೀಮ್ ಟರ್ಬೈನ್ ತಯಾರಿಕಾ ಘಟಕಗಳಿವೆ. ದೇಶ ವಿದೇಶಗಳ ಕಂಪನಿಗಳಿಗೆ ಇಲ್ಲಿಂದ ಪೂರಕ ಉತ್ಪನ್ನಗಳು ಮತ್ತು ಬಿಡಿ ಭಾಗಗಳು ಪೂರೈಕೆಯಾಗುತ್ತವೆ. ನೂರಾರು ಕಾರ್ಮಿಕರು ಕೆಲಸ ಮಾಡುತ್ತಾರೆ. ದೇಶ–ವಿದೇಶಗಳ ಗ್ರಾಹಕರು ಇಲ್ಲಿಗೆ ಭೇಟಿ ನೀಡುತ್ತಾರೆ.

ಡಾಂಬರ್ ಕಾಣದ ಪೀಣ್ಯ ಫೈನ್ ಕಾಂಪ್ ರಸ್ತೆ

ಇಲ್ಲಿನ ವಸತಿ ಪ್ರದೇಶಗಳ ಹಲವು ರಸ್ತೆಗಳು ಚೆನ್ನಾಗಿವೆ. ಆದರೆ, ಕೈಗಾರಿಕೆಗಳಿರುವ ರ‍್ಯಾಪಿಡ್ ಪ್ಯಾಕ್ ರಸ್ತೆ (ಕಿಯೋನಿಕ್ಸ್ ಕೈಗಾರಿಕಾ ಪ್ರದೇಶ), ಪೀಣ್ಯ ಫೈನ್ ಕಾಂಪ್ ರಸ್ತೆ ಮತ್ತು ಇದಕ್ಕೆ ಹೊಂದಿಕೊಂಡಿರುವ ಸುತ್ತಮುತ್ತಲಿನ ರಸ್ತೆಗಳಿಗೆ ಮಾತ್ರ ಡಾಂಬರೀಕರಣ ಮಾಡಿಯೇ ಇಲ್ಲ.

'ಇಲ್ಲಿ ಓಟ್ ಹಾಕುವವರಿಲ್ಲ, ಅದಕ್ಕೆ ರಸ್ತೆ ಅಭಿವೃದ್ಧಿ ಮಾಡಿಸಿಲ್ಲ ಎನ್ನುತ್ತಾರೆ. ಆದರೆ, ಕಾರ್ಖಾನೆಗಳಲ್ಲಿರುವ ಕಾರ್ಮಿಕರು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮತ ಹಾಕುವುದಿಲ್ಲವೆ? ಇಲ್ಲಿರುವ ಕಾರ್ಖಾನೆಗಳ ಮಾಲೀಕರು ಮತದಾನ ಮಾಡುವುದಿಲ್ಲವೆ' ಎಂದು ಪ್ರಶ್ನಿಸುತ್ತಾರೆ.

'ಇತ್ತೀಚೆಗೆ ಈ ಭಾಗದಲ್ಲಿ ಕೆಲ ರಸ್ತೆಗಳ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಲಾಗಿತ್ತು. ಅದರಲ್ಲಿ ಇಲ್ಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕೇಳಿದೆವು. ಏನೂ ಪ್ರಯೋಜನ ಆಗಲಿಲ್ಲ'ಎಂದು ಉದ್ದಿಮೆದಾರರು ಬೇಸರದಿಂದ ಹೇಳುತ್ತಾರೆ.

'ಈ ಮಣ್ಣಿನ ರಸ್ತೆಗಳು ಬೇಸಿಗೆಯಲ್ಲಿ ದೂಳು ಎಬ್ಬಿಸುತ್ತವೆ. ಮಳೆಗಾಲದಲ್ಲಿ ಕೆಸರು ಗದ್ದೆಯಂತಾಗುತ್ತವೆ. ದೂಳಿನಿಂದಾಗಿ ಇಲ್ಲಿ ಕೆಲಸ ಮಾಡುವವರಿಗೆ ಆರೋಗ್ಯದಲ್ಲಿ ತೊಂದರೆಗಳಾಗಿವೆ. ಈ ರಸ್ತೆಗಳ ಅಧ್ವಾನದ ಕಾರಣದಿಂದಾಗಿ ಲಕ್ಷಾಂತರ ರೂಪಾಯಿ ಮೊತ್ತದ ವ್ಯಾಪಾರ ನಷ್ಟವಾಗಿದೆ. ಈಗಲೂ ಇಲ್ಲಿಗೆ ಗ್ರಾಹಕರು ಬರುವುದಕ್ಕೆ ಹಿಂದೇಟು ಹಾಕುತ್ತಾರೆ' ಎಂದು ಉದ್ಯಮಿ ಅರಸ್ ಆಕ್ರೋಶ ವ್ಯಕ್ತಪಡಿಸುತ್ತಾರೆ.

'ಪೀಣ್ಯ ಕೈಗಾರಿಕಾ ಪ್ರದೇಶದಿಂದ ರಾಜ್ಯ ಸರ್ಕಾರಕ್ಕೆ ವಾರ್ಷಿಕ ₹8 ಸಾವಿರ ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗುತ್ತದೆ. ಅದರಲ್ಲಿ ಶೇ 0.1ರಷ್ಟು ಹಣ ಖರ್ಚು ಮಾಡಿದರೂ, ನಮ್ಮ ಕೈಗಾರಿಕಾ ಪ್ರದೇಶಗಳು ಸುಧಾರಿಸುತ್ತವೆ. ಈ ಬಗ್ಗೆ ಸರ್ಕಾರವನ್ನು ಕೇಳಿ ಕೇಳಿ ಸಾಕಾಗಿದೆ. ದೆಹಲಿವರೆಗೂ ಪತ್ರ ವ್ಯವಹಾರ ಮಾಡಿದ್ದಾಗಿದೆ. ಏನೂ ಪ್ರಯೋಜನ ಆಗಿಲ್ಲ' ಎಂದು ಸಣ್ಣ ಕೈಗಾರಿಕೆ ಹೊಂದಿರುವ ಉದ್ಯಮಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.

'ರಸ್ತೆ ಸಮಸ್ಯೆಯ ಕಾರಣ ಉದ್ಯಮ ನಡೆಸಲು ತೊಂದರೆಯಾಗಿದೆ. ಮೊದಲು ರಸ್ತೆಗೆ ಡಾಂಬರು ಹಾಕಿಸಬೇಕು. ಕೈಗಾರಿಕೆ ಪ್ರದೇಶಗಳಿಗೆ ಕನಿಷ್ಠ ಸೌಲಭ್ಯವನ್ನು ಕಲ್ಪಿಸಬೇಕು' ಎಂದು ಕೇಶವಮೂರ್ತಿ ಸೇರಿದಂತೆ ಹಲವು ಉದ್ಯಮಿಗಳು ಬಿಬಿಎಂಪಿಯನ್ನು ಒತ್ತಾಯಿಸಿದರು.

**ಮುಖ್ಯಾಂಶಗಳು**

- ಮತಗಳಿಲ್ಲ ಎಂದು ರಸ್ತೆಗೆ ಡಾಂಬರು ಹಾಕಿಸಿಲ್ಲ: ಆರೋಪ
- ರಸ್ತೆ ಸಮಸ್ಯೆಯಿಂದಾಗಿ ಕೈಗಾರಿಕೆಗಳಿಗೆ ನಷ್ಟ
- ತೆರಿಗೆ ಪಾವತಿಸುತ್ತೇವೆ, ರಸ್ತೆ ಅಭಿವೃದ್ಧಿಪಡಿಸಿ: ಆಗ್ರಹ

'ತಿಗಳರ ಪಾಳ್ಯ ಮುಖ್ಯ ರಸ್ತೆಯಲ್ಲಿ ಕಿಯೋನಿಕ್ಸ್, ನಂದಗೋಕುಲ ಮತ್ತು ಬಾಲಾಜಿ ಕೈಗಾರಿಕಾ ವಸಾಹತು ಪ್ರದೇಶಗಳಿವೆ. ಇಲ್ಲಿ ಸುಮಾರು ಏಳು ಸಾವಿರ ಕೈಗಾರಿಕೆಗಳಿವೆ. 18 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಾರೆ. ಅದರಲ್ಲಿ ಸುಮಾರು ಆರು ಸಾವಿರ ಮಹಿಳೆಯರಿದ್ದಾರೆ. ಇಲ್ಲಿನ ರಸ್ತೆಗಳು ಅದೆಷ್ಟೋ ವರ್ಷಗಳಿಂದ ಡಾಂಬರು ಕಂಡಿಲ್ಲ. ಒಳಚರಂಡಿ ವ್ಯವಸ್ಥೆ ಇಲ್ಲ. ಬೀದಿ ದೀಪಗಳೂ ಇಲ್ಲ. ಸರ್ಕಾರ, ರಸ್ತೆಗಳಿಗೆ ಡಾಂಬರು ಹಾಕಿಸಬೇಕು. ಮೂಲಸೌಕರ್ಯ ಕಲ್ಪಿಸಬೇಕು'

**ಶಿವಕುಮಾರ್ ಆರ್.,**
ಅಧ್ಯಕ್ಷ, ಪೀಣ್ಯ ಕೈಗಾರಿಕಾ ಸಂಘ

# 'ಅಂಬೇಡ್ಕರ್‌ಗೆ ಗೌರವ ನೀಡದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** 'ಶೋಷಿತರ ಬಾಳಿನ ಬೆಳಕಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ನಿಕೃಷ್ಟವಾಗಿ ನಡೆಸಿಕೊಂಡಿತು' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ವೈಟ್‌ಫೀಲ್ಡ್ ಸಮೀಪದ ಅಂಬೇಡ್ಕರ್ ನಗರದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಪುತ್ಥಳಿ ಹಾಗೂ ಅಂಬೇಡ್ಕರ್ ಭವನವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ವಿಶ್ವದಲ್ಲೇ ದೇಶಕ್ಕೆ ಅತ್ಯುನ್ನತ ಸಂವಿಧಾನ ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ಹೀನಾಯವಾಗಿ ನಡೆಸಿಕೊಂಡಿತ್ತು. ಅವರುರಾಜಕೀಯ ಬೆಳವಣಿಗೆ ಹೊಂದಿದ್ದರೆ ಮುಂದೊಂದು ದಿನ ದೇಶದ ಪ್ರಧಾನಿ ಅಥವಾ ರಾಷ್ಟ್ರಪತಿಯಾಗುತ್ತಿದ್ದರು. ಹೀಗಾಗಿ ಅವರನ್ನು ಚುನಾವಣೆಯಲ್ಲಿ ಸೋಲಿಸಿದರು' ಎಂದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಡಾ.ಬಿ.ಆರ್‌.ಅಂಬೇಡ್ಕರ್ ಅವರ ಪುತ್ಥಳಿ ಲೋಕಾರ್ಪಣೆ ಮಾಡಿದರು. ಶಾಸಕಿ ಮಂಜುಳಾ ಲಿಂಬಾವಳಿ ಇದ್ದರು

'ಅಂಬೇಡ್ಕರ್ ಅವರು ಸಂವಿಧಾನ ಮೂಲಕ ಪ್ರತಿಯೊಬ್ಬರಿಗೂ ಮೂಲಭೂತ ಹಕ್ಕುಗಳನ್ನು ನೀಡಿದ್ದಾರೆ. ನಮ್ಮ ರಕ್ಷಣೆಗೆ ಕಾನೂನುಗಳನ್ನು ನೀಡಿದ್ದಾರೆ. ಇವೆಲ್ಲವನ್ನು ನಾವು ಅರಿತುಕೊಳ್ಳಬೇಕಿದೆ. ಸಂವಿಧಾನ ಆಶಯ ಹಾಗೂ ಸಾರ್ವಭೌಮತ್ವಕ್ಕೆ ಧಕ್ಕೆ ಆಗದಂತೆ ನಡೆದುಕೊಳ್ಳಬೇಕು' ಎಂದರು.

ಈ ಸಂಧರ್ಭದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ, ಕ್ಷೇತ್ರದ ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್.ಎಸ್ ಪಿಳ್ಳಪ್ಪ, ನಗರ ಮಂಡಲ ಅಧ್ಯಕ್ಷ ಶ್ರೀಧರ್ ರೆಡ್ಡಿ, ಆರೋಗ್ಯ ಮತ್ತು ವಿಪತ್ತು ನಿರ್ವಹಣಾ ಟಾಸ್ಕ್ ಫೋರ್ಸ್ ಅಧ್ಯಕ್ಷ ಮಾರಪ್ಪ ಮುಖಂಡರಾದ ಮನೋಹರ ರೆಡ್ಡಿ, ಮಹೇಂದ್ರ ಮೋದಿ, ಕೈಕೊಂಡ್ರಹಳ್ಳಿ ಪ್ರದೀಪ್ ಕುಮಾರ್ ಇದ್ದರು.




ನೃತ್ಯದ ಮೂಲಕ ಸಂಭ್ರಮಿಸಿದ ಯುವ ಸಮೂಹ

# ಪ್ರೆಸಿಡೆನ್ಸಿ ಕಾಲೇಜಲ್ಲಿ ಕನ್ನಡ ಕಲಾಮೇಳ

ಪ್ರಜಾವಾಣಿ ವಾರ್ತೆ

**ಯಲಹಂಕ:** ವೇದಿಕೆಯ ಹಿಂಭಾಗದ ಬೃಹತ್ ಪರದೆಯಲ್ಲಿ ಜನಪದ ಪ್ರಾಕಾರಗಳ ಕಲೆಗಳ ಅನಾವರಣ, ಎಲ್ಲೆಲ್ಲೂ ರಾರಾಜಿಸುತ್ತಿದ್ದ ಕನ್ನಡದ ಧ್ವಜ, ತಳಿರುತೋರಣ, ಚಪ್ಪರ, ರಂಗೋಲಿ, ಹಳದಿ-ಕೆಂಪು ಕಾಗದಗಳಿಂದ ಸಿಂಗಾರಗೊಂಡಿದ್ದ ಕಾಲೇಜು ಆವರಣ, ವಿಶೇಷ ಉಡುಪುಗಳಿಂದ ಕಂಗೊಳಿಸುತ್ತಿದ್ದ ವಿದ್ಯಾರ್ಥಿಗಳು, ಹಾಡು, ನೃತ್ಯದ ಮೂಲಕ ಸಂಭ್ರಮಿಸಿದ ಯುವ ಸಮೂಹ.. ಕಾಲೇಜಿನ ತುಂಬೆಲ್ಲಾ ಕನ್ನಡಮಯ ವಾತಾವರಣ.

ಕೆಂಪಾಪುರದ ಪ್ರೆಸಿಡೆನ್ಸಿ ಕಾಲೇಜಿನ ಪ್ರತಿಭಾನ ಕನ್ನಡಸಂಘದ 23ನೇ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಿದ್ದ 'ಕನ್ನಡ ಕಲಾಮೇಳ-2025' ಸಮಾರಂಭದಲ್ಲಿ ಕಂಡುಬಂದ ದೃಶ್ಯಗಳಿವು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಿತ್ರನಿರ್ಮಾಪಕ ಸಾ.ರಾ.ಗೋವಿಂದು, ಕಾಲೇಜಿನಲ್ಲಿ ಕನ್ನಡಮಯ ವಾತಾವರಣ ನೋಡಿ ತುಂಬಾ ಸಂತಸವಾಯಿತು. ಕನ್ನಡ ನಾಡು-ನುಡಿ, ನೆಲ-ಜಲದ ಬಗ್ಗೆ ಎಲ್ಲರಲ್ಲಿಯೂ ಜಾಗೃತಿ ಮೂಡಿಸುವುದರ ಜೊತೆಗೆ ಭಾಷೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಯುವಜನಾಂಗದ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಜನಪದ ನೃತ್ಯ ಪ್ರಸ್ತುತಪಡಿಸಿದರು

ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆ ಕೆ.ಷರೀಫಾ ಮಾತನಾಡಿ, ಕನ್ನಡ ಎಂದರೆ ಕೇವಲ ಭಾಷೆಯಲ್ಲ; ಅದರಲ್ಲಿ ನಮ್ಮ ಬದುಕೂ ಇದೆ. ಅನ್ನದ ಮೂಲದ ಭಾಷೆಯಾಗಿ ಕನ್ನಡವನ್ನು ಅಳವಡಿಸಿಕೊಂಡಾಗ ಮಾತ್ರ ಭಾಷೆಯ ಅಭಿವೃದ್ಧಿ ಸಾಧ್ಯ ಆಗುತ್ತದೆ. ಶಾಲಾ-ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಉಳಿಸಿ,ಬೆಳೆಸುವ ಕಾರ್ಯ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳಿಂದ ಭರತನಾಟ್ಯ, ಕಿರುನಾಟಕ, ಹಾಡು, ಕುಣಿತ, ಜನಪದ ನೃತ್ಯ, ವೀಣಾವಾದನ, ಫ್ಯಾಶನ್ ಶೋ, ಕಲಾವಿದರಿಂದ ಜಾದೂಗಾರಿಕೆ, ಡೊಳ್ಳುಕುಣಿತ, ಯಕ್ಷಗಾನ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಸಾಹಿತಿ ಟಿ.ಯಲ್ಲಪ್ಪ, ನಟಿ ಕಾರುಣ್ಯ ರಾಮ್, ಪ್ರೆಸಿಡೆನ್ಸಿ ಶಿಕ್ಷಣಸಂಸ್ಥೆಯ ಉಪಾಧ್ಯಕ್ಷ ಸುಹೇಲ್ ಅಹ್ಮದ್, ಪ್ರಾಂಶುಪಾಲರಾದ ಡಾ.ಪ್ರದೀಪ್ ಕುಮಾರ್, ಶೈಕ್ಷಣಿಕ ಸಂಯೋಜಕ ಗೌಹರ್, ಎಂಬಿಎ ವಿಭಾಗದ ಡೀನ್ ಚಂದನ್ ಚಾವಡಿ, ಕನ್ನಡ ಪ್ರಾಧ್ಯಾಪಕ ಪ್ರಭುದೇವ .ಸಿ ಮತ್ತಿತರರು ಉಪಸ್ಥಿತರಿದ್ದರು.

# ದೇವಾಲಯ ಉದ್ಘಾಟನೆ ಇಂದಿನಿಂದ

ಮಹಾಲಕ್ಷ್ಮಿ ಲೇಔಟ್‌ನ ಬಿಜಿಎಸ್ ಕ್ಯಾಂಪಸ್‌ನಲ್ಲಿ ಲೋಕಾರ್ಪಣೆಗೆ ಸಿದ್ಧವಾಗಿರುವ ಅಭಯ ಆಂಜನೇಯ ಸ್ವಾಮಿ, ಪ್ರಸನ್ನ ಮಹಾಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಿ ದೇವಾಲಯಕ್ಕೆ ಆದಿಚುಂಚನಗಿರಿ ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಹಾಗೂ ಸ್ಥಳೀಯ ಶಾಸಕ ಕೆ.ಗೋಪಾಲಯ್ಯ ಭಾನುವಾರ ಭೇಟಿ ನೀಡಿದರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾಲಕ್ಷ್ಮಿ ಲೇಔಟ್‌ನ ಬಿಜಿಎಸ್ ಕ್ಯಾಂಪಸ್‌ನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಅಭಯ ಆಂಜನೇಯ ಸ್ವಾಮಿ, ಪ್ರಸನ್ನ ಮಹಾಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಿ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣಾ ಸಮಾರಂಭ ಏಪ್ರಿಲ್ 14ರಿಂದ ಮೂರು ದಿನ ನೆರವೇರಲಿದೆ.

ಸೋಮವಾರ ವಿಜಯನಗರ ಮಠದಿಂದ ಆಂಜನೇಯ ಸ್ವಾಮಿ ವಿಗ್ರಹವನ್ನು ಮೆರವಣಿಗೆಯಲ್ಲಿ ಮಂಜುನಾಥ ನಗರದ ಮಾರ್ಗವಾಗಿ ಮೋದಿ ವೃತ್ತ, ಶಂಕರ ಮಠ ವೃತ್ತಕ್ಕೆ ತರಲಾಗುವುದು. ಅಲ್ಲಿಂದ ಕಳಸಹೊತ್ತ 500 ಮಹಿಳೆಯರು ಮತ್ತು 2,000 ಜನರ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ವಿಗ್ರಹ ತರಲಾಗುವುದು ಎಂದು ಆದಿಚುಂಚನಗಿರಿ ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಹಾಗೂ ಸ್ಥಳೀಯ ಶಾಸಕ ಕೆ. ಗೋಪಾಲಯ್ಯ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಗುರುಪ್ರಾರ್ಥನೆ, ಗ್ರಾಮ ದೇವತಾ ಪ್ರಾರ್ಥನೆ, ಮಹಾ ಗಣಪತಿ ಅನ್ನೋದಕ ಸಂಗ್ರಹ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಜೆ ವೇದ ಪಾರಾಯಣ ಇನ್ನಿತರ ಕಾರ್ಯಕ್ರಮಗಳು ನಡೆಯಲಿವೆ. ಮಂಗಳವಾರ ಬೆಳಿಗ್ಗೆ ಮತ್ತು ಸಂಜೆ ಹೋಮ, ಹವನಗಳು ನಡೆಯಲಿವೆ. ಬೆಳಿಗ್ಗೆ 10.30ಕ್ಕೆ ಧಾರ್ಮಿಕ ಸಭೆ, ಮಾತಾ ಲಲಿತ ಸಹಸ್ರನಾಮ ಪಾರಾಯಣ ಮತ್ತು ಸತ್ಸಂಗ- ಪ್ರವಚನ ನೆರವೇರಿಸಲಾಗುವುದು ಎಂದು ವಿವರಿಸಿದರು.

ಬುಧವಾರ ಪ್ರತಿಷ್ಠಾಪನೆಯ ನಂತರ ಮಂಡಲ ಪೂಜೆ ಆರಂಭವಾಗಲಿದೆ. 48 ದಿನಗಳವರಗೆ ಪ್ರತಿದಿನ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ತಿಳಿಸಿದರು.

ಬೆರಗು...

ನಗರದಲ್ಲಿ ಶನಿವಾರ ತಡರಾತ್ರಿ ತಿಗಳರಪೇಟೆಯ ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕರಗ ಮಹೋತ್ಸವದಲ್ಲಿ ಕರಗಧಾರಿ ಜ್ಞಾನೇಂದ್ರ ಅವರು ಕರಗ ಹೊತ್ತು ದೇವಸ್ಥಾನದಿಂದ ಹೊರಬಂದಾಗ ಭಕ್ತರು ಹೂಮಳೆಗೆರೆದು ಸ್ವಾಗತಿಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ


**ನೈಋತ್ಯ ರೈಲ್ವೆ**

ಇಓಐ ಟೆಂಡರು ಸೂಚನೆ ಸಂ.: B/MD/LP/Emp/2025 ದಿನಾಂಕ: 03.04.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನಂತೆ ವಿಶೇಷ ರೋಗನಿರ್ಣಯ ಸೇವೆಗಳನ್ನು ಒದಗಿಸಲು "ಡಯಗ್ನೋಸ್ಟಿಕ್ ಕೇಂದ್ರಗಳ ಎಂಪ್ಯಾನಲ್ಮೆಂಟ್" ಗಾಗಿ ಆಸಕ್ತಿಯ ಅಭಿವ್ಯಕ್ತಿಯನ್ನು ಆಹ್ವಾನಿಸಿದ್ದಾರೆ:

**ಹೆಸರು ಮತ್ತು ವಿವರಣೆ**

ಎ. ಸಿಜಿಹೆಚ್‌ಎಸ್ (ಬೆಂಗಳೂರು) ದರಗಳಲ್ಲಿ ಅಥವಾ ಕಡಿಮೆ ದರಗಳಲ್ಲಿ ಎರಡು ವರ್ಷಗಳ ಅವಧಿಗೆ ರೈಲ್ವೆಯಲ್ಲಿ ಅಗತ್ಯವಿರುವಂತೆ ವಿಶೇಷ ಪ್ರಯೋಗಾಲಯ, ಔಷಧ ಸೇವೆಗಳು ಮತ್ತು ಇತರ ವಿಶೇಷ ತನಿಖಾ ಸೇವೆಗಳನ್ನು ಒದಗಿಸುವುದು.

ಬಿ. ಸಿಜಿಹೆಚ್‌ಎಸ್ (ಬೆಂಗಳೂರು) ದರಗಳಲ್ಲಿ ಅಥವಾ ಕಡಿಮೆ ದರಗಳಲ್ಲಿ ಎರಡು ವರ್ಷಗಳ ಅವಧಿಗೆ ರೈಲ್ವೆಯಲ್ಲಿ ಅಗತ್ಯವಿರುವಂತೆ ಸಿಟಿ / ಎಂಆರ್‌ಐ / ಪಿಇಟಿ ಸ್ಕ್ಯಾನ್ / ಯುಎಸ್‌ಜಿ ಮತ್ತು ಇತರ ವಿಶೇಷ ತನಿಖೆಗಳಂತಹ ರೇಡಿಯೊಲಾಜಿಕಲ್ ಇಮೇಜಿಂಗ್ / ತನಿಖಾ ಸೇವೆಯನ್ನು ಒದಗಿಸುವುದು.

ಆಸಕ್ತಿಯ ಅಭಿವ್ಯಕ್ತತೆಯನ್ನು ಸ್ವೀಕರಿಸುವ ಕೊನೆಯ ದಿನಾಂಕ: **16.05.2025, 11:00 ಗಂಟೆಯವರೆಗೆ**
ಆಸಕ್ತಿಯ ಅಭಿವ್ಯಕ್ತತೆಯನ್ನು ತೆರೆಯುವ ದಿನಾಂಕ: **16.05.2025, 15:30 ಗಂಟೆಗೆ**

ಹೆಚ್ಚಿನ ಮಾಹಿತಿಗಾಗಿ swr.indianrailways.gov.in ಗೆ ಲಾಗ್ ಆನ್ ಆಗಿ

ಮುಖ್ಯ ವೈದ್ಯಕೀಯ ಮೇಲ್ವಿಚಾರಕರು / ಬೆಂಗಳೂರು

PUB/20/AAMO/PRB/SWR/2025-26

South Western Railway - SWR | SWRRLY | SWRRLY

ಕೋರಮಂಗಲದಲ್ಲಿ ಆರಂಭವಾಗಿರುವ ಜೋಯಾಲುಕ್ಕಾಸ್‌ನ ನೂತನ ಮಳಿಗೆಯನ್ನು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಉದ್ಘಾಟಿಸಿದರು. ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಮೊಹ್ಮದ್ ರಿಜ್ವಾನ್ ನವಾಬ್, ಎಮ್ಮಾರ್ ಪ್ರಾಪರ್ಟೀಸ್‌ನ ಸಿಇಒ ಮೊಹಮ್ಮದ್ ರಿಹಾನ್ ನವಾಬ್, ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್, ಜಾಲಿ ಜೋಯ್ ಆಲುಕ್ಕಾಸ್, ಜಾನ್ ಪೌಲ್ ಆಲುಕ್ಕಾಸ್, ಆಂಟೊನಿ ಜಾಸ್, ಥಾಮಸ್ ಮ್ಯಾಥ್ಯೂ, ಎಲ್ಸಾ ಜೋಯ್ ಆಲುಕ್ಕಾಸ್ ಮತ್ತು ಗ್ರಾಹಕರು ಹಾಜರಿದ್ದರು

19 ಸಾವಿರ ಮೆಗಾವಾಟ್ ಗುರಿ, ಟೆಂಡರ್ ಪ್ರಕ್ರಿಯೆಗೆ ಸಿದ್ಧತೆ

# ಸೌರ–ಪವನ ವಿದ್ಯುತ್ ಉತ್ಪಾದನೆ

• ಸ್ನೇಹಾ ರಮೇಶ್

**ಮುಖ್ಯಾಂಶಗಳು**

- ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹೊಸ ಹೆಜ್ಜೆ
- ವಿದ್ಯುತ್ ಉತ್ಪಾದನೆ ಜೊತೆಗೆ, ಸಂಗ್ರಹಕ್ಕೂ ಆದ್ಯತೆ
- ಪಿಪಿಪಿ ಮಾದರಿಯಲ್ಲಿ ಯೋಜನೆ ಅನುಷ್ಠಾನ

**ಬೆಂಗಳೂರು:** ರಾಜ್ಯದಲ್ಲಿ 19 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆ ಅನುಷ್ಠಾನಕ್ಕೆ ಪ್ರಕ್ರಿಯೆ ಆರಂಭವಾಗಿದೆ. ಜೊತೆಗೆ, ಸಂಯೋಜಿತ ವಿಧಾನದ ಮೂಲಕ ಉತ್ಪಾದನೆಯಾಗುವ ವಿದ್ಯುತ್ ಅನ್ನು ಸಂಗ್ರಹಿಸುವ ಬ್ಯಾಟರಿಗಳ ಮತ್ತು ಪ್ರಸರಣ ಮಾರ್ಗಗಳ ಸ್ಥಾಪಿಸುವ ಯೋಜನೆಯನ್ನೂ ರೂಪಿಸಲಾಗಿದೆ.

ಈ ಯೋಜನೆ ಅನುಷ್ಠಾನಕ್ಕೆ ಟೆಂಡರ್ ಪ್ರಕ್ರಿಯೆ ಆರಂಭಿಸಲು ಇಂಧನ ಇಲಾಖೆ ಸಿದ್ಧತೆ ನಡೆಸಿದೆ. 2030ರ ವೇಳೆಗೆ ಗುರಿ ಸಾಧಿಸುವ ಯೋಜನೆ ಇದೆ.

‘ಈ ಯೋಜನೆ ಸೌರ ಮತ್ತು ಪವನ ವಿದ್ಯುತ್ ಎರಡನ್ನೂ ಒಟ್ಟಾಗಿ ಬಳಸಿಕೊಳ್ಳುವುದನ್ನು ಕೇಂದ್ರೀಕರಿಸುತ್ತದೆ. ಇದರಿಂದ ಉತ್ಪಾದನೆಯಾಗುವ ವಿದ್ಯುತ್ ಸಂಗ್ರಹಿಸಲು ಬ್ಯಾಟರಿ ವ್ಯವಸ್ಥೆ ಅಥವಾ ಪ್ರಸರಣದ ಮಾರ್ಗ ಮಧ್ಯೆ ಸಂಗ್ರಹಿಸಿಟ್ಟುಕೊಂಡು ಅಗತ್ಯವಿದ್ದಾಗ ಬಳಕೆ ಮಾಡಬಹುದಾದ (ಪಂಪ್ಡ್ ಸ್ಟೋರೇಜ್) ಹೊಸ ವ್ಯವಸ್ಥೆಯನ್ನು ರೂಪಿಸಲಾಗುವುದು’ ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ತಿಳಿಸಿದರು.

‘ಬೆಳಿಗ್ಗೆ ವೇಳೆ ಸೌರಶಕ್ತಿ ಉತ್ಪಾದನೆ ಹೆಚ್ಚಿರುತ್ತದೆ. ಸಂಜೆ ವೇಳೆ ಪವನ ಶಕ್ತಿ ಉತ್ಪಾದನೆ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಆದ್ದರಿಂದ, ನಾವು ಹೈಬ್ರಿಡ್ ಮಾದರಿಯನ್ನು ಅನುಸರಿಸಿಕೊಂಡು, ಸಾಮಾನ್ಯ ಪ್ರಸರಣ ಮಾರ್ಗಗಳನ್ನು ಬಳಸಲು ಆಯ್ಕೆ ಮಾಡಿಕೊಂಡಿದ್ದೇವೆ. ಇದನ್ನು ಸಂಗ್ರಹ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗುತ್ತದೆ’ ಎಂದು ಅವರು ವಿವರಿಸಿದರು.

ವಿದ್ಯುತ್ ಸಂಗ್ರಹ ವ್ಯವಸ್ಥೆಯ ಕೊರತೆಯಿಂದಾಗಿ, ರಾಜ್ಯದಲ್ಲಿ ಕೆಲವೊಮ್ಮೆ ಬೇಡಿಕೆ (ಪೀಕ್) ಅವಧಿಯಲ್ಲಿ ವಿದ್ಯುತ್ ಕೊರತೆ ಎದುರಾಗುತ್ತದೆ. ಹಾಗೆಯೇ, ದಟ್ಟಣೆ ಇಲ್ಲದ ಅವಧಿಯಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಈ ಹೊಸ ನವೀಕರಿಸಬಹುದಾದ ವಿದ್ಯುತ್ ಯೋಜನೆಯಿಂದ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಸುಧಾರಿಸುವುದಲ್ಲದೆ, ಹೆಚ್ಚು ಉತ್ಪಾದನೆ ಆಗುವ ವಿದ್ಯುತ್ ಸಂಗ್ರಹಿಸಿ ದಟ್ಟಣೆ ಅವಧಿಯಲ್ಲಿ ಬಳಸಲು ಸಹಾಯವಾಗುತ್ತದೆ.

ಈ ಯೋಜನೆಯ ಗುರಿ 19 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆ. ಈ ಯೋಜನೆಯನ್ನು ಬೆಳಗಾವಿ, ಕೊಪ್ಪಳ, ರಾಯಚೂರು, ಗದಗ ಮತ್ತು ಹಾವೇರಿಯಂತಹ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಮತ್ತು ಮಧ್ಯ ಕರ್ನಾಟಕದ ಜಿಲ್ಲೆ ಚಿತ್ರದುರ್ಗದಲ್ಲಿ ಅನುಷ್ಠಾನಗೊಳಿಸಿ 15 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಪ್ರಸ್ತಾವವಿದೆ.

ಯೋಜನೆ ಅನುಷ್ಠಾನಕ್ಕೆ ಹಲವು ಜಿಲ್ಲೆಗಳಲ್ಲಿ ಜಮೀನುಗಳನ್ನು ಗುರುತಿಸಲಾಗಿದೆ. ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ರೈತರೊಂದಿಗೆ ಮಾತುಕತೆ ಪೂರ್ಣಗೊಂಡಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಪಂಕಜ್‌ಕುಮಾರ್ ಪಾಂಡೆ ತಿಳಿಸಿದರು.

ಈ ಯೋಜನೆ ಕುರಿತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಸಂಸ್ಥೆ (ಕೆಆರ್‌ಇಡಿಎಲ್) ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಅವರನ್ನು ಕೇಳಿದಾಗ, ‘ಸಾಮಾನ್ಯವಾಗಿ ಇಂಥ ಯೋಜನೆಗಳ ಅನುಷ್ಠಾನಕ್ಕೆ ದೀರ್ಘ ಸಮಯ ಬೇಕಾಗುತ್ತದೆ. ಯೋಜನೆಗಳನ್ನು ರೂಪಿಸಿ, ಅದಕ್ಕೆ ಹಲವು ಕಡೆಗಳಿಂದ ಅನುಮತಿ ಪಡೆಯಬೇಕು. ಇಂಥ ಪ್ರಕ್ರಿಯೆಗಳು ಹೆಚ್ಚು ಸಮಯ ಕೇಳುತ್ತವೆ. ಇವುಗಳ ನಡುವೆಯೂ ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಕರ್ನಾಟಕವು ದೇಶದ ಮುಂಚೂಣಿ ಐದು ರಾಜ್ಯಗಳಲ್ಲಿ ಒಂದಾಗಿದೆ’ ಎಂದು ಹೇಳಿದರು.

## ಸಂಕ್ಷಿಪ್ತ ಸುದ್ದಿ

### ಸಮ್ಮೇಳನಾಧ್ಯಕ್ಷರಾಗಿ ಕೋಟಿಗಾನಹಳ್ಳಿ ಆಯ್ಕೆ

ಕೋಟಿಗಾನಹಳ್ಳಿ ರಾಮಯ್ಯ

**ಬೆಂಗಳೂರು:** ದಲಿತ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿರುವ ಬೆಂಗಳೂರು ನಗರ ಜಿಲ್ಲಾ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಆಯ್ಕೆಯಾಗಿದ್ದಾರೆ.

ಇದೇ 22ರಂದು ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ಬೆಳಿಗ್ಗೆ 8.30ರಿಂದ ಸಮ್ಮೇಳನ ನಡೆಯಲಿದೆ. ಬಿಬಿಎಂಪಿ ಕೇಂದ್ರ ಕಚೇರಿಯಿಂದ ನಯನ ಸಭಾಂಗಣದವರೆಗೆ ನಡೆಯುವ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಜಾನಪದ ವಿದ್ವಾಂಸ ಬಾನಂದೂರು ಕೆಂಪಯ್ಯ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಸಮ್ಮೇಳನ ಉದ್ಘಾಟಿಸುತ್ತಾರೆ. ಮೂರು ವಿಚಾರಗೋಷ್ಠಿ ಹಾಗೂ ಒಂದು ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಗೌಡಗೆರೆ ಮಾಯುಶ್ರೀ ತಿಳಿಸಿದ್ದಾರೆ.

### ಕಾವ್ಯಾನಂದ ಪುರಸ್ಕಾರಕ್ಕೆ ಆಹ್ವಾನ

**ಬೆಂಗಳೂರು:** ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ 2024ನೇ ಸಾಲಿನ ‘ಕಾವ್ಯಾನಂದ’ ಪುರಸ್ಕಾರಕ್ಕಾಗಿ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದ ಕೃತಿಗಳನ್ನು ಆಹ್ವಾನಿಸಿದೆ. 2023ರ ಜನವರಿ ಮತ್ತು 2024ರ ಡಿಸೆಂಬರ್ ವರೆಗೆ (ಎರಡು ವರ್ಷ) ಪ್ರಕಟವಾಗಿರುವ ಕೃತಿಗಳನ್ನು ಪುರಸ್ಕಾರಕ್ಕೆ ಪರಿಗಣಿಸಲಾಗುತ್ತದೆ. ಈ ಪುರಸ್ಕಾರವು ₹50ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

ಆಸಕ್ತರು ಕೃತಿಯ ಮೂರು ಪ್ರತಿಗಳನ್ನು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀಗಿರಿ, 4/5ಎ, ಅಲಿ ಆಸ್ಕರ್ ರಸ್ತೆ, ಬೆಂಗಳೂರು– 560052 ಈ ವಿಳಾಸಕ್ಕೆ ಜೂನ್ 30ರ ಒಳಗಾಗಿ ಕಳುಹಿಸಿ ಕೊಡಬೇಕೆಂದು ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 22264361

## ನಗರದಲ್ಲಿ ಇಂದು

**ಅಭಯಾಂಜನೇಯಸ್ವಾಮಿ, ಪ್ರಸನ್ನ ಮಹಾಗಣಪತಿ ಮತ್ತು ಮಾತಾ ಲಲಿತಾಂಬಿಕಾ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಮತ್ತು ಲೋಕಾರ್ಪಣಾ ಸಮಾರಂಭ:** ಹನುಮದುತ್ಸವದ ಉದ್ಘಾಟನೆ: ಶೋಭಾ ಕರಂದ್ಲಾಜೆ, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉಪಸ್ಥಿತಿ: ತೇಜಸ್ವಿ ಸೂರ್ಯ, ಎಂ. ಕೃಷ್ಣಪ್ಪ, ಆಯೋಜನೆ: ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಸ್ಥಳ: ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠ, ವಿಜಯನಗರ, ಬೆಳಿಗ್ಗೆ 9



ನಿರ್ಮಲಾನಂದನಾಥ ಸ್ವಾಮೀಜಿ

**ಹುತಾತ್ಮರ ದಿನಾಚರಣೆ ಮತ್ತು ಧ್ವಜ ದಿನಾಚರಣೆ:** ಮುಖ್ಯ ಅತಿಥಿ: ಪ್ರಶಾಂತ್ ಕುಮಾರ್ ಠಾಕೂರ್, ಉಪಸ್ಥಿತಿ: ಎಂ. ನಂಜುಂಡಸ್ವಾಮಿ, ರವಿ. ಡಿ. ಚನ್ನಣ್ಣನವರ್, ಆಯೋಜನೆ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

**57ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಶಿಕ್ಷಣ ಹಾಗೂ ಮನರಂಜನಾ ಶಿಬಿರ ಉದ್ಘಾಟನಾ ಸಮಾರಂಭ:** ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಮುಖ್ಯ ಅತಿಥಿ: ಕೃಷ್ಣಬಾಯಿ ಹಾಗಲವಾಡಿ, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಣ್ಣಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಮಧ್ಯಾಹ್ನ 3

**ಬೆಂಗಳೂರು ಕರಗ ಮಹೋತ್ಸವ:** ವಸಂತೋತ್ಸವ, ಧ್ವಜಾರೋಹಣ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 4

### ಅಂಬೇಡ್ಕರ್ ಜಯಂತಿ

**ಬಿ.ಆರ್. ಅಂಬೇಡ್ಕರ್ ಜಯಂತಿ:** ಅಧ್ಯಕ್ಷತೆ: ಕೆ.ಆರ್. ಜಲಜಾ, ಮುಖ್ಯ ಅತಿಥಿ: ಬಿ.ಎಂ. ಪುಟ್ಟಯ್ಯ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 9

**ಬಿ.ಆರ್. ಅಂಬೇಡ್ಕರ್ ಜಯಂತಿ:** ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಉಪನ್ಯಾಸ: ಶ್ರೀಪಾದ ಭಟ್, ಮುಖ್ಯ ಅತಿಥಿ: ಶಿವಪ್ಪ ಎನ್. ಅಂಬ್ಲೀಕರ್, ಬಹುಮಾನ ವಿತರಣೆ: ನಿತೀಶ್ ನಾರಾಯಣ್, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀಧಿ, ಬೆಳಿಗ್ಗೆ 9

**ಬಿ.ಆರ್. ಅಂಬೇಡ್ಕರ್ ಜಯಂತಿ:** ಅಧ್ಯಕ್ಷತೆ: ಜಯಕರ ಎಸ್.ಎಂ., ಮುಖ್ಯ ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಕೃಷ್ಣ ರಾಜ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 9.30

**ಬಿ.ಆರ್. ಅಂಬೇಡ್ಕರ್ ಜಯಂತಿ:** ಅತಿಥಿಗಳು: ಪ್ರದೀಪ್ ಸಿಂಗ್ ಯೆರೂರ್, ಎಂ. ಮಹಾದೇವ, ಎ.ಆರ್. ಕೃಷ್ಣಮೂರ್ತಿ, ಎಸ್. ಶಿವಮಲ್ಲು, ಬಿ.ಎನ್. ಉಮೇಶ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಾಗರಬಾವಿ, ಬೆಳಿಗ್ಗೆ 10

**ಬಿ.ಆರ್. ಅಂಬೇಡ್ಕರ್ ಜಯಂತಿ ಮತ್ತು ‘ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ’ ಪ್ರದಾನ ಸಮಾರಂಭ:** ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಉಪಸ್ಥಿತಿ: ಎಚ್.ಸಿ.ಮಹದೇವಪ್ಪ, ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಸ್ಥಳ: ವಿಧಾನಸೌಧದ ಮೆಟ್ಟಿಲುಗಳು, ವಿಧಾನಸೌಧ, ಬೆಳಿಗ್ಗೆ 10.30

ಅಂಬೇಡ್ಕರ್

**ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಸಂಘದ ಕೇಂದ್ರ ಕಚೇರಿ ಉದ್ಘಾಟನೆ:** ರಾಮಲಿಂಗಾರೆಡ್ಡಿ, ಜಮೀರ್ ಅಹಮದ್ ಖಾನ್, ನಲಪಾಡ್, ಎಚ್. ಸಿ. ಮಹದೇವಪ್ಪ, ಸೌಮ್ಯಾ ರೆಡ್ಡಿ, ‘ದುನಿಯಾ’ ವಿಜಯ್, ಚೇತನ್ ಅಹಿಂಸಾ, ಎ.ಆರ್. ಗೋವಿಂದಸ್ವಾಮಿ, ಮಣಿವಣ್ಣನ್ ಪಿ., ಕೆ. ಶಿವಕುಮಾರ್, ಆಯೋಜನೆ ಹಾಗೂ ಸ್ಥಳ: ಅಖಿಲ ಭಾರತೀಯ ಪರಿಶಿಷ್ಟ ಜಾತಿ ಯುವಜನ ಸಮಾಜ ಸಂಘ, ಶಾಂತಿನಗರ, ಬೆಳಿಗ್ಗೆ 11

**ಬೃಹತ್ ಕಾಲ್ನಡಿಗೆ ಜಾಥಾ:** ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಬನ್ನಪ್ಪ ಪಾರ್ಕ್‌ನಿಂದ ವಿಧಾನಸೌಧದವರೆಗೆ, ಬೆಳಿಗ್ಗೆ 11.30

**ಭೀಮ ರಥೋತ್ಸವ ಮತ್ತು ‘ಭೀಮ ರತ್ನ’ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಡಾ.ಎಚ್.ಆರ್. ಸುರೇಂದ್ರ, ಮುಖ್ಯ ಭಾಷಣ: ಇಂದಿರಾ ಕೃಷ್ಣಪ್ಪ, ಎಂ. ಸುಮಿತ್ರ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಮಧ್ಯಾಹ್ನ 12

**87ನೇ ರಾಮೋತ್ಸವ ಸಮಾರಂಭ:** ಸೀತಾ ಕಲ್ಯಾಣೋತ್ಸವ, ನೇತೃತ್ವ: ನಾಗೇಶ್ ಶರ್ಮ ಮತ್ತು ತಂಡ, ಆಯೋಜನೆ: ಎನ್. ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

**ಪ್ರಸನ್ನ ಅವರ ‘ಆ್ಯಕ್ಟಿಂಗ್ ಆ್ಯಂಡ್ ಬಿಯಾಂಡ್’ ಪುಸ್ತಕ ಬಿಡುಗಡೆ ಮತ್ತು ಚರ್ಚೆ:** ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಬಂಜಗೆರೆ ಜಯಪ್ರಕಾಶ್, ಮಂಜುನಾಥ್ ಬಿ.ಆರ್., ಪ್ರಸನ್ನ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

**87ನೇ ಶ್ರೀ ರಾಮನವಮಿ ಸಂಗೀತೋತ್ಸವ:** ಜ್ಯೋತ್ಸ್ನಾ ಹೆಬ್ಬಾರ್ ಮತ್ತು ತಂಡ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಸುಧಾ ರಘುನಾಥನ್, ಎಂಭಾರ್ ಎಸ್. ಕಣ್ಣನ್, ನೈವೇಲಿ ಸ್ಕಂದಸುಬ್ರಮಣಿಯನ್, ಆರ್. ರಾಮನ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5.30

**ವಿಹಾರಿಕಾ ಅಂಜನಾ ಹೊಸಕೇರಿ ಅವರ ‘ಪ್ರವಾಸದ ಆ ದಿನಗಳು’ ಪುಸ್ತಕ ಬಿಡುಗಡೆ:** ಎಚ್.ಎಲ್. ಪುಷ್ಪ, ಅಧ್ಯಕ್ಷತೆ: ಸುಕನ್ಯಾ ಬಿ. ಮಾರುತಿ, ಕೃತಿ ಬಗ್ಗೆ ಮಾತು: ರವಿಶಂಕರ್ ಎ.ಕೆ., ಉಪಸ್ಥಿತಿ: ಮಲ್ಲೇಪುರಂ ಜಿ. ವೆಂಕಟೇಶ, ಆಯೋಜನೆ: ಉದಯ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

**‘ಶ್ರೀಮದ್ಭಾಗವತ’ ಪ್ರವಚನ:** ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಪೂರ್ಣಪ್ರಜ್ಞ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

**ವಿದ್ಯಾಸಾಗರ ಮಾಧವತೀರ್ಥ ಸ್ವಾಮೀಜಿ ‘ಗುರು ಸಂಸ್ಮರಣೆ’:** ಉಪಸ್ಥಿತಿ: ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ವಿದ್ಯಾವಲ್ಲಭಮಾಧವತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ (ಸೋಸಲೆ), ಗಾಂಧಿಬಜಾರ್, ಸಂಜೆ 6.30

**25ನೇ ವರ್ಷದ ಪ್ರವಚನ ವಾಹಿನಿ:** ‘ಅಲ್ಲಮ ಪ್ರಭು–ಸಿದ್ಧರಾಮ’ ಉಪನ್ಯಾಸ: ಸಿ.ಯು. ಮಂಜುನಾಥ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30


ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

**REAL ESTATE SELLING**

General — Multiple Locations

FOR ALL REAL ESTATE SOLUTIONS, A LEADING 35 YEARS EXPERIENCED REAL ESTATE COMPANY CONTACT VICTORY PROPERTIES, 7411692219/ 8618576685, info@victorypropertie s.in, www.victorypropertie s.in

Joint Development — General

INVEST IN REAL ESTATE PROPERTIES, BANGALORE SOUTH AND HAROHALLI SURROUNDING, WITH GOOD RETURNS CONTACT VICTORY PROPERTIES 861856685/ 7411692219, www.victorypropertie s.in info@victorypropertie s.in

**RENTAL PROPERTIES**

Accommodation Available — House

**RENT GIRINAGAR** 2BHK Attached 1st Floor Semi-furnished, Hanumanthnagar 2BHK DH Ground floor Semi-furnished, 1BHK 1st Floor Semi-furnished. owner: 78925-30410/ 94488-09902

**AUTOMOTIVE**

Four Wheelers Selling — Hyundai

SALE I10 2011, AUTOMATIC, 3RD OWNER, 71000 KMS, SILVER, EXCELLENT CONDITION, GOOD TYRES, CALL 8722123445/ 9538123445

**BUSINESS**

Business to Business — Business

FOR ALL BRANDING/ SOCIAL MEDIA/ HOARDINGS/ BUSBACK/ AUTOBACK ADVERTISEMENT/ FOR CORPORATES, EDUCATIONAL INSTITUTIONS, GOLD JEWELLERY COMPANIES AND ALL TYPES OF BUSINESS PROMOTIONAL PACKAGES CONTACT: VENUSCAST TECHNOLOGIES PVT LTD, CALL 8722123445/ 9538123445, www.venuscast.com, INDIA & UAE

**BUILDERS ESSENTIAL**

Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology-9880916988

**JOB OPPORTUNITIES**

Graphic Designers

**WANTED MALE** Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

Engg/ Production Technical

**REQUIRED ITI/** DEE/ JOC ELECTRICAL Candidates FOR ELECTRICAL MAINTENANCE IN BANGALORE FRESH 2 YEARS EXPERIENCED 7353763801, 7353779797, 7353779800

Accounts & Finance

**WANTED FEMALE** Office Assistant Any Degree Knowing Tally Fluent In English, Kannada, Hindi, Location: Rajajinagar Contact: 9108458798

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds More value, more impact | ಪ್ರಜಾವಾಣಿ | EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
*Conditions apply
For more details contact: +91 9731810277 | +91 9886213331 080- 45557163/164

ರಾತ್ರಿ ವೇಳೆ ಮನೆಗಳಿಗೆ ಕನ್ನ • ನಿವಾಸಿಗಳಿಗೆ ಆತಂಕ • ಗಸ್ತು ಹೆಚ್ಚಿಸಲು ಆಗ್ರಹ

# ಕೆಲಸದವರಿಂದಲೇ ಕೃತ್ಯ: ಶೇ 20 ಏರಿಕೆ

• ಆದಿತ್ಯ ಕೆ.ಎ.

**ಬೆಂಗಳೂರು:** ಮನೆಯ ಬೀಗ ಒಡೆದು ನಗದು, ಚಿನ್ನಾಭರಣ ದೋಚುತ್ತಿರುವ ಹಾಗೂ ಮುಸುಕುಧಾರಿಗಳಾಗಿ ಬಂದು ಬಂದೂಕು, ಚಾಕು ತೋರಿಸಿ ಬೆದರಿಸಿ ದರೋಡೆ ನಡೆಸುತ್ತಿರುವ ಪ್ರಕರಣಗಳು ನಗರದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಅದರಲ್ಲೂ ಮನೆಯಲ್ಲಿ ಕೆಲಸಕ್ಕೆ ನೇಮಿಸಿಕೊಂಡವರೇ ನಡೆಸುತ್ತಿರುವ ಕಳ್ಳತನ ಪ್ರಕರಣಗಳು ನಗರದಲ್ಲಿ ಶೇ 20ರಷ್ಟು ಏರಿಕೆಯಾಗಿವೆ.

ಕಳ್ಳರ ಕೈಚಳಕವು ಮನೆಯ ಮಾಲೀಕರು ಹಾಗೂ ಬಾಡಿಗೆದಾರರಿಗೆ ಅಭದ್ರತೆ ಕಾಡುವಂತೆ ಮಾಡಿದೆ. ಅದರಲ್ಲೂ ಹೊರವಲಯದ ಮನೆಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ಆತಂಕದಲ್ಲೇ ಕಾಲ ಕಳೆಯುತ್ತಿದ್ದಾರೆ.

ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಶಾಲೆಗಳಿಗೆ ರಜೆಯಿದ್ದು, ಪ್ರವಾಸ ಹಾಗೂ ಊರಿಗೆ ತೆರಳುವವರ ಸಂಖ್ಯೆ ಹೆಚ್ಚು. ಇದೇ ಸಂದರ್ಭವನ್ನು ಬಳಸಿಕೊಂಡು ಕಳ್ಳರು ಕೃತ್ಯ ಎಸಗುವ ಸಾಧ್ಯತೆಯಿದೆ. ನಿವಾಸಿಗಳು ಮುನ್ನೆಚ್ಚರಿಕೆ ಕೈಗೊಳ್ಳಬೇಕು ಎಂದು ನಗರ ಪೊಲೀಸರು ಮನವಿ ಮಾಡಿದ್ದಾರೆ.

ಕಳೆದ 10 ದಿನಗಳಲ್ಲಿ ನಗರದ ಕೆಲವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆ ಕಳ್ಳತನ ಪ್ರಕರಣಗಳು ಹೆಚ್ಚು ವರದಿ ಆಗುತ್ತಿವೆ ಎಂದು ಮೂಲಗಳು ತಿಳಿಸಿವೆ.

ಕಳ್ಳರು ಹಗಲು ವೇಳೆ ಅಡ್ಡಾಡಿ ಬೀಗ ಹಾಕಿದ್ದ ಮನೆಗಳನ್ನು ಗುರುತಿಸಿ, ರಾತ್ರಿ ವೇಳೆ ಮನೆಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿ ಪರಾರಿ ಆಗುತ್ತಿರುವ ಘಟನೆಗಳು ವರದಿಯಾಗುತ್ತಿವೆ.

ಇಂದಿರಾನಗರದ ಮನೆಯೊಂದಕ್ಕೆ ಆರೋಪಿ ನುಗ್ಗಿ ನಗದು ಹಾಗೂ ಚಿನ್ನಾಭರಣ ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ

> **ಜನರು ಹಣ, ಆಭರಣವನ್ನು ಸಣ್ಣ ಅಜಾಗರೂಕತೆಯಿಂದಾಗಿ ಕಳೆದುಕೊಳ್ಳುತ್ತಿದ್ದಾರೆ. ಮನೆ ಕೆಲಸದವರನ್ನು ನೇಮಿಸಿಕೊಳ್ಳುವ ಮುನ್ನ ವಿಚಾರಿಸಿಕೊಳ್ಳಬೇಕು**
> **ಬಿ.ದಯಾನಂದ**
> ನಗರ ಪೊಲೀಸ್ ಕಮಿಷನರ್

> **ನಗರ ನಿವಾಸಿಗಳಿಗೆ ಸುರಕ್ಷತೆ ಒದಗಿಸಲು ಹಾಗೂ ಕಳ್ಳತನ ಪ್ರಕರಣಗಳಿಗೆ ಕಡಿವಾಣ ಹಾಕಲು ದಕ್ಷಿಣ ವಿಭಾಗದಲ್ಲಿ ಜಾರಿಗೆ ತಂದಿರುವ ಕ್ರಮವನ್ನು ಬಳಸಿಕೊಳ್ಳಬೇಕು**
> **ಲೋಕೇಶ್ ಬಿ. ಜಗಲಾಸರ್**
> ಡಿಸಿಪಿ, ದಕ್ಷಿಣ ವಿಭಾಗ

2023ರಲ್ಲಿ ರಾತ್ರಿ ವೇಳೆ ಮನೆ ಕಳ್ಳತನಕ್ಕೆ ಸಂಬಂಧಿಸಿದಂತೆ 878 ಪ್ರಕರಣಗಳು ವರದಿ ಆಗಿದ್ದವು. 2024ರಲ್ಲಿ ಇದೇ ರೀತಿಯ 764 ಪ್ರಕರಣಗಳು ವರದಿ ಆಗಿದ್ದವು. ಈ ವರ್ಷ ಮೂರು ತಿಂಗಳಲ್ಲೇ 60 ಕಳ್ಳತನ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಿತಿವಂತ ಕುಟುಂಬದವರು ಹಾಗೂ ಉದ್ಯೋಗಸ್ಥರು ಮನೆ ಕೆಲಸಕ್ಕೆ ಕಡಿಮೆ ಸಂಬಳಕ್ಕೆ ಹೊರ ರಾಜ್ಯದವರನ್ನೇ ಹೆಚ್ಚಾಗಿ ನೇಮಿಸಿಕೊಳ್ಳುತ್ತಾರೆ. ಅವರನ್ನು ನಂಬಿ ಮನೆಯ ಜವಾಬ್ದಾರಿ ಬಿಟ್ಟು ಹೋಗುತ್ತಿದ್ದಾರೆ. ಆ ಕೆಲಸಗಾರರೇ ಹಣ, ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿರುವ ಘಟನೆಗಳು ವರದಿಯಾಗಿವೆ.

ಮನೆ ಕೆಲಸಗಾರರಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಕಳ್ಳತನ ನಡೆದಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ. ಮನೆ ಕೆಲಸದವರಿಂದ 2023ರಲ್ಲಿ 320 ಹಾಗೂ 2024ರಲ್ಲಿ 382 ಕಳ್ಳತನ ಪ್ರಕರಣಗಳು ನಡೆದಿವೆ.

ಕಳ್ಳತನ ಪ್ರಕರಣಗಳನ್ನು ನಿಯಂತ್ರಣಕ್ಕೆ ತರಲು ದಕ್ಷಿಣ ವಿಭಾಗದ ಪೊಲೀಸರು ಜಾರಿಗೆ ತಂದಿರುವ ವಿನೂತನ ಕ್ರಮವು ಫಲ ನೀಡುತ್ತಿದೆ. ಶುಭ ಸಮಾರಂಭ, ಪ್ರವಾಸಕ್ಕೆ ತೆರಳುವಾಗ ದಕ್ಷಿಣ ವಿಭಾಗ ವ್ಯಾಪ್ತಿಯ ಪೊಲೀಸರಿಗೆ ಮಾಹಿತಿ ನೀಡಿದರೆ ಸಾಕು ಅವರೇ ಮನೆಯ ಮೇಲೆ ನಿಗಾ ಇಡುತ್ತಿದ್ದಾರೆ.

‘ಮನೆಗೆ ಬೀಗ ಹಾಕಿಕೊಂಡು ಎರಡು ಅಥವಾ ಮೂರು ದಿನಗಳು ಹೊರ ಹೋಗುವ ಸಂದರ್ಭದಲ್ಲಿ ದಕ್ಷಿಣ ವಿಭಾಗದ ನಿಯಂತ್ರಣ ಕೊಠಡಿ 080-22943111 ಅಥವಾ 9480801500ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಮನೆಯ ವಿಳಾಸ, ಫೋಟೊ ಹಾಗೂ ದೂರವಾಣಿ ಸಂಖ್ಯೆ ವಿವರ ನೀಡಬೇಕು. ಸ್ಥಳೀಯ ಪೊಲೀಸರಿಗೆ ನಿಯಂತ್ರಣ ಕೊಠಡಿಯ ಸಿಬ್ಬಂದಿ ಮಾಹಿತಿ ನೀಡುತ್ತಾರೆ. ಗಸ್ತು ಸಿಬ್ಬಂದಿ ಬೀಗ ಹಾಕಿದ ಮನೆಗಳತ್ತ ನಿಗಾ ವಹಿಸಲಿದ್ದಾರೆ. ಈ ಕ್ರಮವು ಯಶಸ್ಸು ಕಂಡಿದೆ. ಇತರೆ ವಿಭಾಗಗಳಲ್ಲೂ ಜಾರಿಗೆ ತರುವ ಆಲೋಚನೆ ಇದೆ’ ಎಂದು ಮೂಲಗಳು ತಿಳಿಸಿವೆ.

**ನಗರದಲ್ಲಿ ನಡೆದ ಕಳ್ಳತನ ಪ್ರಕರಣಗಳು**

| | 2023 | | 2024 | | 2025(ಮಾರ್ಚ್ ಅಂತ್ಯಕ್ಕೆ) | |
|---|---|---|---|---|---|---|
| ಪ್ರಕರಣಗಳು | ವರದಿ | ಪತ್ತೆ | ವರದಿ | ಪತ್ತೆ | ವರದಿ | ಪತ್ತೆ |
| ಕೆಲಸದವರಿಂದ ಕಳ್ಳತನ | 320 | 174 | 383 | 145 | 45 | 32 |
| ಮನೆ ಕಳ್ಳತನ | 1,694 | 495 | 1,394 | 346 | 158 | 70 |

**ಮನೆಯ ಬಾಗಿಲು ಒಡೆದು ಚಿನ್ನ, ನಗದು ಕಳ್ಳತನ (ಎಚ್‌ಬಿಟಿ ಪ್ರಕರಣ)**

| | 2023 | | 2024 | | 2025(ಮಾರ್ಚ್ ಅಂತ್ಯಕ್ಕೆ) | |
|---|---|---|---|---|---|---|
| ಪ್ರಕರಣಗಳು | ವರದಿ | ಪತ್ತೆ | ವರದಿ | ಪತ್ತೆ | ವರದಿ | ಪತ್ತೆ |
| ಹಗಲು ಕಳ್ಳತನ | 264 | 152 | 182 | 85 | 45 | 28 |
| ರಾತ್ರಿ ಕಳ್ಳತನ | 878 | 346 | 764 | 292 | 60 | 32 |

### ಹಲವು ಗ್ಯಾಂಗ್ ಸಕ್ರಿಯ

ನಗರದಲ್ಲಿ ಇರಾನಿ, ನೇಪಾಳಿ, ಓಜಿಕುಪ್ಪಂ ಹಾಗೂ ಬೆಡ್‌ಶೀಟ್ ಗ್ಯಾಂಗ್ ಸಕ್ರಿಯವಾಗಿವೆ. ಹಲವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ತಂಡಗಳು ಮನೆಗೆ ನುಗ್ಗಿ ಕಳ್ಳತನ ಮಾಡುತ್ತಿರುವುದು ಪೊಲೀಸರ ತನಿಖೆ ವೇಳೆ ಪತ್ತೆಯಾಗಿದೆ.

ಕಳೆದ ವಾರ ತಲಘಟ್ಟಪುರ ಠಾಣೆಯ ಪೊಲೀಸರು, ನೇಪಾಳಿ ಗ್ಯಾಂಗ್‌ನ ಐವರನ್ನು ಬಂಧಿಸಿದ್ದರು. ಹಗಲಿನಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ನೇಪಾಳದ ಐವರು ಆರೋಪಿಗಳು, ರಾತ್ರಿ ವೇಳೆ ಹೊಂಚು ಹಾಕಿ ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದರು. ತಮಿಳುನಾಡಿನ ಓಜಿಕುಪ್ಪಂ ಗ್ಯಾಂಗ್ ಸದಸ್ಯರು ಜನರ ಗಮನ ಬೇರೆಡೆ ಸೆಳೆದು ಚಿನ್ನ ಹಾಗೂ ನಗದು ಕಳ್ಳತನ ಮಾಡುತ್ತಿದ್ದಾರೆ. ಈ ಗ್ಯಾಂಗ್ ಕೆ.ಆರ್.ಪುರ ಹಾಗೂ ಕೊತ್ತನೂರು ಭಾಗದಲ್ಲಿ ಸಕ್ರಿಯವಾಗಿದೆ ಎಂದು ಮೂಲಗಳು ತಿಳಿಸಿವೆ.

# 40 ಶೆಡ್‌ಗಳು ಬೆಂಕಿಗೆ ಆಹುತಿ

## ವೀರಣ್ಣಪಾಳ್ಯದಲ್ಲಿ ಅಗ್ನಿ ಅವಘಡ, ಆಹಾರ ಸಾಮಗ್ರಿ ಭಸ್ಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗೋವಿಂದಪುರ ಪೊಲೀಸ್ ಠಾಣಾ ವ್ಯಾಪ್ತಿಯ ವೀರಣ್ಣಪಾಳ್ಯದಲ್ಲಿ ಶನಿವಾರ ತಡರಾತ್ರಿ ಅಗ್ನಿ ಅವಘಡ ಸಂಭವಿಸಿದ್ದು, ಕಾರ್ಮಿಕರ 40 ಶೆಡ್‌ಗಳು ಬೆಂಕಿಗೆ ಆಹುತಿಯಾಗಿವೆ.

ರಸ್ತೆ ಬದಿ ಪ್ಲಾಸ್ಟಿಕ್ ವಸ್ತು ಮಾರಾಟ ಮಾಡುವವರು ಹಾಗೂ ಆಟಿಕೆ ತಯಾರಿಕಾ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ನಿರ್ಮಿಸಿದ್ದ 40 ಶೆಡ್‌ಗಳು ಸಂಪೂರ್ಣವಾಗಿ ಕರಕಲಾಗಿವೆ. ಆಹಾರ ಸಾಮಗ್ರಿಗಳು ಸಂಪೂರ್ಣ ಸುಟ್ಟು ಹೋಗಿವೆ. ಪ್ರಾಣಹಾನಿ ಸಂಭವಿಸಿಲ್ಲ, ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು.

ವೀರಣ್ಣಪಾಳ್ಯ ಮುಖ್ಯ ರಸ್ತೆಯ ಖಾಸಗಿ ಶಾಲೆ ಪಕ್ಕದಲ್ಲಿ 50 ಶೆಡ್‌ಗಳನ್ನು ನಿರ್ಮಿಸಲಾಗಿದೆ. ಮೊದಲಿಗೆ ಒಂದು ಶೆಡ್‌ನಲ್ಲಿ ಕಾಣಿಸಿಕೊಂಡ ಬೆಂಕಿ, ನೋಡ ನೋಡುತ್ತಿದ್ದಂತೆ ಇತರೆ ಶೆಡ್‌ಗಳಿಗೂ ಹಬ್ಬಿದೆ. ಟೆಂಟ್ ಒಳಗಿದ್ದವರು ಹೊರಗೆ ಓಡಿ ಬಂದು ಜೀವ ಉಳಿಸಿಕೊಂಡಿದ್ದಾರೆ.

ಶೆಡ್‌ನಲ್ಲಿ ಬಹುತೇಕ ಉತ್ತರ ಕರ್ನಾಟಕದ ಕೂಲಿ ಕಾರ್ಮಿಕರು ವಾಸವಿದ್ದು, ಅವಘಡದಿಂದ ಕಂಗಾಲಾಗಿದ್ದಾರೆ. ಹಲವು ವರ್ಷಗಳಿಂದ ಮಕ್ಕಳು, ಮಹಿಳೆಯರು ಸೇರಿದಂತೆ ಸಣ್ಣ ಶೆಡ್‌ಗಳಲ್ಲಿ 100ಕ್ಕೂ ಹೆಚ್ಚು ಜನರು ವಾಸವಾಗಿದ್ದರು. ರಾತ್ರಿಯಿಡೀ ಅವರು ಸ್ಥಳೀಯ ದೇಗುಲದ ಅಂಗಳದಲ್ಲಿ ವಿಶ್ರಾಂತಿ ಪಡೆದಿದ್ದಾರೆ.

ಜಾಗದ ಗುತ್ತಿಗೆ ಪಡೆದಿದ್ದ ಪಿಳ್ಳಪ್ಪ ಎಂಬುವರು ಸ್ಥಳಕ್ಕೆ ಭೇಟಿ ನೀಡಿ, ಶೆಡ್‌ಗಳನ್ನು ಖಾಲಿ ಮಾಡಲು ಸೂಚಿಸಿದ್ದರಿಂದ ಕಾರ್ಮಿಕರು ಆತಂಕಗೊಂಡಿದ್ದಾರೆ.

‘ಇದ್ದಕ್ಕಿದ್ದಂತೆ ಹೋಗಿ ಅಂದರೆ ಎಲ್ಲಿಗೆ ಹೋಗೋದು. ಮನೆಯಲ್ಲಿದ್ದ ಅಲ್ಪಸ್ವಲ್ಪ ಹಣ, ಸಾಮಗ್ರಿ ಬೆಂಕಿಗಾಹುತಿ ಆಗಿದೆ. ಸರ್ಕಾರ ಸಹಾಯ ಮಾಡಬೇಕು’ ಎಂದು ಕಾರ್ಮಿಕರು ಕಣ್ಣೀರು ಹಾಕಿದರು.

### ಪ್ರಕರಣ ದಾಖಲು: ತನಿಖೆ

‘ರಸ್ತೆ ಬದಿ ಪ್ಲಾಸ್ಟಿಕ್ ವ್ಯಾಪಾರಿಗಳು ಹಾಗೂ ಆಟಿಕೆ ತಯಾರಿಕೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಉತ್ತರ ಕರ್ನಾಟಕದ ರಾಯಚೂರು, ವಿಜಯಪುರ, ಗದಗ, ಬಾಗಲಕೋಟೆಯ ಕಾರ್ಮಿಕರು ತಗಡಿನ ಹೊದಿಕೆಯ ಶೆಡ್‌ನಲ್ಲಿ ಬಾಡಿಗೆಗೆ ವಾಸವಿದ್ದರು. ತಡರಾತ್ರಿ ಆಕಸ್ಮಿಕವಾಗಿ ಅಗ್ನಿ ಅವಘಡ ಸಂಭವಿಸಿದ್ದು, ಎಲ್ಲರೂ ಹೊರಗೆ ಓಡಿ ಬಂದಿದ್ದಾರೆ. 40 ಶೆಡ್‌ಗಳು ಬೆಂಕಿಗೆ ಆಹುತಿಯಾಗಿವೆ. ಅಗ್ನಿ ಅವಘಡಕ್ಕೆ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಸೊಕೊ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಗೋವಿಂದಪುರ ಠಾಣೆಯ ಅಧಿಕಾರಿ ತಿಳಿಸಿದರು.

ವೀರಣ್ಣಪಾಳ್ಯದಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಕಾರ್ಮಿಕರ ಶೆಡ್‌ಗಳು ಬೆಂಕಿಗೆ ಆಹುತಿಯಾಗಿವೆ

# ₹3 ಲಕ್ಷ ಮೌಲ್ಯದ ಗಾಂಜಾ ವಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಹಾರದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ತಂದು ನಗರದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸುದ್ದಗುಂಟೆ ಪಾಳ್ಯ ಠಾಣೆ ಪೊಲೀಸರು ಬಂಧಿಸಿ, ₹3 ಲಕ್ಷ ಮೌಲ್ಯದ ಮಾದಕ ವಸ್ತು ವಶಪಡಿಸಿಕೊಂಡಿದ್ದಾರೆ.

ಆರೋಪಿಯು ಬಿಹಾರಕ್ಕೆ ಸೇರಿದ್ದು, ಮಾದಕ ವಸ್ತುಗಳನ್ನು ತಂದು ನಗರದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ಐ.ಟಿ., ಬಿ.ಟಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದ.

ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಖಚಿತ ಮಾಹಿತಿ ಮೇರೆಗೆ ಮದ್ದೂರಮ್ಮ ಕಾಲೊನಿಯ ಮನೆಯ ಮೇಲೆ ದಾಳಿ ಮಾಡಿದ ಪೊಲೀಸರು, 6 ಕೆ.ಜಿ. ಗಾಂಜಾ, ತೂಕದ ಯಂತ್ರ ಮತ್ತು ಕವರ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದಲ್ಲಿರುವ ಎಂ5 ಇ–ಸಿಟಿ ಮಾಲ್‌ನಲ್ಲಿ ಸಪ್ನ ಬುಕ್ ಹೌಸ್‌ನ ನೂತನ ಮಳಿಗೆಯನ್ನು ಭಾನುವಾರ ಉದ್ಘಾಟಿಸಲಾಯಿತು. ಬಿ.ಟಿ. ನಾಗರಾಜ್ ರೆಡ್ಡಿ, ಸುದರ್ಶನ ಚನ್ನಂಗಿಹಳ್ಳಿ, ಹಂಪ ನಾಗರಾಜಯ್ಯ, ಮಾನಸ, ಬಿ.ಆರ್. ಲಕ್ಷ್ಮಣರಾವ್, ಡಿ.ವಿ. ಗುರುಪ್ರಸಾದ್, ರಾ.ನಂ.ಚಂದ್ರಶೇಖರ, ಬೇಲೂರು ರಾಮಮೂರ್ತಿ, ಡುಂಡಿರಾಜ್, ವತ್ಸಲಾ ಮೋಹನ್, ಎಂ.ಎಸ್. ನರಸಿಂಹಮೂರ್ತಿ, ಜಗದೀಶ ಶರ್ಮ ಸಂಪ, ಸಂತೋಷ್ ಹಾನಗಲ್, ನಿತಿನ್ ಷಾ, ಆರ್. ದೊಡ್ಡೇಗೌಡ ಉಪಸ್ಥಿತರಿದ್ದರು

# ‘ಬಿಜೆಪಿ ಅಂಬೇಡ್ಕರ್ ಯಾತ್ರೆ ಅಸಂಬದ್ಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ತುಳಿಯುತ್ತಾ, ಅವರ ವಿಚಾರಗಳನ್ನು ಹತ್ತಿಕ್ಕುತ್ತಲೇ ಇರುವ ಆರ್‌ಎಸ್‌ಎಸ್–ಬಿಜೆಪಿ, ಈಗ ಅವರ ಹೆಸರಿನಲ್ಲೇ ಪಾದಯಾತ್ರೆ ನಡೆಸುತ್ತಿರುವುದು ಅಸಂಬದ್ಧ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ.

ಬಿ.ಆರ್.ಅಂಬೇಡ್ಕರ್ ಅವರು ಬಹಿಷ್ಕೃತ ಹಿತಕಾರಿಣಿ ಸಭೆಗೆ ಭೇಟಿ ನೀಡಿದ 100ನೇ ವರ್ಷಾಚರಣೆ ಸಂದರ್ಭದಲ್ಲಿ ಬಿಜೆಪಿಯು ನಿಪ್ಪಾಣಿಗೆ ಕೈಗೊಂಡಿರುವ ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ‘ಅಂಬೇಡ್ಕರ್ ಅವರ ಆಶಯಗಳಿಗೆ ಸದಾ ವಿರುದ್ಧವಾಗಿಯೇ ನಡೆದುಕೊಂಡ ಬಿಜೆಪಿ, ಈಗ ಅವರ ಹೆಸರಿನಲ್ಲಿ ಯಾತ್ರೆ ನಡೆಸುತ್ತಿರುವುದು ದುರಂತ’ ಎಂದಿದ್ದಾರೆ.

‘ಜಾತಿ ಶ್ರೇಷ್ಠತೆಯ ಕಾರಣಕ್ಕಾಗಿ ತಮ್ಮ ಸಹಜೀವಿಗಳನ್ನು ಅಮಾನವೀಯವಾಗಿ ಶೋಷಣೆ ಮಾಡುತ್ತಿದ್ದ ಮನುವಾದಿಗಳ ಅಹಂಕಾರಕ್ಕೆ ಎದುರಾಗಿ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಆಶಯದೊಂದಿಗೆ ಅಂಬೇಡ್ಕರ್ ಅವರು 1924ರಲ್ಲಿ ಬಹಿಷ್ಕೃತ ಹಿತಕಾರಿಣಿ ಸಭೆ ನಡೆಸಿದ್ದರು. ಮರು ವರ್ಷವೇ ಮನುವಾದಿಗಳು ಆರ್‌ಎಸ್‌ಎಸ್ ಅನ್ನು ಹುಟ್ಟುಹಾಕಿದರು’ ಎಂದಿದ್ದಾರೆ.

‘ಮಹಾಡ್ ನದಿಯ ನೀರನ್ನು ಮುಟ್ಟಿದ ದಿನವಂತೂ ಈ ಮನುವಾದಿಗಳು ಬಾಬಾ ಸಾಹೇಬರ ಮೇಲೆ ಹಲ್ಲೆಗೆ ಯೋಜಿಸಿದ್ದರು. ಸಾವರ್ಕರ್ ಆದಿಯಾಗಿ ಆರ್‌ಎಸ್‌ಎಸ್ ಮನುವಾದಿಗಳು ತಮ್ಮನ್ನು ಚುನಾವಣೆಯಲ್ಲಿ ಸೋಲಿಸಲು ಸಂಚು ರೂಪಿಸಿದ್ದರು ಎಂದು ಸ್ವತಃ ಅಂಬೇಡ್ಕರ್ ಪತ್ರದಲ್ಲಿ ಬರೆದುಕೊಂಡಿದ್ದರು’ ಎಂದು ಹೇಳಿದ್ದಾರೆ.

‘ದೇಶದ ಆತ್ಮವಾದ ಸಂವಿಧಾನವನ್ನು ಬದಲಿಸುತ್ತೇವೆ ಎನ್ನುವ, ಇನ್ನೆಷ್ಟು ದಿನ ಮೀಸಲಾತಿ ಎಂದು ಪ್ರಶ್ನಿಸುವ ಬಿಜೆಪಿಗರು, ಈ ದಿನ ಅಂಬೇಡ್ಕರ್ ಪರವಾಗಿ ಪಾದಯಾತ್ರೆ ಮಾಡುತ್ತೇನೆ ಎನ್ನುತ್ತಿರುವುದು ಅತ್ಯಂತ ಬಾಲಿಶ ಮತ್ತು ಅಸಂಬದ್ಧ’ ಎಂದಿದ್ದಾರೆ.

ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಗೆ ಕಿರುಕುಳ

# ಕೇರಳದಲ್ಲಿ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಯನ್ನು ಹಿಂಬಾಲಿಸಿ, ಆಕೆಗೆ ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದ ಆರೋಪಿಯನ್ನು ಭಾನುವಾರ ಕೇರಳದಲ್ಲಿ ಬಂಧಿಸಿ, ನಗರಕ್ಕೆ ಕರೆತರಲಾಗುತ್ತಿದೆ.

ಸ್ನೇಹಿತನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಆರೋಪಿ ಡಿ.ಸಂತೋಷ್ ಎಂಬಾತನನ್ನು ಬಂಧಿಸಲಾಗಿದೆ. ಈತ ತಿಲಕ್ ನಗರದ ಗುಲಬರ್ಗಾ ಕಾಲೊನಿ ನಿವಾಸಿಯಾಗಿದ್ದು, ಕಾರು ಚಾಲಕನಾಗಿದ್ದಾನೆ. ಮದ್ಯದ ಅಮಲಿನಲ್ಲಿ ಕೃತ್ಯವೆಸಗಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನ ಅಡ್ಡರಸ್ತೆಯಲ್ಲಿ ಏಪ್ರಿಲ್ 3ರಂದು ರಾತ್ರಿ ಘಟನೆ ನಡೆದಿತ್ತು. ಘಟನೆಯ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಸ್ಥಳೀಯ ನಿವಾಸಿ ಲೋಕೇಶ್‌ಗೌಡ ಎಂಬುವರು ನೀಡಿದ ದೂರಿನ ಸಂಬಂಧ ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸುದ್ದಗುಂಟೆಪಾಳ್ಯ ಠಾಣೆಯ ಎರಡು ಪ್ರತ್ಯೇಕ ತಂಡಗಳು ತಮಿಳುನಾಡಿಗೆ ತೆರಳಿ, ಆರೋಪಿ ಪತ್ತೆಗೆ ಶೋಧ ಕಾರ್ಯ ನಡೆಸಿದವು. ಬಂಧನ ಭೀತಿಯಿಂದ ಆರೋಪಿ ಕೇರಳಕ್ಕೆ ಪರಾರಿಯಾಗಿದ್ದ. ಖಚಿತ ಮಾಹಿತಿ ಮೇರೆಗೆ ಕೋಯಿಕ್ಕೋಡ್‌ನಲ್ಲಿ ಸ್ನೇಹಿತನ ಮನೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಆರೋಪಿಯನ್ನು ಪತ್ತೆಹಚ್ಚಿ, ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

‘ಕೃತ್ಯ ಎಸಗಿ ಪರಾರಿಯಾಗಿದ್ದ ಆರೋಪಿಯ ಪತ್ತೆಗಾಗಿ 10 ಮಂದಿಯ ಎರಡು ವಿಶೇಷ ತಂಡ ರಚಿಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ 1,600 ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಆರೋಪಿ ಬೆಂಗಳೂರು ಬಿಟ್ಟು ಹೊಸೂರು ಮಾರ್ಗವಾಗಿ ತಮಿಳುನಾಡಿನ ಕಡೆ ಪರಾರಿ ಆಗಿರುವುದು ಗೊತ್ತಾಯಿತು. ತಮಿಳುನಾಡಿನಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಬಳಿಕ ಆತ ಕೇರಳದಲ್ಲಿ ತಲೆಮರೆಸಿಕೊಂಡಿರುವ ಬಗ್ಗೆ ಮಾಹಿತಿ ಆಧರಿಸಿ, ಅಲ್ಲಿಗೆ ತೆರಳಿ ಬಂಧಿಸಿ ಬೆಂಗಳೂರಿಗೆ ಕರೆತರಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

### ರಾಜಭವನ ಬಳಿ ಆತ್ಮಹತ್ಯೆಗೆ ಯತ್ನ

ಪತ್ನಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರು ರಾಜಭವನದ ಎದುರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಭಾನುವಾರ ನಡೆದಿದೆ.

ಆತ್ಮಹತ್ಯೆಗೆ ಯತ್ನಿಸಿದ ಜುಹೆಲ್ ಅಹ್ಮದ್ ಹೆಬ್ಬಾಳದ ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿದ್ದಾರೆ. ಪತ್ನಿ ಚಿಕ್ಕಬಳ್ಳಾಪುರದಲ್ಲಿ ವಾಸವಾಗಿದ್ದಾರೆ.

ರಾಜಕಾರಣಿಯೊಬ್ಬರ ಹೇಳಿಕೆ ಪಡೆಯಲು ಸಂಜೆ 4.30ರ ಸುಮಾರಿಗೆ ಮಾಧ್ಯಮ ಪ್ರತಿನಿಧಿಗಳು ರಾಜಭವನದ ಬಳಿ ತೆರಳಿದ್ದರು. ಅದೇ ವೇಳೆ ಅಲ್ಲಿಗೆ ಬಂದ ಜುಹೆಲ್, ಏಕಾಏಕಿ ಪ್ಲಾಸ್ಟಿಕ್ ಬಾಟಲಿಯಲ್ಲಿ ತಂದಿದ್ದ ಪೆಟ್ರೋಲ್ ಅನ್ನು ಮೈ ಮೇಲೆ ಸುರಿದುಕೊಂಡರು. ಇದನ್ನು ನೋಡಿದ ಪತ್ರಕರ್ತರು ಬಾಟಲಿಯನ್ನು ಅವರಿಂದ ಕಸಿದುಕೊಂಡರು.

ನಂತರ ಸ್ಥಳೀಯರು ಅಹ್ಮದ್ ಮೇಲೆ ನೀರು ಸುರಿದರು. ಬಳಿಕ ಅವರನ್ನು ಪೊಲೀಸರ ವಶಕ್ಕೆ ಒಪ್ಪಿಸಿದರು. ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿದ ಆರೋಪದಡಿ ವಿಧಾನಸೌಧ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅಹ್ಮದ್, ‘ಪತ್ನಿ ಕಿರುಕುಳ ನೀಡುತ್ತಿರುವ ಬಗ್ಗೆ ಪೊಲೀಸರು ದೂರು ಸ್ವೀಕರಿಸಿಲ್ಲ. ಆಕೆಯಿಂದ ಹಲ್ಲೆಗೊಳಗಾಗಿದ್ದೇನೆ. ನನಗೆ ಬದುಕಲು ದಾರಿ ಇಲ್ಲ, ಸಾಯುವುದೊಂದೇ ದಾರಿ’ ಎಂದು ಬೇಸರ ಹೊರಹಾಕಿದ್ದಾರೆ. ಇದೇ ವೇಳೆ ಅಹ್ಮದ್, ತಾವು ಬರೆದಿರುವ ಮರಣ ಪತ್ರವನ್ನು ಮಾಧ್ಯಮದವರಿಗೆ ನೀಡಿದರು.

ಕೆಲ ದಿನದ ಹಿಂದೆ ಪತ್ನಿ ನೀಡಿದ ದೂರು ಆಧರಿಸಿ ಚಿಕ್ಕಬಳ್ಳಾಪುರ ಪೊಲೀಸರು ಅಹ್ಮದ್ ವಿರುದ್ಧ ಕೌಟುಂಬಿಕ ದೌರ್ಜನ್ಯ ಎಸಗಿದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ ಎಂಬುದು ಗೊತ್ತಾಗಿದೆ.

# ಚಾಲಕನಿಗೆ ಇರಿದು ಪರಾರಿ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಳೆ ದ್ವೇಷದ ಕಾರಣಕ್ಕೆ ಸ್ನೇಹಿತನ ಆಟೊ ಗಾಜು ಒಡೆದು, ಚಾಕುವಿನಿಂದ ಹಲ್ಲೆ ನಡೆಸಿ ಆರೋಪಿ ಪರಾರಿಯಾಗಿರುವ ಘಟನೆ ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ.

ರಾಘವೇಂದ್ರ ಬ್ಲಾಕ್ ನಿವಾಸಿ ಆಟೊ ಚಾಲಕ ಪೋತರಾಜು ಅವರ ಎರಡು ಕೈ ಬೆರಳುಗಳಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಪೋತರಾಜು ಅವರು ರಸ್ತೆ ಬದಿ ಆಟೊ ನಿಲ್ಲಿಸಿ ಹೋಗಿದ್ದರು. ರಾತ್ರಿ ಕರಗ ನೋಡಿಕೊಂಡು ಬೆಳಗಿನ ಜಾವ 4 ಗಂಟೆ ಸುಮಾರಿನಲ್ಲಿ ಆರೋಪಿ ದೀಕ್ಷಿತ್ ತನ್ನ ಸಹಚರನ ಜತೆ ಈ ಮಾರ್ಗದಲ್ಲಿ ಹೋಗುವಾಗ ಸ್ನೇಹಿತ ಆಟೊ ನಿಲ್ಲಿಸಿರುವುದನ್ನು ಗಮನಿಸಿ, ಗಾಜು ಒಡೆದು ಹಾಕಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಪೋತರಾಜು ಹಾಗೂ ದೀಕ್ಷಿತ್ ನಡುವೆ ಜಗಳವಾಗಿದೆ. ಆರೋಪಿ ಚಾಕುವಿನಿಂದ ಹಲ್ಲೆ ನಡೆಸಿದ್ದು, ಕೈ ಬೆರಳುಗಳಿಗೆ ಗಾಯವಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಘಟನೆ ಬಳಿಕ ಜನರು ಸೇರುತ್ತಿದ್ದಂತೆ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ತಕ್ಷಣ ಪೋತರಾಜು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿ ಮತ್ತು ಗಾಯಾಳು ಇಬ್ಬರೂ ಸ್ನೇಹಿತರು. ಆಟೊ ಚಾಲನೆ ಮಾಡಿ ಇಬ್ಬರೂ ಜೀವನ ಸಾಗಿಸುತ್ತಿದ್ದಾರೆ. ಹತ್ತು ದಿನಗಳ ಹಿಂದೆ ಮದ್ಯದ ಪಾರ್ಟಿ ವೇಳೆ ಪೋತರಾಜು ಏಕವಚನದಲ್ಲಿ ಮಾತನಾಡಿ ಅವಮಾನ ಮಾಡಿದ ಎಂಬ ಕಾರಣಕ್ಕೆ ದೀಕ್ಷಿತ್ ಕೋಪಗೊಂಡಿದ್ದ. ಈ ವಿಚಾರಕ್ಕೆ ದ್ವೇಷ ಸಾಧಿಸುತ್ತಿದ್ದ’ ಎಂದು ಹೇಳಿದ್ದಾರೆ.

ಹನುಮಂತ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗೆ ಶೋಧ ಕಾರ್ಯಕೈಗೊಂಡಿದ್ದಾರೆ.

# ಯತ್ನಾಳ ಭಾಷಣದ ವೇಳೆ ಮಚ್ಚು ಹಿಡಿದು ವೇದಿಕೆಗೆ ನುಗ್ಗಿದ ವ್ಯಕ್ತಿ

**ಲಿಂಗಸುಗೂರು (ರಾಯಚೂರು ಜಿಲ್ಲೆ):** ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡುತ್ತಿದ್ದ ವೇಳೆ ವ್ಯಕ್ತಿಯೊಬ್ಬ ಮಚ್ಚು ಹಿಡಿದು ವೇದಿಕೆಗೆ ನುಗ್ಗಿದ ಘಟನೆ ಪಟ್ಟಣದಲ್ಲಿ ಭಾನುವಾರ ನಡೆದಿದೆ.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಶ್ರೀರಾಮ ಸೇನೆ ಸಂಘಟನೆ ಹಮ್ಮಿಕೊಂಡಿದ್ದ ಹಿಂದೂ ಸಾಮ್ರಾಜ್ಯೋತ್ಸವ ಸಮಾರಂಭದಲ್ಲಿ ಬಸನಗೌಡ ಯತ್ನಾಳ ಮಾತನಾಡುತ್ತಿದ್ದ ಸಂದರ್ಭದಲ್ಲಿ, ವೇದಿಕೆ ಹಿಂಭಾಗದಿಂದ ಪ್ರವೇಶಿಸಿದ ವ್ಯಕ್ತಿ ತನ್ನ ಬೆನ್ನಲ್ಲಿ ಮಚ್ಚು ಇಟ್ಟುಕೊಂಡಿದ್ದ. ಇದನ್ನು ಗಮನಿಸಿದ ಸಂಘಟನೆ ಕಾರ್ಯಕರ್ತರು ಎಚ್ಚೆತ್ತುಕೊಂಡು ಅವನನ್ನು ಹಿಡಿದು ಸ್ಥಳದಲ್ಲಿದ್ದ ಪೊಲೀಸರಿಗೆ ಒಪ್ಪಿಸಿದ್ದಾರೆ.

ಮಚ್ಚು ಹಿಡಿದು ಬಂದ ವ್ಯಕ್ತಿ ಹಟ್ಟಿ ಪಟ್ಟಣದ ಶ್ರೀನಿವಾಸ ಎಂದು ಹೇಳಲಾಗುತ್ತಿದೆ. ಹೆಚ್ಚುವರಿ ಎಸ್‌ಪಿ ಜಿ.ಹರೀಶ ಆತನ ವಿಚಾರಣೆ ನಡೆಸಿದ್ದಾರೆ.

# ಸಹಕಾರ ನಗರ: ಯುಗಾದಿ ವಸಂತ ಸಂಭ್ರಮ

ಪ್ರಜಾವಾಣಿ ವಾರ್ತೆ

**ಯಲಹಂಕ:** ಹಬ್ಬಗಳು ಕಾಟಾಚಾರಕ್ಕೆ ಸೀಮಿತವಾಗದೆ, ಕುಟುಂಬದ ಸಮೇತ ಸಂಭ್ರಮ-ಸಡಗರದಿಂದ ಆಚರಿಸಬೇಕು. ಆಗ ಹಬ್ಬಗಳು ನಿಜವಾದ ಅರ್ಥ ಪಡೆದುಕೊಳ್ಳಲು ಸಾಧ್ಯ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಕೆಬಿಜಿ ಸ್ವಯಂಸೇವಕರು ಹಾಗೂ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ವತಿಯಿಂದ ಸಹಕಾರನಗರದ ಮೈದಾನದಲ್ಲಿ ಆಯೋಜಿಸಿದ್ದ ‘ಯುಗಾದಿ ವಸಂತ ಸಂಭ್ರಮ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಯುಗಾದಿಯ ಹಿಂದೆ ನಮ್ಮ ಸಂಸ್ಕೃತಿ, ಕಲೆ, ಸಂಗೀತ, ಸಾಹಿತ್ಯ ಅಡಗಿದೆ. ಈ ದಿಸೆಯಲ್ಲಿ ಹೆಸರಾಂತ ಸಂಗೀತಗಾರರಿಂದ ಭಾವಗೀತೆಗಳ ರಸದೌತಣ ನೀಡಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

ಯಕ್ಷಗಾನ ಕಲಾವಿದರ ಜೊತೆಗೆ ಸಚಿವ ಕೃಷ್ಣಬೈರೇಗೌಡ ಮಾತುಕತೆ ನಡೆಸಿದರು

ನೃತ್ಯ, ಚಿತ್ರಕಲೆ, ಅಡುಗೆ(ಹೋಳಿಗೆ) ಹಾಗೂ ಸಾಂಪ್ರದಾಯಿಕ ಉಡುಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರೊ.ಕೃಷ್ಣೇಗೌಡ ಅವರು, ಹಾಸ್ಯಚಟಾಕಿಗಳಿಂದ ಜನರನ್ನು ನಗೆಗಡಲಲ್ಲಿ ತೇಲಿಸಿದರು. ಗಾಯಕಿ ಎಂ.ಡಿ.ಪಲ್ಲವಿ ಮತ್ತಿತರರು ಸುಗಮ ಸಂಗೀತದ ಮೂಲಕ ಪ್ರೇಕ್ಷಕರಿಗೆ ಸಂಗೀತದ ರಸದೌತಣ ನೀಡಿದರು. ಕಲಾವಿದರು ಪ್ರದರ್ಶಿಸಿದ ಯಕ್ಷಗಾನ ಮತ್ತು ಹುಲಿಕುಣಿತ, ಎಲ್ಲರ ಗಮನ ಸೆಳೆಯಿತು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಪಾಲಿಕೆ ಮಾಜಿ ಸದಸ್ಯ ವಿ.ವಿ.ಪಾರ್ತಿಬರಾಜನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯ ಗೋಪಾಲಗೌಡ, ಎನ್.ಕೆ.ಮಹೇಶ್ ಕುಮಾರ್, ವಿ.ಹರಿ, ಎಚ್.ಎ. ಶಿವಕುಮಾರ್, ತಿಂಡ್ಲು ದಿಲೀಪ್, ಕೆ.ಆರ್.ರಾಜು, ಹನುಮಂತು ಇದ್ದರು.

ಸಮರ್ಪಕ ದಾಖಲೆ ಪಡೆಯದ ಮನೆ ಮಾಲೀಕರ ವಿರುದ್ಧ ಪ್ರಕರಣ

# ವಿದೇಶಿ ಪ್ರಜೆಗಳು ಸ್ವದೇಶಕ್ಕೆ ವಾಪಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ ವಿಶೇಷ ಕಾರ್ಯಾಚರಣೆ ನಡೆಸಿ, ನಗರದ ಕೆಂಗೇರಿ ಮತ್ತು ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ವಾಸವಾಗಿದ್ದ ಇಬ್ಬರು ವಿದೇಶಿ ಪ್ರಜೆಗಳನ್ನು ಪತ್ತೆ ಮಾಡಿ, ಅವರ ದೇಶಗಳಿಗೆ ವಾಪಸ್ ಕಳುಹಿಸಿದೆ.

ರಾಮಮೂರ್ತಿ ನಗರ, ಬಾಣಸವಾಡಿ, ಪರಪ್ಪನ ಅಗ್ರಹಾರ, ಸೋಲದೇವನಹಳ್ಳಿ, ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ವಾಸವಾಗಿದ್ದ 10 ವಿದೇಶಿ ಪ್ರಜೆಗಳ ಬಳಿ ಸಮರ್ಪಕ ದಾಖಲೆಗಳು ಇಲ್ಲದ ಕಾರಣ ಅವರನ್ನು ಬೆಂಗಳೂರಿನ ಪ್ರಾದೇಶಿಕ ವಿದೇಶಿಯರ ನೋಂದಣಿ ಅಧಿಕಾರಿ (ಎಫ್‌ಆರ್‌ಆರ್‌ಒ) ಮುಂದೆ ಹಾಜರುಪಡಿಸಲಾಯಿತು. ಬಳಿಕ ಅವರನ್ನು ಅಕ್ರಮ ವಲಸಿಗರ ಬಂಧನ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದೇಶಿ ಪ್ರಜೆಗಳಿಗೆ ಮನೆಗಳನ್ನು ಬಾಡಿಗೆ ನೀಡುವ ಮುನ್ನ ಸಮರ್ಪಕ ದಾಖಲೆಗಳನ್ನು ಪಡೆದುಕೊಳ್ಳದ ಮನೆ ಮಾಲೀಕರ ವಿರುದ್ಧ ವಿದೇಶಿ ಕಾಯ್ದೆ ಮತ್ತು ಬಿಎಎನ್‌ಎಸ್ ಪ್ರಕಾರ ರಾಮಮೂರ್ತಿ ನಗರ, ಬಾಣಸವಾಡಿ, ಪರಪ್ಪನ ಅಗ್ರಹಾರ, ಸೋಲದೇವನಹಳ್ಳಿ, ವರ್ತೂರು ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ನಿಯಮದ ಪ್ರಕಾರ ವಿದೇಶಿ ಪ್ರಜೆಗೆ ಮನೆಯನ್ನು ಬಾಡಿಗೆಗೆ ನೀಡಿದ ಮಾಲೀಕರು 24 ತಾಸಿನೊಳಗೆ ವಿದೇಶಿಯರ ನೋಂದಣಿ ಇಲಾಖೆಯ ಆನ್‌ಲೈನ್ ಪೋರ್ಟಲ್ (http://indianfrro.gov.in/frro/FormC/dummy1.jsp) ಮೂಲಕ ನಮೂನೆ–ಸಿ ಅನ್ನು ಎಫ್‌ಆರ್‌ಆರ್ ಅಧಿಕಾರಿಗಳಿಗೆ ಸಲ್ಲಿಸಬೇಕು. ಅಧಿಕಾರಿಗಳು ನಮೂನೆ–ಸಿ ಅನ್ನು ಅನುಮೋದಿಸಿದ ಬಳಿಕವೇ ವಿದೇಶಿ ವ್ಯಕ್ತಿಗೆ ವಾಸ್ತವ್ಯಕ್ಕೆ ಅವಕಾಶ ನೀಡಬೇಕು. ಅನುಮೋದಿಸಿದ ನಂತರದ 24 ಗಂಟೆಯೊಳಗೆ ಮನೆಯ ಮಾಲೀಕ ಅಥವಾ ನಿರ್ವಹಣೆ ಮಾಡುವ ವ್ಯಕ್ತಿ, ವಿದೇಶಿ ವ್ಯಕ್ತಿ ನಮೂನೆ–ಸಿ ಮುದ್ರಿತ ಪ್ರತಿಗಳನ್ನು ಹೊಂದಿರಬೇಕು ಎಂಬ ನಿಯಮವಿದೆ ಎಂದು ಪೊಲೀಸರು ಹೇಳಿದ್ದಾರೆ.

ಆದರೆ ಹತ್ತು ವಿದೇಶಿ ಪ್ರಜೆಗಳಿಗೆ ಬಾಡಿಗೆ ನೀಡಿದ ಮನೆಯ ಮಾಲೀಕರು ಎಫ್‌ಆರ್‌ಆರ್ ಅಧಿಕಾರಿಗಳು ಅನುಮೋದಿಸಿದ ನಮೂನೆ–ಸಿ ಅನ್ನು ಪಡೆದುಕೊಂಡಿಲ್ಲ. ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

# ಪಾದಚಾರಿಗಳು, ವಾಹನಕ್ಕೆ ಗುದ್ದಿದ ಕಾರು: ಚಾಲಕ ವಶಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಗರಬಾವಿಯ ಅಂಬೇಡ್ಕರ್ ಕಾಲೇಜು ಬಳಿ ಶುಕ್ರವಾರ ರಾತ್ರಿ ವೇಗವಾಗಿ ಬಂದ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿಯಲ್ಲಿ ನಿಂತಿದ್ದ ಪಾದಚಾರಿಗಳು ಹಾಗೂ ನಿಲುಗಡೆ ಮಾಡಿದ್ದ ಹಲವು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದ ಪರಿಣಾಮ, ಇಬ್ಬರು ಗಾಯಗೊಂಡಿದ್ದಾರೆ.

ಗಾಯಗೊಂಡ ಇಬ್ಬರು ಪಾದಚಾರಿಗಳ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನಾಗರಬಾವಿಯ ಕ್ವಾರ್ಟ್ರಸ್ ಗೇಟ್ ಕಡೆಯಿಂದ ದೀಪಾ ಕಾಂಪ್ಲೆಕ್ಸ್ ಕಡೆಗೆ ಹೊರಟಿದ್ದ ಕಾರು ಚಾಲಕ ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದು ಪಾದಚಾರಿಗಳು ಹಾಗೂ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಅಪಘಾತದ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾರು ಚಾಲಕನನ್ನು ಜ್ಞಾನಭಾರತಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

**ಚಾಲಕನ ಥಳಿಸಲು ಯತ್ನ:** ಘಟನೆಯಿಂದ ಸಿಟ್ಟಿಗೆದ್ದ ಸ್ಥಳೀಯರು ಚಾಲಕನನ್ನು ಕಾರಿನಿಂದ ಕೆಳಕ್ಕೆ ಇಳಿಸಿ ಹಲ್ಲೆ ನಡೆಸಲು ಮುಂದಾದರು. ಅಷ್ಟರಲ್ಲಿ ಸ್ಥಳಕ್ಕೆ ಬಂದ ಪೊಲೀಸರು, ಚಾಲಕನನ್ನು ವಶಕ್ಕೆ ಪಡೆದುಕೊಂಡರು.

ಅಪಘಾತದಿಂದ ಅಂಬೇಡ್ಕರ್ ಕಾಲೇಜು ಬಳಿ ಸಂಚಾರ ದಟ್ಟಣೆ ಉಂಟಾಗಿತ್ತು. ಸ್ಥಳಕ್ಕೆ ಬಂದ ಪೊಲೀಸರು ಜಖಂಗೊಂಡ ದ್ವಿಚಕ್ರ ವಾಹನ ಹಾಗೂ ಕಾರನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು.

ಗ್ಯಾಲರಿಯಲ್ಲಿ ಕುಳಿತು ಪಂಟರ್‌ಗಳಿಗೆ ಮಾಹಿತಿ ರವಾನೆ, ಆನ್‌ಲೈನ್ ಬೆಟ್ಟಿಂಗ್

# ಕ್ರಿಕೆಟ್ ಬೆಟ್ಟಿಂಗ್: ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ದಂಧೆಯಲ್ಲಿ ತೊಡಗಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಧ್ರುವ್ ಮಿತ್ತಲ್, ರೋಹಿತ್ ರಂಜನ್ ಹಾಗೂ ವಿಜಯ್ ಕುಮಾರ್ ಬಂಧಿತರು.

ಆರೋಪಿಗಳಿಂದ ₹85 ಲಕ್ಷ ನಗದು ಹಾಗೂ ಬೆಟ್ಟಿಂಗ್ ಟೋಕನ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಏಪ್ರಿಲ್ 10ರಂದು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಮಧ್ಯೆ ಪಂದ್ಯ ನಡೆದಿತ್ತು. ಆ ಪಂದ್ಯದ ವೇಳೆ ಆರೋಪಿಗಳು ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ನಗರದ ವಿವಿಧೆಡೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಧ್ರುವ

ವಿಜಯ್

ರೋಹಿತ್

**ಪಂಟರ್‌ಗೆ ಮಾಹಿತಿ ರವಾನೆ:** ಆರೋಪಿ ರೋಹಿತ್ ರಂಜನ್ ಏಪ್ರಿಲ್ 10ರಂದು ನಡೆದ ಕ್ರಿಕೆಟ್ ಪಂದ್ಯದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಗ್ಯಾಲರಿಯಲ್ಲೇ ಕುಳಿತು ಪಂಟರ್‌ಗಳಿಗೆ ಪ್ರತಿ ಬಾಲ್‌ನ ಮಾಹಿತಿ ನೀಡುತ್ತಿದ್ದ. ಆ ಮಾಹಿತಿ ಆಧರಿಸಿ ಪಂಟರ್‌ಗಳು ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು ಎನ್ನಲಾಗಿದೆ.

ಮೈದಾನದಲ್ಲಿ ಕುಳಿತು ವೀಕ್ಷಿಸುವ ಪಂದ್ಯಕ್ಕೂ ಹಾಗೂ ಅದೇ ಪಂದ್ಯದ ಟಿ.ವಿ ನೇರ ಪ್ರಸಾರಕ್ಕೂ ಕೆಲವು ಸೆಕೆಂಡ್ ಅಂತರ ಇರುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡಿದ್ದ ಆರೋಪಿಗಳು ಪ್ರತಿ ಬಾಲ್‌ನ ಮೇಲೆ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು. ಫೋರ್, ಸಿಕ್ಸ್, ನೋ ಬಾಲ್, ವೈಡ್ ಎಸೆತದ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದರು ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಇನ್ನು ಆರೋಪಿ ಧ್ರುವ ಮಿತ್ತಲ್ ಆನ್‌ಲೈನ್ ಬೆಟ್ಟಿಂಗ್ ನಡೆಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಆತನನ್ನು ವಶಕ್ಕೆ ಪಡೆದು ಬಂಧಿಸಲಾಗಿದೆ. ಆತನಿಂದ ಎರಡು ಮೊಬೈಲ್ ಫೋನ್‌ಗಳು, ಗೇಮಿಂಗ್ ಆ್ಯಪ್‌ನಲ್ಲಿದ್ದ ಸುಮಾರು ₹63 ಲಕ್ಷ ಮೌಲ್ಯದ ಟೋಕನ್‌ಗಳು, ಖಾತೆಯಲ್ಲಿದ್ದ ₹13 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಜಕ್ಕೂರಿನ ಮನೆಯಲ್ಲಿ ಕುಳಿತು ಆನ್‌ಲೈನ್‌ನಲ್ಲಿ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ವಿಜಯ್ ಕುಮಾರ್‌ನನ್ನು ಬಂಧಿಸಲಾಗಿದೆ. ಆತನಿಂದ ₹10 ಲಕ್ಷ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

# ಸಮುದ್ರ ಪಾಲಾಗುತ್ತಿದ್ದ 4 ಮಹಿಳೆಯರ ರಕ್ಷಣೆ

ಪ್ರಜಾವಾಣಿ ವಾರ್ತೆ

**ಉಳ್ಳಾಲ (ದಕ್ಷಿಣ ಕನ್ನಡ):** ಸಮುದ್ರ ಪಾಲಾಗುತ್ತಿದ್ದ ನಾಲ್ವರು ಮಹಿಳೆಯರನ್ನು ಉಳ್ಳಾಲ ಮೊಗವೀರಪಟ್ನದ ಶಿವಾಜಿ ಜೀವ ರಕ್ಷಕ ದಳದ ಸದಸ್ಯರು ರಕ್ಷಿಸಿದ್ದಾರೆ.

ಕುತ್ತಾರು ಕೊರಗಜ್ಜನ ಕ್ಷೇತ್ರಕ್ಕೆ ಬಂದವರು ಸಮುದ್ರ ವಿಹಾರಕ್ಕೆಂದು ಉಳ್ಳಾಲದ ಸಮುದ್ರ ತೀರಕ್ಕೆ ತೆರಳಿದ್ದ ಸಂದರ್ಭ ಅವಘಡ ನಡೆದಿದೆ.

ಬೆಂಗಳೂರು ನಾಯಂಡಹಳ್ಳಿಯ ಪದ್ಮಿನಿ (38), ಸೌಮ್ಯಾ (39), ಬಿಂದು (20), ಮಂಜುಳಾ (35) ಹಾಗೂ ಸವಿತಾ (38) ಭಾನುವಾರ ಮಧ್ಯಾಹ್ನದ ಸಮುದ್ರ ತೀರಕ್ಕೆ ಬಂದಿದ್ದರು. ಈ ಪೈಕಿ ನಾಲ್ವರು ಸಮುದ್ರದ ನೀರಿನಲ್ಲಿ ಆಟವಾಡುವ ಸಂದರ್ಭ ಅಲೆಗಳ ನಡುವೆ ಸಿಲುಕಿದ್ದರು. ಸ್ಥಳದಲ್ಲಿದ್ದ ಶಿವಾಜಿ ಜೀವರಕ್ಷಕ ದಳದ ಸದಸ್ಯರು ತಕ್ಷಣ ಸಮುದ್ರಕ್ಕೆ ಧುಮುಕಿ ನಾಲ್ವರನ್ನು ರಕ್ಷಿಸಿ ದಡಕ್ಕೆ ಸೇರಿಸಿದ್ದಾರೆ.

ಮಾಹಿತಿ ಪಡೆದ ಉಳ್ಳಾಲ ಪೊಲೀಸರು ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ನಾಲ್ವರ ಜೀವ ರಕ್ಷಿಸಿದ ಶಿವಾಜಿ ಜೀವರಕ್ಷಕ ದಳದ ಸದಸ್ಯರನ್ನು ಉಳ್ಳಾಲ ಠಾಣಾಧಿಕಾರಿ ವಿರೂಪಾಕ್ಷ ಸನ್ಮಾನಿಸಿದರು.

# ಶಿಕ್ಷಣ

# ಚಂದದ ಬಾಲ್ಯಕ್ಕೆ ಆಟಗಳಿರಲಿ

**ದೀಪಿಕಾ ಮೊಗಳ್ಳಿಶೆಟ್ಟಿ**

ಹಿರಿಯೂರಿನಲ್ಲಿ ವಾಸವಾಗಿರುವ ಎರಡು ವರ್ಷದ ಪುಟಾಣಿ ಹೇಮಂತನಿಗೆ ಅವನ ಅಜ್ಜನ ಕೋಲನ್ನು ಕುದುರೆ ಮಾಡಿಕೊಂಡು ಮನೆಯೊಳಗೆ ಓಡುತ್ತಾ ಆಡುವುದೆಂದರೆ ಇನ್ನಿಲ್ಲದ ಖುಷಿ. ಅಜ್ಜ ಒಂದಿಷ್ಟೂ ರೇಗದೇ, 'ಮಹಾ ತರಲೆ ಕಣೋ ನೀನು' ಅಂಥ ಹುಸಿಮುನಿಸು ತೋರಿದಷ್ಟೂ ಅವನಿಗೆ ಇನ್ನಷ್ಟು ಆಟದ ಹುರುಪು. ಬೆಳಿಗ್ಗೆಯಿಂದ ಸಂಜೆಯವರೆಗೆ ಹತ್ತಾರು ಸಲ ಇದೇ ಆಟ ಆಡಿದರೂ ಅವನಿಗೂ ಬೇಜಾರಿಲ್ಲ, ಅಜ್ಜನಿಗೂ ಬೇಜಾರಿಲ್ಲ. ಅವರಿಬ್ಬರೂ ತಮ್ಮದೇ ಆದ ಆಟದ ಲೋಕದೊಳಗೆ ಮುಳುಗಿರುತ್ತಾರೆ.

ಚಿಕ್ಕಂದಿನಲ್ಲಿ ನಮ್ಮಲ್ಲಿ ಬಹುತೇಕರು ಅಜ್ಜನ ನಡೆಯುವ ಕೋಲನ್ನೇ ಕುದುರೆ ಮಾಡಿಕೊಂಡು 'ಅಜ್ಜನ ಕೋಲಿದು ನನ್ನಯ ಕುದುರೆ, ಹೆಜ್ಜೆ ಹೆಜ್ಜೆಗೆ ಕುಣಿಯುವ ಕುದುರೆ' ಎನ್ನುತ್ತ ಮನೆಯ ಸುತ್ತಮುತ್ತ ಕುದುರೆ ಸವಾರಿ ಮಾಡುತ್ತಿದ್ದೆವು. ಮಕ್ಕಳ ಕಲ್ಪನೆಯಲ್ಲಿ ಅಜ್ಜನ ಕೋಲು ಕುಣಿಯುವ ಕುದುರೆಯಾಗುತ್ತದೆ. ಮನೆಯಲ್ಲಿರುವ ಕೋಲಿನಂತಹ ಒಂದು ಸಾಮಾನ್ಯ ವಸ್ತು ಸುತ್ತಲಿನ ಜಗತ್ತಿನ ಬಗ್ಗೆ ಮಕ್ಕಳ ತಿಳಿವಳಿಕೆಯನ್ನು ಹೇಗೆ ಹೆಚ್ಚಿಸಬಲ್ಲದು ಎಂಬುದಕ್ಕೆ ಇದೊಂದು ಉದಾಹರಣೆ. ಪದ್ಯದ ಕೊನೆಯಲ್ಲಿ 'ಅರಸು ಮಕ್ಕಳಿಗೂ ಸಿಕ್ಕದ ಕುದುರೆ, ನನಗೇ ಸಿಕ್ಕಿದೆ ನನ್ನಯ ಕುದುರೆ' ಎಂದು ಮಕ್ಕಳು ಕೋಲನ್ನು ಕುದುರೆಯಾಗಿಸಿಕೊಂಡು ಹಾಡುತ್ತ ಆಡುವಾಗ ಈ ಕೋಲು ಒಂದು ಅಪೂರ್ವ ಕುದುರೆಯಾಗಿ ತಮ್ಮ ಬಳಿ ಇದೆ ಎಂದು ಮುದಗೊಳ್ಳುತ್ತಾರೆ.

ಆಟವು ಮಕ್ಕಳ ಸೃಜನಶೀಲತೆ, ಕಲ್ಪನೆ ಹಾಗೂ ಹೊಸರೀತಿಯಲ್ಲಿ ಆಲೋಚಿಸುವುದನ್ನು ಉತ್ತೇಜಿಸುತ್ತದೆ. ಜತೆಗೆ ಪರಸ್ಪರ ಹಂಚಿಕೊಳ್ಳುವುದು, ಸಹಕರಿಸುವುದು, ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವುದು ಸೇರಿ ಸಾಮಾಜಿಕ ಕೌಶಲಗಳನ್ನು ಮಕ್ಕಳಲ್ಲಿ ಬೆಳೆಸುತ್ತದೆ. ಆಟವು ಹೊರಜಗತ್ತಿನೊಂದಿಗೆ ವ್ಯವಹರಿಸುವ ಆತ್ಮವಿಶ್ವಾಸ, ಸಂವಹನ ಹಾಗೂ ಭಾಷಾ ಕೌಶಲಗಳನ್ನು ಮಗುವಿಗೆ ಒದಗಿಸುತ್ತದೆ. ನಮ್ಮ ಮನೆಯಲ್ಲಿರುವ ಚಿಕ್ಕ ಪುಟ್ಟ ಸಾಮಗ್ರಿಗಳನ್ನು ಆಟಿಕೆಯಾಗಿ ಕಲ್ಪಿಸಿಕೊಂಡು ಆಡುವಂತೆ ಮಕ್ಕಳನ್ನು ಪ್ರೋತ್ಸಾಹಿಸೋಣ. ಆಟದಿಂದಲೇ ಕಲಿಕೆ, ಆಟದಿಂದಲೇ ಪದ್ಯ, ಪದ್ಯದಿಂದಲೇ ಆಟ ಎಂದು ಮಕ್ಕಳನ್ನು ಉತ್ತೇಜಿಸೋಣ. ಇದು ಮಕ್ಕಳಿಗೆ ಸಮಗ್ರ ಬಾಲ್ಯದ ಅನುಭವವನ್ನು ನೀಡುವುದರಲ್ಲಿ ಯಾವುದೇ ಸಂಶಯವಿಲ್ಲ.

ಹಲವಾರು ಅಧ್ಯಯನಗಳು ಇದೇ ಅಂಶವನ್ನು ಒತ್ತಿ ಹೇಳಿವೆ. ಮಕ್ಕಳಿಗಾಗಿಯೇ ತಯಾರಿಸಿರುವ ಕೆಲವು ಅತ್ಯುತ್ತಮ ಆಟಿಕೆಗಳು ನಿಜವಾಗಿಯೂ ಆಟಿಕೆಗಳಲ್ಲ. ಮಕ್ಕಳು ತನ್ಮಯರಾಗಿ ಆಡುವ ಹೆಚ್ಚಿನ ವಸ್ತುಗಳು ಮತ್ತು ಸ್ಥಳಗಳನ್ನು ಮಕ್ಕಳಿಗಾಗಿ ವಿನ್ಯಾಸಗೊಳಿಸಿಲ್ಲ. ಮಕ್ಕಳಿಗೆ ತಮ್ಮ ಕಲ್ಪನಾಶಕ್ತಿಯಿಂದ ಎಲ್ಲಾ ವಸ್ತುಗಳನ್ನು ಆಟಿಕೆಗಳಾಗಿ ರೂಪಾಂತರಗೊಳಿಸುವ ಸಾಮರ್ಥ್ಯವಿದೆ. ಅವರಿಗೆ ಮನೆಯ ಎಲ್ಲಾ ವಸ್ತುಗಳು ಆಟದ ವಸ್ತುಗಳಾಗುತ್ತವೆ. ಪೋಷಕರ ಆರ್ಥಿಕ ಹಾಗೂ ಸಾಮಾಜಿಕ ಸ್ತರ ಯಾವುದೇ ಇದ್ದರೂ, ಎಲ್ಲಾ ಮಕ್ಕಳಿಗೂ ಸಮೃದ್ಧ ಆಟಿಕೆಗಳು ಮನೆಯಲ್ಲಿಯೇ ಸಿಗುವ ಬೇರೆ ಬೇರೆ ವಸ್ತುಗಳೇ ಆಗಿರುತ್ತವೆ. ಅಲ್ಲದೇ ಅವರದೇ ಆದ ಪುಟ್ಟ ಲೋಕವೊಂದನ್ನು ಮನೆಯಲ್ಲಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

ಮಗು ಹುಟ್ಟಿದಾಗಿನಿಂದ ಮೊದಲ ಎಂಟು ವರ್ಷಗಳ ಅವಧಿಯು ಮಗುವಿನ ಕಲಿಕೆ ಹಾಗೂ ಮುಂದಿನ ಬದುಕಿಗೆ ಗಟ್ಟಿಯಾದ ಅಡಿಪಾಯವನ್ನು ಹಾಕುವ ಅವಕಾಶವನ್ನು ಒದಗಿಸುತ್ತದೆ. ಮಕ್ಕಳು ಆಡುತ್ತ, ನಲಿಯುತ್ತ ಕಲಿತರೆ ಈ ಬುನಾದಿ ಗಟ್ಟಿಯಾಗಿರುತ್ತದೆ.

ಬೆಂಗಳೂರಿನ ಅಭಿವೃದ್ಧಿಪರ ಸಂಸ್ಥೆಯಾದ ಏಕ್‌ಸ್ಟೆಪ್ ಫೌಂಡೇಷನ್, 'ಬಾಲ್ಯವನ್ನು ಆನಂದಿಸಿ' ಕಾರ್ಯಕ್ರಮದ ಮೂಲಕ ಆಟದ ಜೊತೆ ಪ್ರಾಸಬದ್ಧವಾಗಿ ಹಾಡುತ್ತಾ ನಲಿಯುವುದನ್ನು ಕಲಿಸುತ್ತದೆ. ಇದು ಮಕ್ಕಳ ಜೀವನದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.

ಮಕ್ಕಳಿಗೆ ಬಾಲ್ಯದಲ್ಲಿ ಆಟವಾಡುವ ಅವಕಾಶಗಳನ್ನು ಒದಗಿಸುವುದರ ಮಹತ್ವವನ್ನು ಮನಗಂಡ ಯುನಿಸೆಫ್ ಮೊಟ್ಟಮೊದಲ ಬಾರಿಗೆ 2024ರಲ್ಲಿ ಜೂನ್ 11ರಂದು 'ಅಂತರರಾಷ್ಟ್ರೀಯ ಆಟದ ದಿನ' ಎಂದು ಘೋಷಿಸಿದೆ. ಆಟ, ಅದರ ಜತೆ ಹಾಡು, ಅದರಿಂದ ಮಕ್ಕಳಿಗೆ ಸಿಗುವ ನಲಿವು ಇದೆಲ್ಲವೂ ಅತ್ಯಮೂಲ್ಯವಾದದು.

ಕನ್ನಡದಲ್ಲಿ ಮಕ್ಕಳ ಪದ್ಯಗಳ ಶ್ರೀಮಂತ ಇತಿಹಾಸವಿದೆ. ಪ್ರಸಿದ್ಧ ಬರಹಗಾರರಾದ ಜಿ.ಪಿ.ರಾಜರತ್ನಂ, ಡಾ. ಸಿದ್ಧಯ್ಯ ಪುರಾಣಿಕ್, ದಿನಕರ ದೇಸಾಯಿ, ಹೊಯ್ಸಳ, ಶಿವರಾಮ ಕಾರಂತ, ಪಂಜೆ ಮಂಗೇಶರಾಯರು, ಮೇವುಂಡಿ, ಮಲ್ಲಾರಿ ಇನ್ನಿತರರು ಬರೆದಿರುವ ಸುಪ್ರಸಿದ್ಧ ಪ್ರಾಸಪದ್ಯಗಳು ಮಕ್ಕಳು ಬೆಳೆಯುವ ಕಾಲದಲ್ಲಿ ಅವರ ಸೃಜನಶೀಲತೆ ಹಾಗೂ ಕಲ್ಪನೆಯನ್ನು ತೀಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಪದ್ಯ, ಹಾಡುಗಳಲ್ಲಿ ಬರುವ ವರ್ಣರಂಜಿತ ಪಾತ್ರಗಳು ಮತ್ತು ಪ್ರಾಸಗಳ ಪುನರಾವರ್ತನೆಯು ಅವರ ಮಿದುಳಿನಲ್ಲಿ ಸ್ಮರಣ ಶಕ್ತಿ, ಏಕಾಗ್ರತೆ ಮತ್ತು ಆಲೋಚನಾ ಕೌಶಲವನ್ನು ಸುಧಾರಿಸುತ್ತದೆ.

ನಮ್ಮ ಮಕ್ಕಳ ನೆಚ್ಚಿನ ಹಾಡು ಯಾವುದು ಎಂದು ಗುರುತಿಸಿ, ಪದೇ ಪದೇ ಹಾಡುವುದನ್ನು ಪ್ರೋತ್ಸಾಹಿಸುವುದು ಪೋಷಕರಾಗಿ ನಮ್ಮ ಜವಾಬ್ದಾರಿಯಾಗಿದೆ. ನೀವು ನಿಮ್ಮ ಮಕ್ಕಳೊಂದಿಗೆ ಹಾಡಿದರೆ, ಅಥವಾ ಅವರು ಹಾಡುವಾಗ ಚಪ್ಪಾಳೆ ತಟ್ಟಿದರೆ, ಆ ಹಾಡಿಗೆ ತಕ್ಕಂತೆ ಕಾಲಿನಿಂದ ಮೆಲ್ಲಗೆ ತಟ್ಟಿದರೆ ಅಥವಾ ಮೇಜನ್ನು ತಬಲದಂತೆ ತಟ್ಟಿದರೆ, ಮಗುವಿನ ಆನಂದವು ಇಮ್ಮಡಿಗೊಳ್ಳುತ್ತದೆ. ಪರೋಕ್ಷವಾಗಿ ಮಗು ಕಲಿಕೆಯಲ್ಲಿ ತೊಡಗಿಕೊಳ್ಳುವಂತೆ ಉತ್ತೇಜಿಸಿದಂತಾಗುತ್ತದೆ. ಆಗಾಗ್ಗೆ ಹೊಸ ಪದ್ಯವನ್ನು ಮಕ್ಕಳಿಗೆ ಪರಿಚಯಿಸಿ. ಆಗ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡುವುದು. ಜತೆಗೆ ಇಂಥ ಮುಗ್ಧತೆ, ಸಹಜ ಕುತೂಹಲವು ಅವರ ಬದುಕಿನ ಹೆಜ್ಜೆಗಳೊಂದಿಗೆ ಬೆಸುಗೆಯಾಗುತ್ತವೆ. ಕನ್ನಡ ಪ್ರಾಸಪದ್ಯಗಳನ್ನು ನಿತ್ಯದ ಆಟಗಳಲ್ಲಿ ಬಳಸಿಕೊಂಡು, ನಲಿಯುತ್ತಲೇ ಭಾಷಾ ಕೌಶಲ ಗಳಿಸುವುದರ ಜತೆಗೆ ಹೊಸ ಸಂಗತಿಗಳಿಗೆ ತೆರೆದುಕೊಳ್ಳುವಂತೆ ಮಾಡಬಹುದು.

ಅಚ್ಚರಿ, ಸಂತಸ ಮತ್ತು ಸೃಜನಶೀಲತೆಯೇ ತುಂಬಿರುವ ಈ ಮಕ್ಕಳ ಲೋಕವು ವಯಸ್ಕರ ಪ್ರಪಂಚಕ್ಕಿಂತ ಭಿನ್ನವಾಗಿದೆ. ಮಕ್ಕಳ ಮನಸ್ಸನ್ನು ಮುದಗೊಳಿಸಿ, ಅರಳಿಸುವ ಆರೋಗ್ಯಕರ ಬಾಲ್ಯವನ್ನು ಯಾವುದೇ ರೀತಿಯ ಖರ್ಚು, ವೆಚ್ಚವಿಲ್ಲದೆ ಒದಗಿಸಬಹುದು. ಮಕ್ಕಳು ಎಲೆಕ್ಟ್ರಾನಿಕ್ ಗ್ಯಾಡ್ಜೆಟ್‌ಗಳಲ್ಲಿ ಕಳೆದುಹೋಗದೇ, ಸಹಜವಾಗಿ ಬಾಲ್ಯವನ್ನು ಆಸ್ವಾದಿಸುವಂತೆ ಮಾಡಬಹುದು.

## ವಿದ್ಯಾರ್ಥಿ ವೇತನ ಕೈಪಿಡಿ

### ಕ್ಯಾಡೆನ್ಸ್ ಸ್ಕಾಲರ್‌ಷಿಪ್

ಕ್ಯಾಡೆನ್ಸ್ ಸ್ಕಾಲರ್‌ಷಿಪ್ ಪದವಿ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಕಲಿಯುತ್ತಿರುವವರಿಗೆ ಆರ್ಥಿಕ ನೆರವು ನೀಡುತ್ತದೆ.

**ಅರ್ಹತೆ:** ಭಾರತೀಯ ಪ್ರಜೆಯಾಗಿರಬೇಕು. ಅರ್ಜಿದಾರರು ಕನಿಷ್ಠ ಶೇ 60ರಷ್ಟು ಅಂಕಗಳೊಂದಿಗೆ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕಡಿಮೆ ಆದಾಯ ಇರುವ ಕುಟುಂಬದಿಂದ ಬಂದಿರಬೇಕು. ಮಹಿಳೆಯರು ಮತ್ತು ಅಂಗವಿಕಲರು ಮತ್ತು ಲೈಂಗಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ಆರ್ಥಿಕ ಸಹಾಯ:** ಪ್ರಮುಖ ಶೈಕ್ಷಣಿಕ ವೆಚ್ಚಗಳನ್ನು ಭರಿಸಲು ಆರ್ಥಿಕ ನೆರವು.

**ಅರ್ಜಿ ಸಲ್ಲಿಸಲು ಕೊನೆ ದಿನ:** 30-04-2025

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/TCSP5

### ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಪ್ರೋಗ್ರಾಂ ಫಾರ್ ಓವರ್‌ಸೀಸ್

ಎಸ್‌ಬಿಐ ಫೌಂಡೇಷನ್‌ನಡಿ ಬರುವ ಒಂದು ಉಪಕ್ರಮವಾಗಿದ್ದು, ಕಡಿಮೆ ಆದಾಯವಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುವ ಗುರಿ ಹೊಂದಿದೆ.

**ಅರ್ಹತೆ:** ವಿದೇಶದಲ್ಲಿ ವಿಶ್ವವಿದ್ಯಾಲಯ ಅಥವಾ ಕಾಲೇಜಿನಲ್ಲಿ ಸ್ನಾತಕೋತ್ತರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದ ಕೋರ್ಸ್‌ಗೆ ದಾಖಲಾಗಿರಬೇಕು. ಎಸ್‌ಸಿ ಮತ್ತು ಎಸ್‌ಟಿ ವರ್ಗದ ವಿದ್ಯಾರ್ಥಿಗಳಿಗೆ ಆದ್ಯತೆ. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹6,00,000 ಇರಬೇಕು.

**ಆರ್ಥಿಕ ನೆರವು:** ₹ 20,00,000ದವರೆಗೆ ಅಥವಾ ಕೋರ್ಸ್-ಸಂಬಂಧಿತ ಖರ್ಚುಗಳ ಶೇ 50ರಷ್ಟು (ಯಾವುದು ಕಡಿಮೆಯೋ ಅದು).

**ಅರ್ಜಿ ಸಲ್ಲಿಸಲು ಕೊನೆ ದಿನ:** 30-04-2025

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

### ಯುನಿವರ್ಸಿಟಿ ಆಫ್ ಶೆಫೀಲ್ಡ್ ಇಂಟರ್‌ನ್ಯಾಷನಲ್

ಪದವಿ ಕಲಿಯುತ್ತಿರುವ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಯುನಿವರ್ಸಿಟಿ ಆಫ್ ಶೆಫೀಲ್ಡ್ ನೀಡುವ ಕೊಡುಗೆಯಾಗಿದೆ.

**ಅರ್ಹತೆ:** ಯುನಿವರ್ಸಿಟಿ ಆಫ್ ಶೆಫೀಲ್ಡ್‌ನಲ್ಲಿ ಪೂರ್ಣಾವಧಿಯ ಪದವಿ ಕೋರ್ಸ್ ಮುಂದುವರಿಸಲು ಅವಕಾಶವಿದೆ. ಅಭ್ಯರ್ಥಿಗಳು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಶೇ 60ರಷ್ಟು ಅಥವಾ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಬೋಧನಾ ಶುಲ್ಕಗಳ ಉದ್ದೇಶಕ್ಕಾಗಿ ಅವರು ಸೆಲ್ಫ್-ಫಂಡೆಡ್ ವಿದ್ಯಾರ್ಥಿ ಎಂದು ವಿಭಾಗಿಸಲ್ಪಟ್ಟಿರಬೇಕು.

**ಆರ್ಥಿಕ ಸಹಾಯ:** ಬೋಧನಾ ಶುಲ್ಕಗಳಿಗಾಗಿ £10,000 (ಅಂದಾಜು ₹11,05,000)ವಾರ್ಷಿಕ ಧನಸಹಾಯ.

**ಅರ್ಜಿ ಸಲ್ಲಿಸಲು ಕೊನೆ ದಿನ:** 22-04-2025

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url: www.b4s.in/praja/UGMS1

### ಗ್ಲೋಬಲ್ ಸ್ಕಾಲರ್‌ಷಿಪ್

ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಎಐಎಸ್ ಟೆಕ್ನೋಲ್ಯಾಬ್ಸ್ (ಐಟಿ ಸಲಹಾ ಕಂಪನಿ) ಕಂಪನಿ 'ಗ್ಲೋಬಲ್ ಸ್ಕಾಲರ್‌ಷಿಪ್ ಪ್ರೋಗ್ರಾಂ- ಎಐಎಸ್ 2023' ಯೋಜನೆ ರೂಪಿಸಿದೆ. ವಿಶ್ವದಾದ್ಯಂತ ಯಾವುದೇ ಕ್ಷೇತ್ರದಲ್ಲಿ ಯಾವುದೇ ವಿಷಯದಲ್ಲಿ ಉನ್ನತ ಸಾಧನೆ ಮಾಡಲು ಬಯಸುವ ಪ್ರತಿಭಾನ್ವಿತರು ಇದಕ್ಕೆ ಅರ್ಜಿ ಸಲ್ಲಿಸಬಹುದು.

**ಅರ್ಹತೆ:** ಪಿಯುಸಿ ಮುಗಿಸಿ, ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಆಯಾ ಕೋರ್ಸ್‌ನಲ್ಲಿ ಕನಿಷ್ಠ ಒಂದು ವರ್ಷದ ಅವಧಿಯನ್ನು ಪೂರ್ಣಗೊಳಿಸಿರಬೇಕು.

**ಆರ್ಥಿಕ ನೆರವು:** 2 ವರ್ಷಗಳವರೆಗೆ ವಾರ್ಷಿಕ ವಿದ್ಯಾರ್ಥಿವೇತನ.

**ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಮೇ 15,2025

**ಅರ್ಜಿ ಸಲ್ಲಿಕೆ ವಿಧಾನ :** ಆನ್‌ಲೈನ್

**ಹೆಚ್ಚಿನ ಮಾಹಿತಿಗೆ:** www.b4s.in/praja/GSPA5

## ಮಾತನಾಡದ ಅಪ್ಪ–ಅಮ್ಮನಿಗೆ ಏನು ಹೇಳಬಹುದು?

**ಸಮಾಧಾನ**

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

- **ನನಗೆ ಹದಿನೇಳು ವರ್ಷ. ಅಪ್ಪ, ಅಮ್ಮ ಮತ್ತು ನಾನು ಇರುವ ಚಿಕ್ಕ ಕುಟುಂಬ. ಈಚೆಗೆ ಅಪ್ಪ ಅಮ್ಮ ಪರಸ್ಪರ ಮಾತನಾಡುವುದಿಲ್ಲ. ಆದರೆ, ನನ್ನೊಟ್ಟಿಗೆ ಇಬ್ಬರೂ ನಗು ನಗುತ್ತಾ ಮಾತನಾಡುತ್ತಾರೆ. ಮನೆಯಲ್ಲಿ ಎಲ್ಲವೂ ಸರಿ ಇಲ್ಲ ಅನಿಸುತ್ತಿದೆ. ಇದು ಚಿಂತೆಯಾಗಿ ಕಾಲೇಜಿನಲ್ಲಿಯೂ ಕೊರೆಯುತ್ತದೆ. ಸ್ನೇಹಿತರೊಂದಿಗೆ ಇದ್ದಾಗ ಏನೂ ಅನಿಸದು. ಮನೆಗೆ ಹೋದರೆ ಉಸಿರುಗಟ್ಟಿದಂತೆ ಆಗುತ್ತದೆ. ಅವರಿಬ್ಬರೂ ಪರಸ್ಪರ ಕುದಿಯುತ್ತಿದ್ದಾರೆ ಎಂದೂ ಅನಿಸುತ್ತದೆ. ಇದು ನನ್ನ ಅನಿಸಿಕೆಯೇ?, ಅವರಿಗೆ ಕೇಳಿ ಪರಿಹರಿಸಿಕೊಳ್ಳಬೇಕೆ? ಅಥವಾ ಈಗ ಅನಿಸಿದ್ದನ್ನು ಉಪೇಕ್ಷಿಸಬೇಕೇ? ಮನೆಯ ವಾತಾವರಣವನ್ನು ಮೊದಲಿನಂತೆ ಮಾಡುವುದು ಹೇಗೆ?**

ನಿಮ್ಮ ಸ್ಥಿತಿ ಕೇಳಿ ವಿಷಾದವಾಯಿತು. ಪಾಲಕರ ಹತ್ತಿರ ಮುಕ್ತವಾಗಿ ಮಾತನಾಡುವುದೂ ಸುಲಭವೇನಲ್ಲ. ತಳಮಳವನ್ನು ಅವರಿಗೆ ಹೇಳುವುದು ತಪ್ಪಲ್ಲ. ಇಷ್ಟು ವರ್ಷ ನೀವು ಮೂವರು ಪರಸ್ಪರ ಹೇಗಿದ್ದೀರಿ ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ಮನೆಯಲ್ಲಿ ಪಾಲಕರ ಮನಸ್ತಾಪದಿಂದಾಗಿ ಹದಿಹರೆಯದಲ್ಲಿ ಮಕ್ಕಳ ಮನಸ್ಸಿನ ಮೇಲೆ ಗಾಸಿಯಾಗುತ್ತದೆ. ಅವರಿಗೆ ಗೊಂದಲ ಉಂಟಾಗುತ್ತದೆ. ಮಾಡದ ತಪ್ಪಿಗೆ ನರಳುವಂತಾಗುತ್ತದೆ.

ಯಾರು ಎಷ್ಟೊತ್ತಿಗೆ ಬಂದರೂ ಮನೆಯಲ್ಲಿ ಇರುವವರು ಕಾಯುತ್ತ ಇರಬೇಕು. ಆಧುನಿಕ ಯುಗದಲ್ಲಿ ಮನೆಗಳಲ್ಲಿ ಇರುವವರು ಮೂವರೇ ಆಗಿರುವುದರಿಂದ ಪರಸ್ಪರ ಕಾಯುತ್ತ, ಸಹನೀಯವಾಗಿಯೂ, ಕುತೂಹಲಿಗಳಾಗಿಯೂ ಇರುವುದು ಕಷ್ಟ. ಯಾರಿಗೂ ಯಾರನ್ನೂ ಸಂತೈಸುವ ವ್ಯವಧಾನವಾಗಲೀ, ಸಮಾಧಾನವಾಗಲೀ ಇರುವುದಿಲ್ಲ.

ಈಗ ನೀವು ಮಾಡಬಹುದಿಷ್ಟು. ಪಾಲಕರಲ್ಲಿ ಹೆಚ್ಚು ಆತ್ಮೀಯರ ಹತ್ತಿರ ನಿಮ್ಮ ನೋವನ್ನು ಹೇಳಿ. ಅವರಿಬ್ಬರೂ ನಿಮಗೆ ಬಹುಮುಖ್ಯ ಎಂಬುದನ್ನು ತಿಳಿಸಿ. ಅವರ ವರ್ತನೆಯಿಂದಾಗಿ ಮನಸ್ಸಿಗೆ ಆಗುತ್ತಿರುವ ಹಿಂಸೆಯ ಬಗ್ಗೆ ಪ್ರತ್ಯೇಕವಾಗಿ ಹೇಳಿ. ಮಗನ ಖುಷಿಗಾಗಿ ಇಬ್ಬರ ನಡುವೆ ಇರುವ ಮನಸ್ತಾಪ ಕರಗಬಹುದು. ಅವರಿಬ್ಬರನ್ನೂ ಒತ್ತಾಯಿಸಿ ಯಾವುದಾದರೂ ಊರಿಗೆ ಹೋಗಿ ಬನ್ನಿ. ಬರುವುದರೊಳಗೆ ಅವರ ಸಂಬಂಧ ಮೊದಲಿನಂತೆ ಆಗುವ ಸಾಧ್ಯತೆಯೂ ಇರುತ್ತದೆ. ಇವೆಲ್ಲದರ ಚಿಂತೆ ಬಿಟ್ಟು ನಿಮ್ಮ ಬದುಕಿನ ಕಡೆಗೂ ಗಮನ ಕೊಡಿ.

## ಸಿಇಟಿ-ನೀಟ್ ಪರೀಕ್ಷೆ ದಿಕ್ಸೂಚಿ

### PUC-CET: PHYSICS

**53) A particle shows the distance-time curve as shown in the figure. The maximum instantaneous velocity of the particle is around the point.**




a) P b) S
c) R d) Q

**Ans: (c)**

**Expln:-** $V_m ax = dx/dt$ = maximum slope
From the figure, at point R the slope is maximum, hence at this point velocity is maximum.
∴ The maximum instantaneous velocity of the particle is around the point 'R'.

**54) A solenoid length 0.4 cm, radius 1 cm and 400 turns of wire. If a current of 5 A is passed through this solenoid, what is the magnetic field inside the solenoid?**

(a) $6.28 \times 10^{-7}$ T (b) $6028 \times 10^{-4}$ T
(c) $6.28 \times 10^{-1}$ T (d) $6.28 \times 10^{-3}$ T

**Soln: (C): Here**
Length, $l = 0.4$ cm $= 0.4 \times 10^{-2}$ m
Radius, $r = 1$ cm $= 10^{-2}$ m
Number of turns per unit length is

$$n = \frac{N}{l} = \frac{400}{0.4 \times 10^{-2}} = 10^5 \text{ turns/m}$$

Magnetic field inside the solenoid is

$$B = \mu_0 n I = 4\pi \times 10^{-7} \times 10^5 \times 5$$
$$= 62.8 \times 10^{-2}\text{ T} = 6.28 \times 10^{-1}\text{ T}$$

**55) The fig given shows electric field lines in which an electric dipole p is placed. Which of the following statements is correct?**

a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.




**Ans:- c**

**56) A gyromagnetic ratio of the electron revolving in a circular orbit of hydrogen atom is $8.8 \times 10^{10}$ Ckg$^{-1}$. What is the mass of the electron? Given charge of the electron=$1.6 \times 10^{-19}$ C.**

(a) $1.1 \times 10^{-29}$ kg (b) $1 \times 10^{-29}$ kg
(c) $\frac{1}{11} \times 10^{-29}$ kg (d) $0.1 \times 10^{-29}$ kg

**Soln: (c)** Gyromagnetic ratio of an electron

**57) What is the value of shunt resistance required to convert a galvanometer of resistance 100 Ω into an ammeter of range 1 A?**

**Given :** Full scale deflection of the galvanometer is 5 m A.

a) 0.5 Ω (b) $\frac{5}{9.95}$ Ω
c) 0.05Ω (d) $\frac{9.95}{5}$ Ω

**Soln:** (b): Here,
Resistence of galvanometer, $G = 100\Omega$
Full scale deflection current, $I_g = 5$ mA
$5 \times 10^{-3}$ A




To convert the galvanometer into an ammeter of range 1 A, a shunt resistance of value S is connected in parallel with it such that,

$$(I - I_g)S = I_g G$$
$$S = \frac{I_g G}{I - I_g} = \frac{5 \times 10^{-3} \times 100}{1 - 5 \times 10^{-3}} = \frac{5 \times 10^{-1}}{1 - 0.005}$$
$$= \frac{0.5}{0.995} = \frac{5}{9.95}\Omega$$

**58) Electric field intensity due to an infinitely long straight uniformly charged wire at a distance $r$ from the wire varies as**

a) r b) $r^{-1}$
c) $r^2$ d) $r^{-2}$

**Ans:-b**

**59) A point positive charge is brought near an isolated conducting sphere as in the figures given below. The electric field is best given by**




.a) Fig (i) b) Fig (ii)
c) Fig (iii) d) Fig (iv)

**Ans:- (a)**

### NEET: BIOLOGY

**64) The diagram given below represents the T S of dicot leaf. Identify the parts labelled as A, B, C, and D, which denote their functions and choose the correct one given below.**




a) A-Motor action, B-Photosynthesis, C-Conduction, D-transpiration
b) A-Motor action, B-Conduction, C-Photosynthesis, D-transpiration
c) A-transpiration, B-Photosynthesis, C-Conduction, D-Transpiration
d) A-Tranpiration, B-Conduction, C-Photosynthesis, D-Motor action

**Ans:- a;**

**Expln-** In the diagram, between motor cells, gap has been shown. It looks like guard cell.

**65)**




**In the diagram of the graafian follicle different parts are indicated by alphabets, choose the choice in which these alphabets are correctly matched with the parts –**

a) A = Membrana granulosa; B = Theca interna; C = Ovum; D = Cumulus oophorus; E = Antrum; F = Theca externa
b) A = Theca externa; B = Theca interna; C = Ovum; D= Membrana granulosa; E=Antrum; F = Cumulus oophorus
c) A = membrana granulose, B = ovum, C = cumulus oophorus, D = Antrum, E = Theca interna, G = Theca externa.
d) A = Membrana granulosa; B = Theca externa; C = Ovum; D = Cumulus oophorus; E = Antrum; F = Theca interna

**Ans:- c;**

**66) In the diagram of the portion of the TS of the helianthus leaf passing through the midrib given below, certain parts have been indicated by alphabets choose the answer in which these alphabets have been correctly matched with the parts which they indicate.**




a) A = Epidermis, B = Palisade parenchyma, C = Spongy parenchyma, D = Stomata, E = Guard cells, F = Endodermis, G = Xylem, H = Phloem
b) A = Epidermis, B = Palisade parenchyma, C = Spongy parenchyma, D = Stomata, E = Guard cells, F= Phloem, G = Metaxylem, H = Protoxylem.
c) A = Epidermis, B = Spongy parenchyma, C = Palisade parenchyma, D = Stomata, E = Guard cells, F= Phloem, G = Metaxylem, H= Protoxylem.
d) A = Epidermis, B = Palisade parenchyma, C = Spongy parenchyma, D = Substomatal cavity, E = Guard cells, F = Phloem, G=Metaxylem, H = Protoxylem.

**Ans:- d;**

**67) Given below is the floral diagram of a flower. Which of the following descriptions of the flower matches the floral diagram?**



a) Homochlamydeous, gamopetalous, pentamerous and bisexual
b) Heterochlamydeous, gamopetalous, tetramerous and unisexual
c) Heterochlamydeous, gamopetalous, tetramerous and bisexual
d) Homochlamydeous, polypetalous, pentamerous and bisexual

**Ans:- c;**

**Expln- Heterochlamydeous** – having botgh the perianth segments, sepals and petals in distinct whorls.
**Gamopetalous** – all the petals of the flower are fused.
**Tetramerous and bisexual** – having both the male and female sex organs.

ವರದಿ ತಿರಸ್ಕರಿಸಿ ಹೊಸ ಗಣತಿ ನಡೆಸಲು ಆರ್.ಅಶೋಕ ಒತ್ತಾಯ • ಸ್ವಾಮೀಜಿಗಳ ನೇತೃತ್ವದಲ್ಲಿ ಸಭೆಗೆ ತೀರ್ಮಾನ

# 'ಲಿಂಗಾಯತ–ಒಕ್ಕಲಿಗರನ್ನು ಒಡೆದ ಜಾತಿಗಣತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿಸಿರುವ ಜಾತಿಗಣತಿಯಲ್ಲಿ ಒಕ್ಕಲಿಗರು, ಲಿಂಗಾಯತರನ್ನು ಒಡೆಯುವ ಪ್ರಯತ್ನ ನಡೆದಿದೆ. ಮುಸ್ಲಿಮರನ್ನು ಅತಿ ದೊಡ್ಡ ಒಂದು ಜಾತಿ ಎಂದು ಪರಿಗಣಿಸಲಾಗಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದ್ದಾರೆ.

ಆರ್. ಅಶೋಕ

'ಮುಸ್ಲಿಮರನ್ನು ಕೇವಲ ಮತ ಬ್ಯಾಂಕ್ ಆಗಿ ಮಾಡಿಕೊಳ್ಳಲು ಸಿದ್ದರಾಮಯ್ಯ ಜಾತಿ ಗಣತಿ ಮಾಡಿಸಿದ್ದಾರೆ. ಅಷ್ಟೇ ಅಲ್ಲದೆ, ಹಿಂದೂಗಳಲ್ಲಿ ಸಾಕಷ್ಟು ಜಾತಿಗಳ ಗಣತಿಯನ್ನೇ ಮಾಡಿಲ್ಲ. ಆದ್ದರಿಂದ, ಈ ವರದಿಯನ್ನು ಹಿಂದಕ್ಕೆ ಪಡೆದು, ಪ್ರತಿ ಮನೆ ಮನೆಗೆ ಹೋಗಿ ಸಮೀಕ್ಷೆ ಮಾಡಿ, ನಿಖರವಾಗಿ ಮಾಹಿತಿ ಸಂಗ್ರಹಿಸಿ, ವೈಜ್ಞಾನಿಕ ವರದಿ ರೂಪಿಸಬೇಕು' ಎಂದು ಅವರು ಭಾನುವಾರ ಸುದ್ದಿಗಾರರ ಜತೆ ಮಾತನಾಡಿ ಆಗ್ರಹಿಸಿದರು.

'ಸಿದ್ದರಾಮಯ್ಯನವರು ಜಾತಿ, ಧರ್ಮಗಳನ್ನು ಒಡೆಯುವ ಕೆಲಸವನ್ನು ಜಾತಿಗಣತಿ ಮೂಲಕ ಯಶಸ್ವಿಯಾಗಿ ಮಾಡಿಸಿದ್ದಾರೆ. ರಾಜ್ಯದಲ್ಲಿ ಅತಿ ದೊಡ್ಡ ಜಾತಿ ಲಿಂಗಾಯತರು, ಎರಡನೇ ಅತಿ ದೊಡ್ಡ ಜಾತಿ ಒಕ್ಕಲಿಗರು, ಮೂರನೆಯವರು ದಲಿತರು ಎಂದಿತ್ತು. ಈಗ ಮುಸ್ಲಿಮರು ಅತಿ ದೊಡ್ಡ ಜಾತಿ ಎನ್ನಲಾಗಿದೆ. ಮುಸ್ಲಿಮರಲ್ಲಿ ಹಲವು ಜಾತಿಗಳಿದ್ದರೂ ಬೇರೆ ಮಾಡಿಲ್ಲ. ಒಕ್ಕಲಿಗರಲ್ಲಿ ಕೆಲವು ಜಾತಿಗಳನ್ನು ವಿಂಗಡಿಸಲಾಗಿದೆ. ಕಾಂಗ್ರೆಸ್‌ಗೆ ಹೆಚ್ಚು ಮತ ನೀಡುವ ಜಾತಿಗಳ ಸಂಖ್ಯೆಯನ್ನು ಮಾತ್ರ ಹೆಚ್ಚಾಗಿ ತೋರಿಸಲಾಗಿದೆ. ಒಕ್ಕಲಿಗರಿಗೆ, ಲಿಂಗಾಯತರಿಗೆ ಮತ್ತು ದಲಿತರಿಗೆ ನಾಮ ಹಾಕಿದ್ದಾರೆ' ಎಂದು ಅಶೋಕ ಟೀಕಿಸಿದರು.

'ಸಿದ್ದರಾಮಯ್ಯ ಪ್ರಾಯೋಜಿತ ಈ ವರದಿ ಅವೈಜ್ಞಾನಿಕ. ಅಧಿಕಾರಿಗಳು ಮನೆಗಳಿಗೆ ಹೋಗದೇ ವರದಿ ಬರೆಯಲಾಗಿದೆ. ಕರ್ನಾಟಕ ತಂತ್ರಜ್ಞಾನದಲ್ಲೇ ನಂ 1 ಆಗಿದೆ. ಇದನ್ನು ಬಳಸಿ ವರದಿ ತಯಾರಿಸಬಹುದಿತ್ತು. ತಮ್ಮ ಇಚ್ಛೆಗೆ ಅನುಗುಣವಾಗಿ ವರದಿ ಬರೆಸಿಕೊಂಡಿದ್ದಾರೆ' ಎಂದರು.

'ಕಾಂಗ್ರೆಸ್ ಪಕ್ಷ ಒಕ್ಕಲಿಗರು ಮತ್ತು ಲಿಂಗಾಯತರ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದೆ. ಇನ್ನೂ ಸಮಯವಿದೆ. ಆರು ತಿಂಗಳು ತಡವಾದರೂ ಪರವಾಗಿಲ್ಲ. ಪ್ರತಿ ಮನೆಗೆ ಹೋಗಿ ಸಮೀಕ್ಷೆ ಮಾಡಿ ವರದಿಯನ್ನು ರೂಪಿಸಲಿ' ಎಂದು ಅವರು ಆಗ್ರಹಿಸಿದರು.

'ಹಳ್ಳಿಕಾರ್, ಕುಂಚಿಟಿಗರನ್ನು ಒಕ್ಕಲಿಗರಿಂದ ಬೇರೆ ಮಾಡಲಾಗಿದೆ. ರಡ್ಡಿ ಲಿಂಗಾಯತರನ್ನು ಪ್ರತ್ಯೇಕಿಸಲಾಗಿದೆ. ಇಂತಹ ವರದಿಯನ್ನು ಸರ್ಕಾರ ಒಪ್ಪಿಕೊಂಡಿರಬಹುದು. ಆದರೆ, ಆಯಾ ಸಮುದಾಯದ ಜನರು ಒಪ್ಪುವುದಿಲ್ಲ. ಈ ವರದಿಯಿಂದ ಕಾಂಗ್ರೆಸ್‌ನಲ್ಲೇ ದಂಗೆ ಆರಂಭವಾಗಲಿದೆ. ಸಮುದಾಯದ ಜನರು ಮುಂದಿನ ಚುನಾವಣೆಯಲ್ಲಿ ಹತ್ತಿರ ಸೇರಿಸುವುದಿಲ್ಲ. ಒಕ್ಕಲಿಗ ಸ್ವಾಮೀಜಿಯವರು ಸಭೆ ಕರೆದು ಚರ್ಚೆ ಮಾಡಲಿದ್ದಾರೆ. ಇದೇ ರೀತಿ ಬೇರೆ ಸಮುದಾಯದವರು ಸಭೆ ಮಾಡಿ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿ ನೀಡಿದ್ದಾರೆ. ಆದರೆ, ಮುಸ್ಲಿಮರಿಗೆ ಮೀಸಲಾತಿ ನೀಡಲು ರಾಜ್ಯಕ್ಕೆ ಅಧಿಕಾರವಿಲ್ಲ. ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರುವಂತಿಲ್ಲ. ಮೂಗಿಗೆ ತುಪ್ಪ ಸವರುವ ಕೆಲಸವನ್ನು ಸರ್ಕಾರ ಮಾಡಿದೆ. ಹೆಚ್ಚಿನ ಮೀಸಲಾತಿ ಯಾವ ಕಾನೂನಿನಡಿ ನೀಡಲಾಗುತ್ತದೆ ಎಂಬುದನ್ನು ಸರ್ಕಾರ ತಿಳಿಸಬೇಕು ಎಂದು ಒತ್ತಾಯಿಸಿದರು.

## 'ಸಿದ್ದರಾಮಯ್ಯಗೆ ಮರಣ ಶಾಸನ'

'ಜಾತಿ ಜನಗಣತಿ ಸಿದ್ದರಾಮಯ್ಯ ಅವರಿಗೆ ಮರಣ ಶಾಸನ ಆಗಲಿದೆ. ಆದ್ದರಿಂದ ವರದಿಯನ್ನು ತಿರಸ್ಕರಿಸಬೇಕು' ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಆಗ್ರಹಿಸಿದ್ದಾರೆ.

ವಿ.ಸೋಮಣ್ಣ

'ಕುರ್ಚಿ ಉಳಿಸಿಕೊಳ್ಳಲು ವರದಿಯ ಜಾರಿಗೆ ಮುಖ್ಯಮಂತ್ರಿ ಮುಂದಾಗಿದ್ದಾರೆ. ಇದು ಜಾರಿಯಾದರೆ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಸಿದ್ದರಾಮಯ್ಯ ಖಳನಾಯಕರಾಗುತ್ತಾರೆ' ಎಂದರು.

'ಅವೈಜ್ಞಾನಿಕ, ತಪ್ಪು ಮಾಹಿತಿಗಳ ಈ ವರದಿಯನ್ನು ಹಿಂಪಡೆಯಬೇಕು. ಒಬ್ಬ ವ್ಯಕ್ತಿಯನ್ನೂ ಬಿಡದೇ ಎಲ್ಲರನ್ನೂ ಒಳಗೊಂಡ ಸಮೀಕ್ಷೆ ಮಾಡಬೇಕು. ಇಲ್ಲವಾದರೆ ಜನಸಾಮಾನ್ಯರು ಶಾಪ ಹಾಕುತ್ತಾರೆ' ಎಂದು ಹೇಳಿದರು.

## ಆತುರದ ನಿರ್ಧಾರ ಇಲ್ಲ: ಡಿಕೆಶಿ

ತೂಬಗೆರೆ (ದೊಡ್ಡಬಳ್ಳಾಪುರ): 'ಸಚಿವ ಸಂಪುಟದಲ್ಲಿ ಚರ್ಚಿಸದೆ ಜಾತಿ ಗಣತಿ ವರದಿ ಬಗ್ಗೆ ಸರ್ಕಾರ ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯನಿಗೆ ಭಾನುವಾರ ಕುಟುಂಬ ಸಮೇತ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸ್ವಾಂತ ತಿಳಿದುಕೊಂಡು ಎಲ್ಲರಿಗೂ ನ್ಯಾಯ ಒದಗಿಸಿಕೊಡುವ ಕೆಲಸ ಮಾಡುತ್ತೇವೆ' ಎಂದು ಭರವಸೆ ನೀಡಿದರು.

'ನಾನು ಇನ್ನೂ ಜಾತಿಗಣತಿ ವರದಿ ನೋಡಿಲ್ಲ. ಎರಡು ದಿನಗಳಿಂದ ಬೆಳಗಾವಿ, ಮಂಗಳೂರಿಗೆ ಹೋಗಿದ್ದೆ. ಸದನದಲ್ಲಿ ಈ ಕುರಿತು ಚರ್ಚೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಕೆಲವು ರಾಜಕಾರಣಿಗಳು ತಮಗೆ ಬೇಕಾದಂತೆ ಹೇಳಿಕೆ ನೀಡುತ್ತಿದ್ದಾರೆ' ಎಂದರು.

**ನಿಲುವು ಪ್ರತಿಪಾದಿಸಲಿ (ಬೆಂಗಳೂರು ವರದಿ):** 'ವೀರಶೈವ ಮಹಾಸಭಾದವರು ಅವರ ಸಮಾಜ ರಕ್ಷಿಸಿಕೊಳ್ಳಲು ಹೊರಟಿದ್ದು, ಅವರನ್ನು ನಾವೇಕೆ ಟೀಕಿಸಬೇಕು. ಸಂವಿಧಾನದ ಪ್ರಕಾರ ಅವರು ತಮ್ಮ ನಿಲುವು ಪ್ರತಿಪಾದಿಸಲಿ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲೂ ಚರ್ಚೆ ನಡೆಸುವ ನಿರ್ಧಾರ ಮಾಡಲಾಗಿದೆ. ಯಾವುದೇ ಸಮಾಜಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ
**ಸಲೀಂ ಅಹ್ಮದ್**, ವಿಧಾನ ಪರಿಷತ್ ಮುಖ್ಯ ಸಚೇತಕ

ಈ ವರದಿಯನ್ನು ಮತಬ್ಯಾಂಕ್‌ಗಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಕಾಂಗ್ರೆಸ್‌ನವರಲ್ಲೇ ಗೊಂದಲವಿದೆ.ಈ ಬಗ್ಗೆ ನಿಲುವು ಸ್ಪಷ್ಟಪಡಿಸಬೇಕು
**ಪ್ರಲ್ಹಾದ ಜೋಶಿ**, ಕೇಂದ್ರ ಸಚಿವ

ಬಿಜೆಪಿ–ಜೆಡಿಎಸ್‌ಗೆ ಜಾತಿಗಣತಿ ಸಮೀಕ್ಷೆ ಮಾಡಲು ಯೋಗ್ಯತೆ ಇರಲಿಲ್ಲ. ಅದಕ್ಕಾಗಿಯೇ ಈಗ ಹೊಟ್ಟೆ ಉರಿಯಿಂದ ವಿರೋಧಿಸುತ್ತಿವೆ
**ಬೈರತಿ ಸುರೇಶ್**, ನಗರಾಭಿವೃದ್ಧಿ ಸಚಿವ

ಜಾತಿಗಣತಿ ವರದಿ ಮುಂದಿಟ್ಟು ಮೊದಲೇ ನಿರ್ಧಾರವಾಗಿತ್ತು. ಇದರಲ್ಲಿ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳುವ ಪ್ರಯತ್ನವೇನಿಲ್ಲ
**ಯತೀಂದ್ರ ಸಿದ್ದರಾಮಯ್ಯ**, ವಿಧಾನ ಪರಿಷತ್ ಸದಸ್ಯ

ಮನೆಮನೆಗೆ ಹೋಗಿ, ಸಮೀಕ್ಷೆ ನಡೆಸಿ ಸಿದ್ಧಪಡಿಸಿರುವ ಜಾತಿ ಜನಗಣತಿ ವರದಿಯು ಅಂಬೇಡ್ಕರ್ ಶಾಸನ. ಎಲ್ಲರನ್ನೂ ವಿಶ್ವಾಸಕ್ಕೆ ಪಡೆದು ವರದಿ ಜಾರಿಗೊಳಿಸಲಾಗುವುದು
**ಎಚ್.ಆಂಜನೇಯ**, ಕೆಪಿಸಿಸಿ ಉಪಾಧ್ಯಕ್ಷ

ಜನಸಂಖ್ಯೆಯಲ್ಲಿ 2ನೇ ದೊಡ್ಡ ಸಂಖ್ಯೆಯಲ್ಲಿರುವ ಮುಸ್ಲಿಮರು ಹೇಗೆ ಅಲ್ಪಸಂಖ್ಯಾತರಾಗುತ್ತಾರೆ. ಜಾತಿ ಜನಗಣತಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ
**ಸಿ.ಟಿ. ರವಿ**, ವಿಧಾನ ಪರಿಷತ್ ಸದಸ್ಯ

## 'ಸಭೆಯಲ್ಲಿ ಮಾತನಾಡುವೆ'

ಮಲ್ಲಿಕಾರ್ಜುನ್

ಚಿತ್ರದುರ್ಗ: 'ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಾಗ ಜಾತಿ ಜನಗಣತಿ ವರದಿ ಬಗ್ಗೆ ಮಾತನಾಡುತ್ತೇನೆ. ವೀರಶೈವ ಲಿಂಗಾಯತ ಮುಖಂಡರು ವರದಿಗೆ ವಿರೋಧ ವ್ಯಕ್ತಪಡಿಸಿರುವ ವಿಚಾರ ನನಗೆ ಗೊತ್ತಿಲ್ಲ' ಎಂದು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.

'ಈ ಹಿಂದೆ ಇದೇ ವಿಚಾರವಾಗಿ ಮಾತನಾಡಿದ್ದೆ, ಆಗ ವರದಿ ಸಂಪುಟದ ಮುಂದೆ ಬಂದಿರಲಿಲ್ಲ. ಈಗ ಮುಖ್ಯಮಂತ್ರಿಯವರ ಕೈ ಸೇರಿದೆ. ಈ ಬಗ್ಗೆ ಮಾತನಾಡುತ್ತೇನೆ' ಎಂದು ಭಾನುವಾರ ಸುದ್ದಿಗಾರರಿಗೆ ಹೇಳಿದರು.

# ಜಾತಿಗಣತಿ ವರದಿ: ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): ಜಾತಿ ಜನಗಣತಿ ವರದಿ ಅನುಷ್ಠಾನ ಕುರಿತು ಏಪ್ರಿಲ್ 17ರಂದು ನಡೆಯುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಜಿ.ಪರಮೇಶ್ವರ

ಜಾತಿ ಗಣತಿ ವರದಿಯ ಪ್ರತಿಯನ್ನು ಎಲ್ಲಾ ಸಚಿವರಿಗೂ ಈಗಾಗಲೇ ತಲುಪಿಸಲಾಗಿದೆ. ವರದಿಯನ್ನು ಎಲ್ಲರೂ ಓದಿ, ಪರಿಶೀಲಿಸಿದ ನಂತರ ವರದಿ ಅನುಷ್ಠಾನ ಕುರಿತು ಚರ್ಚಿಸಲಾಗುವುದು ಎಂದು ಭಾನುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಸವಲತ್ತುಗಳಿಂದ ವಂಚಿತರಾಗಿರುವ ಜಾತಿಗಳಿಗೆ ಮೀಸಲಾತಿ, ಶಿಕ್ಷಣ, ಉದ್ಯೋಗ ಹಾಗೂ ಸೌಲಭ್ಯ ಕಲ್ಪಿಸಲು ಈ ಜಾತಿ ಗಣತಿ ವರದಿ ಅಗತ್ಯ ಎಂದು ಅವರು ಸಮರ್ಥಿಸಿಕೊಂಡರು.

'ನಮ್ಮ ಹಿಂದಿನ ಸರ್ಕಾರದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಮಾಹಿತಿ ಸಂಗ್ರಹಿಸಲಾಗಿದೆ. ಹತ್ತು ವರ್ಷ ಕಳೆದರೂ ವರದಿ ಸ್ವೀಕಾರ ಮಾಡಿಲ್ಲ. ಗಣತಿ ವೇಳೆ ಸಂಗ್ರಹ ಮಾಡಿರುವ ಅಂಶಗಳ ಬಗ್ಗೆ ಚರ್ಚಿಸಬೇಕಿದೆ. ವರದಿ ನೋಡದೆ ಮಾತನಾಡುವುದು ಸರಿಯಲ್ಲ. ಮೇಲ್ನೋಟಕ್ಕೆ ವರದಿಯಲ್ಲಿರುವ ಶೇ 80ರಷ್ಟು ಮಾಹಿತಿ ಸಮರ್ಪಕವಾಗಿದೆ. ವರದಿ ಪರಾಮರ್ಶೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

## ವೈಜ್ಞಾನಿಕವಾಗಿ ಮತ್ತೆ ಗಣತಿ ನಡೆಯಲಿ: ಕಾಂಗ್ರೆಸ್ ಶಾಸಕ

ತಿಪಟೂರು (ತುಮಕೂರು): ಜಾತಿ ಜನಗಣತಿ 10 ವರ್ಷಗಳ ಹಿಂದೆ ನಡೆದಿದ್ದು, ವರದಿ ವೈಜ್ಞಾನಿಕವಾಗಿಲ್ಲ ಎಂಬ ಆತಂಕವಿದೆ ಎಂದು ಶಾಸಕ ಡಾ.ಎಚ್.ಡಿ.ರಂಗನಾಥ್ ಪ್ರತಿಕ್ರಿಯಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜಾತಿಗಣತಿ ವರದಿ ಯಾರೂ ನೋಡಿಲ್ಲ. ವರದಿ ಹೇಗೆ ಬರುತ್ತದೆ ಅಂತ ನೋಡಬೇಕು. ವರದಿಯಲ್ಲಿ ಸಣ್ಣಪುಟ್ಟ ಲೋಪದೋಷ ಆಗಿದ್ದರೆ ಕಂಡು ಬರುತ್ತದೆ. ಮತ್ತೊಮ್ಮೆ ವೈಜ್ಞಾನಿಕವಾಗಿ ಗಣತಿ ಮಾಡಬೇಕು ಎಂದು ಒತ್ತಾಯಿಸುತ್ತೇನೆ. ನಮ್ಮ ಸಮುದಾಯದ ಹಿತಾಸಕ್ತಿ ಕಾಪಾಡುವುದು ನಮ್ಮ ಜವಾಬ್ದಾರಿ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿ ಎಂಬುವುದು ಎಲ್ಲ ಶಾಸಕರ ಬಯಕೆ. 2028ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 150 ಸ್ಥಾನ ಗೆಲ್ಲಬೇಕಾದರೆ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿರಬೇಕು ಎಂಬುದು ಎಲ್ಲ ಶಾಸಕರ ಅಭಿಪ್ರಾಯ ಎಂದರು.

# 'ಉಪ ಜಾತಿ ನಮೂದಿಸಿದರಷ್ಟೆ ಒಳ ಮೀಸಲಾತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಬರುವ 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಪ್ರಮಾಣ ಹಂಚಿಕೆಗೆ ಅವಕಾಶವಾಗುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗಕ್ಕೆ ಸರಿಯಾದ ಮಾಹಿತಿ ನೀಡಬೇಕು' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಕೋರಿದರು.

ರಾಜ್ಯ ಛಲವಾದಿ ಮಹಾಸಭಾದಿಂದ ಅಂಬೇಡ್ಕರ್ ಭವನದಲ್ಲಿ ನಡೆದ ಒಳ ಮೀಸಲಾತಿ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಒಳ ಮೀಸಲಾತಿ ಪಡೆಯಲು ಉಪ ಜಾತಿಗಳ ವಿವರ ನೀಡುವುದು ಕಡ್ಡಾಯವಾಗಿದೆ' ಎಂದರು.

ಚಂದ್ರಶೇಖರಯ್ಯ

'ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎನ್ನುವುದು ಜಾತಿಗಳಲ್ಲ. 101 ಪರಿಶಿಷ್ಟ ಜಾತಿಗಳ ಗುಂಪಿನಲ್ಲಿ ಅವು ಸೇರಿವೆ. ಉಳಿದ 98 ಜಾತಿಗಳಲ್ಲಿ ಬಲಗೈ, ಹೊಲೆಯ, ಛಲವಾದಿ, ಮಹರ್, ಪರೈಯ, ಮಾಲ ಜನರು ಕಡ್ಡಾಯವಾಗಿ ಉಪ ಜಾತಿಗಳನ್ನು ನಮೂದಿಸಬೇಕು. ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಗುರುತಿಸಿಕೊಂಡವರು ಹೊಲೆಯ, ಛಲವಾದಿ, ಮಹರ್, ಪರೈಯ, ಮಾಲ ಮುಂತಾದ ಉಪ ಜಾತಿಗಳನ್ನು ನಮೂದಿಸಬೇಕು' ಎಂದು ಅವರು ಹೇಳಿದರು.

'ಆಯೋಗ ನಡೆಸಲಿರುವ ಸಮೀಕ್ಷೆಯ ವೇಳೆಯಲ್ಲಿ ಪರಿಶಿಷ್ಟ ಜಾತಿಯವರು ತಮ್ಮ ಧರ್ಮದ ವಿವರಕ್ಕೆ ಸಂಬಂಧಿಸಿ ಮತ್ತ ನೀಡುವ ಅಗತ್ಯ ಇಲ್ಲ. ಕೆಲವರು ಬೌದ್ಧರು ಎಂದು ನಮೂದಿಸಿದರೆ ಜಾತಿ ಕಾಲಂನಲ್ಲಿ ಪರಿಶಿಷ್ಟ ಜಾತಿಯ ಉಪ ಜಾತಿ ಹೆಸರು ನಮೂದಿಸಬೇಕು. ಧರ್ಮ ನಮೂದಿಸಿ ಉಪ ಜಾತಿ ನಮೂದಿಸದಿದ್ದರೆ ಅಲ್ಪಸಂಖ್ಯಾತರ ಗುಂಪಿಗೆ ಸೇರಿಸುವ ಸಾಧ್ಯತೆ ಇದೆ. ಅಲ್ಲದೆ, ನಗರ ಪಟ್ಟಣದಲ್ಲಿ ಜಾತಿ ಸುಳ್ಳು ಹೇಳಿ ಬಾಡಿಗೆ ಮನೆ ಪಡೆದವರೂ ಕಡ್ಡಾಯವಾಗಿ ಸಮೀಕ್ಷೆಯಲ್ಲಿ ತಮ್ಮ ಜಾತಿಯನ್ನು ನಮೂದಿಸಬೇಕು' ಎಂದರು.

ಛಲವಾದಿ ಮಹಾಸಭಾದ ಅಧ್ಯಕ್ಷ, ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯ ಮಾತನಾಡಿ, 'ಸುಪ್ರೀಂ ಕೋರ್ಟ್ ಆದೇಶಕ್ಕೆ ಪೂರಕವಾಗಿ, ಸರ್ಕಾರವು ಪರಿಶಿಷ್ಟ ಜಾತಿಯ ದತ್ತಾಂಶವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಸಂಗ್ರಹಿಸಬೇಕಿದೆ. ಪರಿಶಿಷ್ಟ ಜಾತಿಯವರು ಸ್ವಯಂಸೇವಕರಾಗಿ ಈ ಸಮೀಕ್ಷೆಯಲ್ಲಿ ಭಾಗವಹಿಸಿ ತಮ್ಮ ಉಪ ಜಾತಿಯ ಎಲ್ಲ ಮಾಹಿತಿಯನ್ನು ಸಮರ್ಪಕವಾಗಿ ನೀಡಬೇಕು' ಎಂದು ಸಲಹೆ ನೀಡಿದರು.

ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಶಾಸಕ ಬಿ.ಬಿ. ನಿಂಗಯ್ಯ, ನಿವೃತ್ತ ಐಎಎಸ್ ಅಧಿಕಾರಿ ಸುಭಾಷ್ ಭರಣಿ, ದಲಿತ ಮುಖಂಡರಾದ ಡಿ.ಜಿ. ಸಾಗರ್, ಮಹಾಸಭಾದ ಪ್ರಮುಖರಾದ ಟಿ.ಆರ್. ಶಿವರಾಮು, ಜಿ. ಮಹದೇವಯ್ಯ, ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಛಲವಾದಿ ಸಮುದಾಯದ ನಾಯಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಆರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅನೈತಿಕ ಸಂಬಂಧಕ್ಕೆ ಸಹಕರಿಸಿದ ಹಾಗೂ ಕೃತ್ಯದಲ್ಲಿ ತೊಡಗಿದ ಆರೋಪದ ಮೇರೆಗೆ ಇಬ್ಬರು ಮಹಿಳೆಯರನ್ನು ಮಸೀದಿಯ ಎದುರು ಅಮಾನುಷವಾಗಿ ಥಳಿಸಿ, ಕಲ್ಲು ಎತ್ತಿ ಹಾಕಿ ಕೊಲೆಗೆ ಯತ್ನಿಸಿದ ಆರು ಜನರನ್ನು ಚನ್ನಗಿರಿ ಠಾಣೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನ ತಾವರೆಕೆರೆ ಗ್ರಾಮದ ಮೊಹಮ್ಮದ್ ನಿಯಾಜ್, ಮೊಹಮ್ಮದ್ ಗೌಸ್‌ಪೀರ್, ಚಾಂದ್ ಬಾಷಾ, ಇನಾಯತ್ ಉಲ್ಲಾ, ದಸ್ತಗಿರ್ ಹಾಗೂ ಟಿ.ಆರ್. ರಸೂಲ್ ಬಂಧಿತರು. ಘಟನೆಯಲ್ಲಿ ಗಾಯಗೊಂಡಿರುವ ಚಿಕ್ಕಮಗಳೂರು ಜಿಲ್ಲೆಯ ಬುಕ್ಕಾಂಬುದಿ ಗ್ರಾಮದ ಶಬೀನಾ ಬಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ.

ಮೂಲತಃ ತಾವರೆಕೆರೆಯವರಾದ ಶಬೀನಾ ಬಾನು ಹಾಗೂ ಜಮೀಲ್ ಅಹಮ್ಮದ್ ಪಕ್ಕದ ಬುಕ್ಕಾಂಬುದಿ ಗ್ರಾಮದಲ್ಲಿ ನೆಲೆಸಿದ್ದಾರೆ. ಏ.7ರಂದು ಶಬೀನಾ ಮನೆಗೆ ಭೇಟಿ ನೀಡಿದ್ದ ಮಹಿಳೆಯೊಬ್ಬರು ಅನ್ಯ ಪುರುಷನೊಂದಿಗೆ ಸಲುಗೆಯಿಂದ ವರ್ತಿಸಿದ್ದಾರೆ. ಇದನ್ನು ಗಮನಿಸಿದ ಶಬೀನಾ ಪತಿ ಜಮೀಲ್, ತಾವರೆಕೆರೆಯ ಜಾಮಿಯಾ ಮಸೀದಿಗೆ ಪತ್ನಿ ಸೇರಿದಂತೆ ಮೂವರ ವಿರುದ್ಧ ದೂರು ನೀಡಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಸಮುದಾಯದ ಕೆಲ ಮುಖಂಡರು ಏ.9ರಂದು ಶಬೀನಾ ಮತ್ತು ಅವರ ಸಂಬಂಧಿ ಮಹಿಳೆಯನ್ನು ಮಸೀದಿಗೆ ಕರೆಸಿ ಸಾರ್ವಜನಿಕವಾಗಿ ನಿಂದಿಸಿದ್ದಾರೆ. ದೊಣ್ಣೆ, ಪೈಪು, ಕಲ್ಲುಗಳಿಂದ ಅಮಾನುಷವಾಗಿ ಹಲ್ಲೆ ನಡೆಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದನ್ನು ಗಮನಿಸಿದ ಪೊಲೀಸರು ಸಂತ್ರಸ್ತ ಮಹಿಳೆಯನ್ನು ಪತ್ತೆ ಮಾಡಿ ದೂರು ದಾಖಲಿಸಿಕೊಂಡಿದ್ದಾರೆ.

ವಕ್ಫ್ (ತಿದ್ದುಪಡಿ) ಕಾಯ್ದೆ: ಮುರ್ಶಿದಾಬಾದ್ ಜಿಲ್ಲೆಯಲ್ಲಿ ಹಿಂಸಾತ್ಮಕ ಪ್ರತಿಭಟನೆ

# ಬಂಗಾಳ ಹಿಂಸಾಚಾರ: 150 ಜನರ ಬಂಧನ

ಕೋಲ್ಕತ್ತ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆಯ ವಿರೋಧವಾಗಿ ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಜಿಲ್ಲೆಯಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಗೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು 150 ಮಂದಿಯನ್ನು ಬಂಧಿಸಲಾಗಿದೆ.

'ಇನ್ನೂ 12 ಮಂದಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಹಿಂಸಾಚಾರದಲ್ಲಿ ಮೂವರು ಮೃತಪಟ್ಟಿದ್ದಾರೆ.

ಮುಸ್ಲಿಂ ಬಾಹುಳ್ಯದ ಈ ಜಿಲ್ಲೆಯಲ್ಲಿ ಮತ್ತೆ ಹಿಂಸಾಚಾರ ನಡೆದಿರುವುದು ವರದಿಯಾಗಿಲ್ಲ. ಭದ್ರತಾ ಪಡೆಗಳು ಎಲ್ಲೆಡೆ ಕಟ್ಟೆಚ್ಚರ ವಹಿಸಿವೆ ಎಂದು ಹಿರಿಯ ಪೊಲೀಸರು ಹೇಳಿದ್ದಾರೆ.

'ಸೂತಿ, ಧುಲಿಯಾನ್, ಶಂಶೇರ್‌ಗಂಜ್ ಮತ್ತು ಜಂಗೀಪುರ ಪ್ರದೇಶದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಇದುವರೆಗಿನ ಬಂಧಿತರ ಒಟ್ಟು ಸಂಖ್ಯೆಯು 150ಕ್ಕೆ ಏರಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಿಂಸಾಚಾರಕ್ಕೆ ಒಳಗಾಗಿದ್ದ ಪ್ರದೇಶಗಳಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 163ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ, ಅಲ್ಲಿ ಇಂಟರ್ನೆಟ್ ಸೇವೆಯನ್ನು ಅಮಾನತಿನಲ್ಲಿ ಇರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಭದ್ರತಾ ಸಿಬ್ಬಂದಿಯು ಮುಖ್ಯ ರಸ್ತೆಗಳಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದಾರೆ, ಸೂಕ್ಷ್ಮ ಸ್ಥಳಗಳಲ್ಲಿ ಗಸ್ತು ತಿರುಗುತ್ತಿದ್ದಾರೆ ಎಂದರು.

'ಹಿಂಸಾಚಾರದ ಬಗ್ಗೆ ತನಿಖೆ ನಡೆಯುತ್ತಿದೆ, ಇನ್ನಷ್ಟು ಜನರ ಬಂಧನವಾಗುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

ವಕ್ಫ್ ಕಾಯ್ದೆಯ ವಿರುದ್ಧವಾಗಿ ಶುಕ್ರವಾರ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸ್ ವ್ಯಾನ್ ಸೇರಿದಂತೆ ಹಲವು ವಾಹನಗಳಿಗೆ ಬೆಂಕಿ ಹಚ್ಚಲಾಯಿತು, ಭದ್ರತಾ ಸಿಬ್ಬಂದಿಯತ್ತ ಕಲ್ಲು ತೂರಲಾಯಿತು, ರಸ್ತೆಗಳಲ್ಲಿ ಸಂಚಾರಕ್ಕೆ ಅಡ್ಡಿ ಉಂಟುಮಾಡಲಾಯಿತು. ಶನಿವಾರ ಕೂಡ ಹಿಂಸಾಚಾರ ನಡೆದಿರುವುದಾಗಿ ವರದಿಯಾಗಿದೆ.

ಶುಕ್ರವಾರದ ಹಿಂಸಾಚಾರದಲ್ಲಿ 18 ಮಂದಿ ಪೊಲೀಸರಿಗೆ ಗಾಯಗಳಾಗಿವೆ. ಶನಿವಾರ ರಾತ್ರಿ ಸ್ಥಳಕ್ಕೆ ಬಂದ ಡಿಜಿಪಿ ರಾಜೀವ್ ಕುಮಾರ್ ಅವರು ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ, ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದರು.

- ಮುರ್ಶಿದಾಬಾದ್‌ನಲ್ಲಿ ನಡೆದ ಹಿಂಸಾಚಾರದ್ದು ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೆ ಆಗಿವೆ. ಆದರೆ ಈ ವಿಡಿಯೊಗಳು ನಕಲಿ ಎಂದು ಟಿಎಂಸಿ ಹೇಳಿದೆ
- ಹಿಂಸಾಚಾರಕ್ಕೆ ಸಂಬಂಧಿಸಿ ನಕಲಿ ವಿಡಿಯೊ ಹಾಗೂ ನಕಲಿ ಚಿತ್ರಗಳನ್ನು ಬಿಜೆಪಿಯು ಇಂಟರ್ನೆಟ್ ಮೂಲಕ ಹರಿಬಿಡುತ್ತಿದೆ ಎಂದು ಟಿಎಂಸಿ ಸಂಸದೆ ಸಾಗರಿಕಾ ಘೋಷ್, ಪಕ್ಷದ ವಕ್ತಾರ ಕುನಾಲ್ ಘೋಷ್ ಆರೋಪಿಸಿದ್ದಾರೆ
- ಹಿಂಸಾಚಾರದಿಂದ ನಲುಗಿರುವ ಪ್ರದೇಶಗಳಲ್ಲಿ ಶಾಂತಿ ಮರುಸ್ಥಾಪಿಸಲು ಟಿಎಂಸಿ ನೇತೃತ್ವದ ಸರ್ಕಾರವು ಸರ್ವಪಕ್ಷ ಸಭೆ ಕರೆಯಬೇಕು ಎಂದು ಕಾಂಗ್ರೆಸ್ ಸಂಸದ ಇಶಾ ಖಾನ್ ಚೌಧರಿ ಒತ್ತಾಯಿಸಿದ್ದಾರೆ
- ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ವಿರೋಧಿಸಿ ಅಸ್ಸಾಂ ರಾಜ್ಯದ ಕಛಾರ್ ಜಿಲ್ಲೆಯಲ್ಲಿ ಭಾನುವಾರ ನಡೆದ ಪ್ರತಿಭಟನೆಯ ವೇಳೆ ಪೊಲೀಸರು–ಪ್ರತಿಭಟನಾಕಾರರ ನಡುವೆ ಘರ್ಷಣೆ, ಪೊಲೀಸರಿಂದ ಲಾಠಿ ಪ್ರಹಾರ. ನಿಷೇಧಾಜ್ಞೆ ಜಾರಿ. ಅನುಮತಿ ಇಲ್ಲದೆ ಪ್ರತಿಭಟನೆ ಆಯೋಜನೆ ಆಗಿತ್ತು ಎಂದ ಪೊಲೀಸರು

ವಕ್ಫ್ (ತಿದ್ದುಪಡಿ) ಮಸೂದೆಗೆ ಅಂಗೀಕಾರ ದೊರೆತ ನಂತರದಲ್ಲಿ ಹಿಂಸಾಚಾರಕ್ಕೆ ಪ್ರಚೋದನೆ ನೀಡಲಾಗುತ್ತಿದೆ
**ಯೋಗಿ ಆದಿತ್ಯನಾಥ**, ಉತ್ತರ ಪ್ರದೇಶ ಮುಖ್ಯಮಂತ್ರಿ

## ವಕ್ಫ್: 'ಸುಪ್ರೀಂ'ನಲ್ಲಿ ಪ್ರಶ್ನಿಸಲು ಮಣಿಪುರ 'ಕೈ' ನಿರ್ಧಾರ

ಇಂಫಾಲ್ (ಪಿಟಿಐ): 'ಕಾಂಗ್ರೆಸ್ ಪಕ್ಷದ ಮಣಿಪುರ ಘಟಕವು ವಿವಾದಿತ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಿದೆ' ಎಂದು ಪಕ್ಷದ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಒಕ್ರಮ್ ಇಬೋಬಿ ಸಿಂಗ್ ಅವರು ತಿಳಿಸಿದರು.

'ಕಾಯ್ದೆಯು ಸಂವಿಧಾನವನ್ನು ಉಲ್ಲಂಘಿಸುತ್ತದೆ. ಭಾರತ ಜಾತ್ಯತೀತ ರಾಷ್ಟ್ರ. ಆದರೆ ಎನ್‌ಡಿಎ ಸರ್ಕಾರವು ಮುಸ್ಲಿಮರು ಮತ್ತು ಅಲ್ಪಸಂಖ್ಯಾತರ ವಿರುದ್ಧ ದಾಳಿ ನಡೆಸುತ್ತಿದೆ. ಕಾಯ್ದೆಯ ವಿರುದ್ಧ ಪಕ್ಷದ ರಾಜ್ಯ ಘಟಕವು ಕಾನೂನಾತ್ಮಕ ಹೋರಾಟ ನಡೆಸಲಿದೆ. ಈ ಸಂಬಂಧ ತಂಡವೊಂದು ಬುಧವಾರ ದೆಹಲಿಗೆ ತೆರಳಲಿದೆ' ಎಂದು ಅವರು ಹೇಳಿದರು.

**ಪ್ರತಿಭಟನೆ**
ತೆಲಂಗಾಣದ ಹೈದರಾಬಾದ್‌ನಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಬಳಿ ಭಾರಿ ಸಂಖ್ಯೆಯಲ್ಲಿ ಸೇರಿದ ಜನರು ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿಸಿ ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

## ಕಾಯ್ದೆ ವಿರೋಧಿಸಿ 19ರಂದು ಪ್ರತಿಭಟನೆ ಸಭೆ

ಹೈದರಾಬಾದ್ (ಪಿಟಿಐ): ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಏಪ್ರಿಲ್ 19ರಂದು ಪ್ರತಿಭಟನಾ ಸಭೆ ನಡೆಸಲಿದೆ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಅವರು ಭಾನುವಾರ ತಿಳಿಸಿದರು.

ಎಐಎಂಪಿಎಲ್‌ಬಿ ಅಧ್ಯಕ್ಷ ಖಾಲಿದ್ ಸೈಫುಲ್ಲಾ ರಹಮಾನಿ ಅವರ ನೇತೃತ್ವದಲ್ಲಿ ಎಐಎಂಐಎಂ ಮುಖ್ಯ ಕಚೇರಿಯಲ್ಲಿ ಸಂಜೆ 7–10ರವರೆಗೆ ಸಭೆ ನಡೆಯಲಿದೆ ಎಂದರು.

ತೆಲಂಗಾಣ, ಆಂಧ್ರಪ್ರದೇಶದ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಸದಸ್ಯರು ಹಾಗೂ ಎರಡೂ ರಾಜ್ಯಗಳ ಮುಸ್ಲಿಂ ಸಂಘಟನೆಗಳ ಸದಸ್ಯರು ಪ್ರತಿಭಟನಾ ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಅಸಾದುದ್ದೀನ್ ಓವೈಸಿ

# ಮುರ್ಶಿದಾಬಾದ್ ತೊರೆಯುತ್ತಿರುವ ಜನ

ಒಂದನೇ ಪುಟದಿಂದ...

'ಅವರು ಬಾಂಬ್ ಎಸೆದರು, ವಕ್ಫ್ ಕಾಯ್ದೆಗಾಗಿ ನಮ್ಮನ್ನು ದೂಷಿಸಿದರು. ನಮ್ಮ ಮನೆಗಳನ್ನು ತಕ್ಷಣ ತೊರೆಯುವಂತೆ ಸೂಚಿಸಿದರು. ನಮ್ಮ ಮನೆಯ ಗಂಡಸರನ್ನು ಥಳಿಸಿದರು. ಜೀವಭಯದಿಂದ ನಾವು ಕೇಂದ್ರೀಯ ಪಡೆಗಳ ಸಹಾಯದಿಂದ ಪಾರಾಗಿ ಬಂದೆವು' ಎಂದು ಅವರು ವಿವರಿಸಿದರು.

'ನಾವು ತಪ್ಪು ಮಾಡದಿದ್ದರೂ ಲೂಟಿಕೋರರಂತೆ ನಮ್ಮನ್ನು ಕಂಡು ಕ್ಷಮೆಯಾಚಿಸುವಂತೆ ಮಾಡಿದರು. ಆಯುಧಗಳನ್ನು ಝಳಪಿಸುತ್ತಿದ್ದ ಅವರು ಬಹಳಷ್ಟು ದೌರ್ಜನ್ಯ ಎಸಗಿದರು. ನಾನು, ನನ್ನ ಮಗ, ಸೊಸೆ ಮತ್ತು ಮೊಮ್ಮಗ ನಮ್ಮ ಒಂದಿಷ್ಟು ವಸ್ತುಗಳೊಂದಿಗೆ ಪಾರಾಗಿ ಬಂದೆವು. ಇಲ್ಲಿದ್ದರೆ ನಮ್ಮ ಹತ್ಯೆಯಾಗುತ್ತಿತ್ತು' ಎಂದು ಮಹಿಳೆಯೊಬ್ಬರು ವಿವರಿಸಿದರು.

ಮುರ್ಶಿದಾಬಾದ್‌ನಿಂದ ತಪ್ಪಿಸಿಕೊಂಡು ಹೋಗಿರುವ ಜನರು ಹತ್ತಿರದ ಮಾಲ್ಡಾ ಜಿಲ್ಲೆಯ ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ –ಪಿಟಿಐ ಚಿತ್ರ

## '400 ಮಂದಿ ಓಡಿಹೋಗಿದ್ದಾರೆ'

ಹಿಂಸಾಚಾರದ ನಂತರ 400 ಮಂದಿ ಧುಲಿಯಾನ್‌ನಿಂದ ಬೇರೆಡೆ ಓಡಿಹೋಗಿದ್ದಾರೆ ಎಂದು ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹೇಳಿದ್ದಾರೆ.

'ಧುಲಿಯಾನ್, ಮುರ್ಶಿದಾಬಾದ್‌ನ 400ಕ್ಕೂ ಹೆಚ್ಚು ಮಂದಿ ಹಿಂದೂಗಳು ಮತಾಂಧರ ಭೀತಿಯಿಂದಾಗಿ ನದಿ ದಾಟಿ ಓಡಿಹೋಗಿದ್ದಾರೆ... ಪಶ್ಚಿಮ ಬಂಗಾಳದಲ್ಲಿ ಧಾರ್ಮಿಕ ದೌರ್ಜನ್ಯ ನಿಜವಾಗಿದೆ' ಎಂದು ಅವರು ಹೇಳಿದ್ದಾರೆ.

'ಟಿಎಂಸಿಯ ತುಷ್ಟೀಕರಣ ರಾಜಕೀಯವು ಮೂಲಭೂತವಾದಿಗಳಿಗೆ ಧೈರ್ಯ ತುಂಬಿಕೊಟ್ಟಿದೆ. ಹಿಂದೂಗಳನ್ನು ಗುರಿಯಾಗಿಸಿಕೊಳ್ಳಲಾಗಿದೆ, ನಮ್ಮ ಜನರು ಅವರದೇ ನಾಡಿನಲ್ಲಿ ಜೀವ ಉಳಿಸಿಕೊಳ್ಳಲು ಓಡಿಹೋಗುತ್ತಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಕುಸಿಯುವಂತೆ ಮಾಡಿರುವುದಕ್ಕೆ ರಾಜ್ಯ ಸರ್ಕಾರಕ್ಕೆ ನಾಚಿಕೆಯಾಗಬೇಕು' ಎಂದು 'ಎಕ್ಸ್' ಮೂಲಕ ಹೇಳಿದ್ದಾರೆ.

ಮೊದಲು ಕೆಲವರು ಮಾತ್ರ ದೋಣಿಗಳಲ್ಲಿ ಬರುತ್ತಿದ್ದರು. ಆದರೆ ಶುಕ್ರವಾರ ಮಧ್ಯಾಹ್ನದ ನಂತರ ಅವರ ಸಂಖ್ಯೆ ಹೆಚ್ಚಿದೆ ಎಂದು ದೇವನಾಪುರ್–ಸೋವಾಪುರ್ ಗ್ರಾಮ ಪಂಚಾಯಿತಿ ಪ್ರಧಾನರಾದ ಸುಲೇಖಾ ಚೌಧರಿ ತಿಳಿಸಿದರು. 'ಶನಿವಾರದವರೆಗೆ ಬಂದವರ ಸಂಖ್ಯೆಯು 500ನ್ನು ದಾಟಿದೆ. ಇವರಲ್ಲಿ ಹೆಚ್ಚಿನವರು ಮಹಿಳೆಯರು' ಎಂದು ಅವರು ಹೇಳಿದರು. ದೋಣಿಗಳಲ್ಲಿ ಬರುತ್ತಿರುವವರ ಮೇಲೆ ನಿಗಾ ಇಡಲು ನದಿ ದಡದಲ್ಲಿ 20 ಮಂದಿ ಯುವಕರನ್ನು ನಿಯೋಜಿಸಲಾಗಿದೆ ಎಂದು ಪಂಚಾಯಿತಿ ಸದಸ್ಯೆ ಚಂದನಾ ಸರ್ಕಾರ್ ತಿಳಿಸಿದರು.

## ಹನುಮ ಜಯಂತಿ ಮೆರವಣಿಗೆ ವೇಳೆ ಕಲ್ಲೆಸೆತ: 9 ಬಂಧನ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಗುನಾ ನಗರದಲ್ಲಿ ಹನುಮ ಜಯಂತಿ ಮೆರವಣಿಗೆಯ ಸಂದರ್ಭದಲ್ಲಿ ಕಲ್ಲು ತೂರಾಟ ನಡೆದ ಪ್ರಕರಣದಲ್ಲಿ ಒಂಬತ್ತು ಮಂದಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

'ಕರ್ನಲ್‌ಗಂಜ್ ಪ್ರದೇಶದ ಮಸೀದಿಯ ಬಳಿ ಶನಿವಾರ ಸಂಜೆ 7.45ರ ಸುಮಾರಿಗೆ ಈ ಘಟನೆ ನಡೆದಿದೆ.



ಮೆರವಣಿಗೆಯು ಮಸೀದಿಯ ಮುಂದೆ ಹಾದು ಹೋಗುವಾಗ ಎರಡು ಸಮುದಾಯಗಳ ಜನರು ಪರಸ್ಪರ ಮುಖಾಮುಖಿಯಾದದ್ದು ಕಲ್ಲು ತೂರಾಟಕ್ಕೆ ಕಾರಣ ಆಯಿತು' ಎಂದು ಗುನಾ ಜಿಲ್ಲಾಧಿಕಾರಿ ಕಿಶೋರ್ ಕನ್ಯಾಲ್ ಹೇಳಿದ್ದಾರೆ.

'ಕಲ್ಲು ತೂರಾಟದಲ್ಲಿ ಭಾಗಿಯಾದ ಒಂಬತ್ತು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಘಟನೆಯ ವಿಡಿಯೊಗಳು ಮತ್ತು ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಅವರ ಮೇಲೆ ಆರೋಪ ಹೊರಿಸಲಾಗಿದೆ. ಇತರ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದು, ಅವರನ್ನೂ ಬಂಧಿಸಲಾಗುವುದು' ಎಂದು ಎಸ್‌ಪಿ ಮಾನ್ ಸಿಂಗ್ ಠಾಕೂರ್ ತಿಳಿಸಿದ್ದಾರೆ.

**ಸಂಕ್ಷಿಪ್ತ ಸುದ್ದಿ**

## ಪಟಾಕಿ ಘಟಕದಲ್ಲಿ ಬೆಂಕಿ ಅವಘಡ: 8 ಮಂದಿ ಸಾವು

ವಿಶಾಖಪಟ್ಟಣ (ಪಿಟಿಐ): ಅನಕಾಪಲ್ಲಿ ಜಿಲ್ಲೆಯಲ್ಲಿನ ಪಟಾಕಿ ತಯಾರಿಕಾ ಘಟಕದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಮೂವರು ಮಹಿಳೆಯರೂ ಸೇರಿದಂತೆ ಒಟ್ಟು ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಗೃಹ ಸಚಿವೆ ವಿ. ಅನಿತಾ ತಿಳಿಸಿದ್ದಾರೆ.

ಭಾನುವಾರ ಸಂಭವಿಸಿದ ಅವಘಡದಲ್ಲಿ ಏಳು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇದು ಆಘಾತಕಾರಿ ಘಟನೆ ಎಂದು ಪ್ರಕಟಣೆಯ ಮೂಲಕ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಪ್ರತಿಕ್ರಿಯಿಸಿದ್ದು, ಗಾಯಾಳುಗಳಿಗೆ ಸಮರ್ಪಕ ಚಿಕಿತ್ಸೆ ದೊರಕಿಸಿ ಕೊಡಲು ವ್ಯವಸ್ಥೆ ಮಾಡುವಂತೆ ಸಚಿವೆ ಅನಿತಾ ಹಾಗೂ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಪ್ರಕರಣದ ತನಿಖೆ ನಡೆಸುವಂತೆಯೂ ಸೂಚಿಸಿದ್ದಾರೆ.

## ರಾಜಸ್ಥಾನ: ಬಿಸಿಗಾಳಿ ಸಾಧ್ಯತೆ

ಜೈಪುರ (ಪಿಟಿಐ): ಸೋಮವಾರದಿಂದ ಪಶ್ಚಿಮ ರಾಜಸ್ಥಾನದಾದ್ಯಂತ ಬಿಸಿಗಾಳಿ ಬೀಸಲಿದ್ದು, ತಾಪಮಾನವು 3ರಿಂದ 5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಹೇಳಿದೆ.

ಮುಂದಿನ ಕೆಲ ದಿನಗಳವರೆಗೆ ಶುಷ್ಕ ಹವಾಮಾನ ಇರಲಿದೆ. ರಾಜ್ಯದ ಹಲವೆಡೆ ಹೆಚ್ಚಿನ ಪ್ರಮಾಣದ ಮಳೆಯಾಗಿದೆ ಎಂದು ಇಲಾಖೆ ತಿಳಿಸಿದೆ.

ಈ ಕುರಿತು ಮಾಹಿತಿ ನೀಡಿದ ಇಲಾಖೆಯ ವಕ್ತಾರ, 'ಜೋಧಪುರ, ಬಿಕಾನೇರ್ ಹಾಗೂ ಶೆಖಾವತಿ ಪ್ರದೇಶಗಳು ಸೇರಿದಂತೆ ಮುಂದಿನ ದಿನಗಳಲ್ಲಿ ಹಲವೆಡೆ ಬಿಸಿಗಾಳಿ ಬೀಸುವ ಸಾಧ್ಯತೆ ಹೆಚ್ಚಿದೆ. ಈ ಋತುವಿನಲ್ಲಿ ಗರಿಷ್ಠ ತಾಪಮಾನವು 45 ರಿಂದ 46 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಲಿದೆ' ಎಂದು ತಿಳಿಸಿದ್ದಾರೆ.

## 'ಜೈ ಶ್ರೀರಾಂ' ಘೋಷಣೆ: ರವಿ ವಿವಾದ

ಚೆನ್ನೈ (ಪಿಟಿಐ): ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಕಾಲೇಜೊಂದರ ವಿದ್ಯಾರ್ಥಿಗಳಿಗೆ 'ಜೈ ಶ್ರೀರಾಂ' ಎಂದು ಘೋಷಣೆ ಕೂಗುವಂತೆ ಹೇಳಿದ್ದಾರೆ ಎಂಬ ವರದಿಯು ತಮಿಳುನಾಡಿನಲ್ಲಿ ವಿವಾದ ಸೃಷ್ಟಿಸಿದೆ.

ರವಿ ಅವರು ಪ್ರತಿಜ್ಞಾವಿಧಿಗೆ, ಧರ್ಮನಿರಪೇಕ್ಷ ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದು ಶಿಕ್ಷಣ ತಜ್ಞರ ಸಂಘಟನೆಯಾದ ಎಸ್‌ಪಿಸಿಎಸ್‌ಇ–ಟಿಎನ್ ಆರೋಪಿಸಿದೆ.

ರವಿ ಅವರನ್ನು ರಾಜ್ಯಪಾಲ ಹುದ್ದೆಯಿಂದ ತೆಗೆಯಬೇಕು ಎಂದು ಸಂಘಟನೆಯು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಒತ್ತಾಯಿಸಿದೆ.

ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ರವಿ ಅವರು ನಡೆದುಕೊಂಡಿದ್ದಾರೆ ಎಂದು ಕೂಡ ಸಂಘಟನೆ ದೂರಿದೆ. ಸಾಹಿತ್ಯ ಸ್ಪರ್ಧೆಯೊಂದರ ವಿಜೇತರಿಗೆ ಬಹುಮಾನ ವಿತರಣೆ ಮಾಡಲು ರವಿ ಅವರನ್ನು ಮದುರೈನ ಸರ್ಕಾರಿ ಅನುದಾನಿತ ಕಾಲೇಜೊಂದಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಶನಿವಾರ ನಡೆದ ಈ ಕಾರ್ಯಕ್ರಮದಲ್ಲಿ ರವಿ ಅವರು, ಜೈ ಶ್ರೀರಾಂ ಎಂದು ಮೂರು ಬಾರಿ ಹೇಳುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿದ್ದರು.

ಆರ್.ಎನ್. ರವಿ

ನಿರ್ದಿಷ್ಟ ಧರ್ಮವೊಂದರ ದೇವರ ಹೆಸರನ್ನು ಪಠಿಸುವ ಮೂಲಕ, ಅದನ್ನು 3 ಬಾರಿ ಹೇಳುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವ ಮೂಲಕ ರವಿ ಅವರು ಸಂವಿಧಾನವನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪಿ.ಬಿ. ಪ್ರಿನ್ಸ್ ಗಜೇಂದ್ರ ಬಾಬು ದೂರಿದ್ದಾರೆ.

## ಅತ್ಯಾಚಾರ: ನಾಲ್ವರು ಬಾಲಕರು ಸೇರಿ 8 ಬಂಧನ

ಗ್ವಾಲಿಯರ್ (ಪಿಟಿಐ): ಗ್ವಾಲಿಯರ್ ಜಿಲ್ಲೆಯಲ್ಲಿ 13 ವರ್ಷ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದ್ದ ನಾಲ್ವರು ಬಾಲಕರು ಸೇರಿ ಎಂಟು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಬಾಲಕಿಯ ಸ್ಥಿತಿಯನ್ನು ಗಮನಿಸಿದ ಶಾಲೆಯ ಶಿಕ್ಷಕರು ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು. ಬಂಧಿತರ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಶಾಲೆಯಲ್ಲಿ ಯಾವಾಗಲೂ ಅನ್ಯಮನಸ್ಕಳಾಗಿ ಇರುತ್ತಿದ್ದ ಬಾಲಕಿಯನ್ನು ವಿಚಾರಿಸಿದಾಗ, ಕೃತ್ಯಕ್ಕೆ ಕಾರಣರಾದ ಆರೋಪಿಗಳ ಹೆಸರು ಹೇಳಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯು ಶನಿವಾರ, ಮನೆಯ ಸಮೀಪದಲ್ಲಿದ್ದ ಮಹಿಳೆಯೊಬ್ಬರ ಮನೆಗೆ ಹೋಗಿದ್ದಾಗ ಆರೋಪಿಗಳು ಕೃತ್ಯ ಎಸಗಿದ್ದಾರೆ. ಬಾಲಕಿಯ ಸ್ನೇಹಿತೆ ಮೂಲಕ ಆರೋಪಿಗಳು ಬಾಲಕಿಯನ್ನು ಕರೆಸಿಕೊಂಡಿದ್ದರು.

ಅಲ್ಲದೆ, ಇತರ ನಾಲ್ವರು ಬಾಲಕರು ಕಳೆದ ಒಂದು ವರ್ಷದಿಂದಲೂ ಬಾಲಕಿಯ ಮೇಲೆ ದೌರ್ಜನ್ಯ ನಡೆಸುತ್ತಿದ್ದರು ಎಂದು ಬಾಲಕಿಯು ಪೊಲೀಸರಿಗೆ ಮಾಹಿತಿ ನೀಡಿದ್ದಾಳೆ. ಬಾಲಕರನ್ನು ವಶಕ್ಕೆ ಪಡೆಯಲಾಗಿದೆ.

ಬಾಲಕಿ ಈಗ ಮಕ್ಕಳ ಕಲ್ಯಾಣ ಸಮಿತಿಯ ಆರೈಕೆಯಲ್ಲಿದ್ದು, ಚಿಕಿತ್ಸೆ ಪಡೆಯುತ್ತಿದ್ದಾಳೆ. ಸಮಿತಿ ದೂರಿನ ಆಧಾರದ ಮೇಲೆ ಮಹಿಳೆ ಸೇರಿ 8 ಜನರನ್ನು ಪೊಲೀಸರು ಬಂಧಿಸಿದ್ದಾರೆ.

## ಸುಭಾಷಿತ

ನಿಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸದಿದ್ದರೆ ನೀವು ಏನನ್ನೂ ಸಾಧಿಸಲು ಸಾಧ್ಯವಾಗದು.

-ಸಚಿನ್ ತೆಂಡೂಲ್ಕರ್

# ನ್ಯಾಯಾಂಗವು ಲಿಂಗತಾರತಮ್ಯದ ಪೂರ್ವಗ್ರಹ ಮೀರಿ ನಿಲ್ಲಬೇಕು

**ಸಮಾಜದ** ಬಹುದೊಡ್ಡ ವರ್ಗದ ಭಾವನೆಗಳು, ಚಿಂತನೆ ಮತ್ತು ನಡವಳಿಕೆಯ ಮೇಲೆ ಪುರುಷ ಪ್ರಧಾನ ಮನಃಸ್ಥಿತಿಯ ಪ್ರಭಾವ ದಟ್ಟವಾಗಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಇವು ವಿವಿಧ ರೀತಿಯಲ್ಲಿ ಆಗಾಗ ಪ್ರಕಟವಾಗುತ್ತಲೇ ಇರುತ್ತವೆ. ಈ ಮನಃಸ್ಥಿತಿಯು ಹೊರಗೆ ಬರುವುದನ್ನು ತಡೆಯುವುದಕ್ಕಾಗಿ ಸಮಾಜದಲ್ಲಿ ಕೆಲವು ಸಂಸ್ಥೆಗಳು ಇವೆ. ಲಿಂಗಸಮಾನತೆ ಮತ್ತು ಲಿಂಗತ್ವ ನ್ಯಾಯದ ಯೋಚನೆಗಳನ್ನು ಖಾತರಿಪಡಿಸುವ ಕೆಲಸವನ್ನು ಈ ಸಂಸ್ಥೆಗಳು ಮಾಡುತ್ತವೆ. ಅಂತಹ ಸಂಸ್ಥೆಗಳಲ್ಲಿ ನ್ಯಾಯಾಂಗವು ಬಹಳ ಮುಖ್ಯವಾದುದು. ಆದರೆ, ನ್ಯಾಯಾಂಗದ ಪ್ರತಿನಿಧಿಗಳೇ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳಲ್ಲಿ ಹಗುರವಾಗಿ ಮಾತನಾಡಿದ ಉದಾಹರಣೆಗಳು ಇವೆ. ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಸಂಜಯ್ ಕುಮಾರ್ ಸಿಂಗ್ ಅವರ ಆದೇಶ ಮತ್ತು ಅಭಿಪ್ರಾಯಗಳನ್ನು ಈ ದೃಷ್ಟಿಯಲ್ಲಿ ನೋಡಬೇಕಿದೆ. ಅತ್ಯಾಚಾರ ಆರೋಪಿಯ ಜಾಮೀನು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸಿಂಗ್ ಅವರು 'ಸಂತ್ರಸ್ತೆಯೇ ತನ್ನನ್ನು ಅಪಾಯಕ್ಕೆ ಒಡ್ಡಿಕೊಂಡಿದ್ದಾಳೆ' ಎಂದು ಹೇಳಿದ್ದಾರೆ. ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಆಘಾತಕಾರಿ ಮತ್ತು ಪ್ರತಿಗಾಮಿಯಾಗಿವೆ.

**ಮಹಿಳೆಯರಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿಗಳು ಸಂವೇದನಾರಹಿತ ಹೇಳಿಕೆ ನೀಡುವುದು ಉಚಿತವಲ್ಲ**

ಅವು ನ್ಯಾಯಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿವೆ. ಸಂತ್ರಸ್ತೆಯು ಮದ್ಯ ಕುಡಿದು ಆರೋಪಿಯ ಮನೆಗೆ ಹೋಗುವ ಮೂಲಕ 'ಅಪಾಯಕ್ಕೆ ಒಡ್ಡಿಕೊಂಡಿದ್ದಾಳೆ' ಎಂದು ನ್ಯಾಯಮೂರ್ತಿ ಹೇಳಿರುವುದು ಅಪರಾಧಕ್ಕಾಗಿ ಸಂತ್ರಸ್ತೆಯನ್ನೇ ದೂರಿದಂತೆ ಆಗಿದೆ.

ನ್ಯಾಯಮೂರ್ತಿಯ ಹೇಳಿಕೆಯನ್ನು ಯಾವುದೇ ರೀತಿಯಲ್ಲಿ ನೋಡಿದರೂ ಅದು ಕಾನೂನಿನ ಆಶಯಗಳಿಗೆ ವಿರುದ್ಧ. ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಇತರ ನ್ಯಾಯಾಲಯಗಳು ಹಾಕಿಕೊಟ್ಟ ಪೂರ್ವ ನಿದರ್ಶನಗಳಿಗೆ ವಿರುದ್ಧವಾಗಿದೆ. ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತೆಯು ತನ್ನ ಸಮ್ಮತಿ ಇರಲಿಲ್ಲ ಎಂದು ಹೇಳಿದರೆ ಕಾನೂನು ಅದನ್ನು ಒಪ್ಪಿಕೊಳ್ಳುತ್ತದೆ. ಕಾನೂನು ಪ್ರಕಾರ, ಆರೋಪಿಯ ನಡವಳಿಕೆ ಮತ್ತು ಕ್ರಿಯೆಯನ್ನು ಪರಿಶೀಲನೆಗೆ ಒಳಪಡಿಸಬೇಕೇ ವಿನಾ ಸಂತ್ರಸ್ತೆಯನ್ನು ಅಲ್ಲ. ಭಾರತೀಯ ಸಾಕ್ಷ್ಯ ಕಾಯ್ದೆಯ 114ಎ ಸೆಕ್ಷನ್ ಅನ್ನು ವ್ಯಾಖ್ಯಾನಿಸಿ ಈ ವಿಷಯವನ್ನು ಹಲವು ಬಾರಿ ಸ್ಪಷ್ಟಪಡಿಸಲಾಗಿದೆ. ನ್ಯಾಯಮೂರ್ತಿಯು ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯದ್ದೇ ತಪ್ಪು ಎಂಬಂತೆ ಹೇಳಿದ್ದಾರೆ. ಯಾವುದೇ ಸ್ಥಿತಿಯಲ್ಲಿ ಅಥವಾ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಸಮಯದಲ್ಲಿ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲು ಕಾನೂನು ಅವಕಾಶ ಕೊಡುವುದಿಲ್ಲ. ಸಂತ್ರಸ್ತೆಯ ಶೈಕ್ಷಣಿಕ ಅರ್ಹತೆಯಾಗಲೀ ಆಕೆ ಮದ್ಯ ಕುಡಿದಿದ್ದಳು ಎಂಬುದಾಗಲೀ ತನ್ನ ಇಚ್ಛೆಯ ಪ್ರಕಾರವೇ ಅವಳು ಆರೋಪಿ ಇದ್ದಲ್ಲಿಗೆ ಹೋಗಿದ್ದಳು ಎಂಬುದಾಗಲೀ ಇಲ್ಲಿ ಪ್ರಸ್ತುತ ಅಲ್ಲವೇ ಅಲ್ಲ. ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಪುರುಷ ಪ್ರಧಾನ ಮನಃಸ್ಥಿತಿಗೆ ನ್ಯಾಯಮೂರ್ತಿ ಸಿಂಗ್ ಅವರು ಮಾತಿನ ರೂಪ ಕೊಟ್ಟಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆ ಮುಂದುವರಿಯಬೇಕು ಎಂಬ ಹಂಬಲ ಸಮಾಜದ ಕೆಲವರಲ್ಲಿ ಇದೆ. ಆದರೆ, ಇಂತಹ ಭಾವನೆಗಳಿಂದ ಮಹಿಳೆಯರನ್ನು ರಕ್ಷಿಸಬೇಕಾದ ವ್ಯವಸ್ಥೆಯ ಕಾವಲುಗಾರರಾದ ನ್ಯಾಯಮೂರ್ತಿಗಳು ತಮ್ಮ ಮಾತು ಮತ್ತು ಆದೇಶಗಳ ಮೂಲಕ ಮಹಿಳೆಯ ಮೌಲ್ಯಮಾಪನದ ಕೆಲಸ ಮಾಡಬಾರದು.

ಹೈಕೋರ್ಟ್‌ನಂತಹ ಸಾಂವಿಧಾನಿಕ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರು ಇಂತಹ ಸಂವೇದನಾರಹಿತ ಹೇಳಿಕೆ ನೀಡಿರುವುದು ಇದೇ ಮೊದಲೇನಲ್ಲ. ಹೆಣ್ಣಿನ ಸ್ತನಗಳನ್ನು ಮುಟ್ಟುವುದು, ಪೈಜಾಮಾದ ಲಾಡಿಯನ್ನು ಎಳೆಯುವುದು, ಎಳೆದೊಯ್ಯುವುದು ಅತ್ಯಾಚಾರ ಪ್ರಯತ್ನ ಆಗದು ಎಂದು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ಕೆಲವು ದಿನಗಳ ಹಿಂದೆ ಹೇಳಿದ್ದರು. ಬೇರೊಂದು ಪ್ರಕರಣದಲ್ಲಿ, ಅತ್ಯಾಚಾರ ಸಂತ್ರಸ್ತೆಯನ್ನು ಮೂರು ತಿಂಗಳಲ್ಲಿ ಮದುವೆ ಆಗಬೇಕು ಎಂಬ ಷರತ್ತು ಒಡ್ಡಿ ಆರೋಪಿಗೆ ಇದೇ ನ್ಯಾಯಾಲಯ ಫೆಬ್ರುವರಿಯಲ್ಲಿ ಜಾಮೀನು ನೀಡಿತ್ತು. ದಶಕಗಳ ಹೋರಾಟದ ಫಲವಾಗಿ ದಕ್ಕಿಸಿಕೊಂಡ ಲಿಂಗತ್ವ ನ್ಯಾಯ ಮತ್ತು ಸಮಾನತೆಯನ್ನು ಇಂತಹ ಆದೇಶಗಳು ಮತ್ತು ಹೇಳಿಕೆಗಳು ಕ್ಷಣದಲ್ಲಿ ಧ್ವಂಸ ಮಾಡಿಬಿಡುತ್ತವೆ.

## ದಿನದ ಟ್ವೀಟ್

### ನಾಗರಿಕರು ಎಚ್ಚೆತ್ತುಕೊಳ್ಳಬೇಕಿದೆ

**ಭ್ರಷ್ಟ ಮತ್ತು ನಾಚಿಕೆಯಿಲ್ಲದ ಬಿಬಿಎಂಪಿ ಹಾಗೂ ಅದರ ಹಿಂದೆ ಇರುವ ಅಧಿಕಾರಿಶಾಹಿಯ ಬಣ್ಣ ಬಯಲಿಗೆಳೆಯಲು ಇರುವ ಏಕೈಕ ಮಾರ್ಗವೆಂದರೆ ಜನಾಂದೋಲನ. ಉತ್ತಮ ರಸ್ತೆಗಳು, ಕುಡಿಯುವ ನೀರು, ವಿದ್ಯುತ್, ಆರೋಗ್ಯಸೇವೆ ಪಡೆಯುವುದು ನಮ್ಮ ಹಕ್ಕು. ಈ ವಿಷಯದಲ್ಲಿ ಎಲ್ಲ ಸರ್ಕಾರಗಳೂ ವಿಫಲವಾಗಿವೆ.**

**ಪ್ರಕಾಶ್ ಕೆ.ಪಿ.**

## ಕಿಡಿನುಡಿ



**ನಮ್ಮ ನಾಯಕರು– ಚಲನಚಿತ್ರಗಳು ಸಹ– ಭಾರತೀಯರನ್ನು ಹಿಂದಿನ ಕಾಲದ ನೈಜ ಅಥವಾ ಕಲ್ಪಿತವಾದ ಸಾಮಾಜಿಕ ವಿಭಜನೆಗಳ ಸೆರೆಯಾಳುಗಳನ್ನಾಗಿ ಮಾಡಿದಾಗ ಇಂತಹ ಬೆಳವಣಿಗೆಗಳು ಘಟಿಸುತ್ತವೆ. 2047ರ ಹೊತ್ತಿಗೆ ವಿಕಸಿತ ಭಾರತದತ್ತ ಹೆಜ್ಜೆ ಹಾಕುವುದಕ್ಕೆ ಪೂರಕವಾದ ಮಾರ್ಗ ಇದಲ್ಲ.**

(ಕರ್ಣಿ ಸೇನಾದ ಕಾರ್ಯಕರ್ತರು ಉತ್ತರಪ್ರದೇಶದ ಆಗ್ರಾದಲ್ಲಿ ನಡೆಸಿದ 'ರಕ್ತ ಸ್ವಾಭಿಮಾನ ಸಮ್ಮೇಳನ'ದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಮಂದಿ, ಲಾಠಿ ಮತ್ತು ಕತ್ತಿಗಳನ್ನು ಹಿಡಿದು ಘೋಷಣೆ ಕೂಗುತ್ತಾ ಆತಂಕ ಹುಟ್ಟಿಸುವಂತಿದ್ದ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

**ಸುಧೀಂದ್ರ ಕುಲಕರ್ಣಿ,** ಲೇಖಕ, ರಾಜಕೀಯ ವಿಶ್ಲೇಷಕ

## 25 ವರ್ಷಗಳ ಹಿಂದೆ

ಶುಕ್ರವಾರ, 14-4-2000

**• ಮೋಸದಾಟ: ಸಿಬಿಐ ತನಿಖೆಗೆ ಪಟೌಡಿ, ಬೇಡಿ ಆಗ್ರಹ**

ನವದೆಹಲಿ, ಏ. 13 (ಪಿಟಿಐ)– ಹ್ಯಾನ್ಸಿ ಕ್ರೊನಿಯೆ ಅವರು ಪಾಲುಗೊಂಡಿರುವರು ಎನ್ನಲಾದ ಮೋಸದಾಟ ಪ್ರಕರಣದ ಸತ್ಯ ಬಹಿರಂಗಪಡಿಸಲು ಸಿಬಿಐ ತನಿಖೆ ನಡೆಸಬೇಕು ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕರಾದ ಮನ್ಸೂರ್ ಅಲಿ ಖಾನ್ ಪಟೌಡಿ ಹಾಗೂ ಬಿಷನ್ ಸಿಂಗ್ ಬೇಡಿ ಅವರು ಇಂದು ಇಲ್ಲಿ ಒತ್ತಾಯಿಸಿದ್ದಾರೆ.

ಭಾರತ ಕ್ರೀಡಾ ಪ್ರಾಧಿಕಾರದ ಕ್ರಿಕೆಟ್ ಅಕಾಡೆಮಿಯನ್ನು ಉದ್ಘಾಟಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಪಟೌಡಿ ಅವರು, 'ಬಾಜಿ, ಮೋಸದಾಟದಂಥ ವಿಷಯಗಳ ಕುರಿತು ಕ್ರಮ ಕೈಗೊಳ್ಳಲು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಸಂಪೂರ್ಣ ಅಧಿಕಾರವಿಲ್ಲ. ಭಾರತ ಕ್ರಿಕೆಟ್ ಮಂಡಳಿಯು ಈ ಪ್ರಕರಣವನ್ನು ನಿರ್ವಹಿಸಲು ಸಾಮರ್ಥ್ಯ ಹೊಂದಿಲ್ಲ ಅಥವಾ ನಿವೃತ್ತ ನ್ಯಾಯಾಧೀಶರ ಸ್ವತಂತ್ರ ತನಿಖೆಯಿಂದಲೂ ಸತ್ಯ ಹೊರಬರುವ ಸಾಧ್ಯತೆ ಕಡಿಮೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

**• ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ**

ಬೆಂಗಳೂರು, ಏ. 13– ಕೇಂದ್ರ ಸರ್ಕಾರದ ಬಜೆಟ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ಇಂದು ಇಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯು ಪ್ರತಿಭಟನಾ ರ‍್ಯಾಲಿ ಮತ್ತು ಮೆರವಣಿಗೆ ನಡೆಸಿತು.

ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಗುಲಾಂ ನಬಿ ಆಜಾದ್ ಅವರು, ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಸರ್ಕಾರದ ಬಜೆಟ್ ಜನವಿರೋಧಿ ಮತ್ತು ರೈತ ವಿರೋಧಿ ಧೋರಣೆ ತಳೆದಿದೆ ಎಂದು ಖಂಡಿಸಿದರು.

ರ‍್ಯಾಲಿ ನಂತರ ಕಾಂಗ್ರೆಸ್ ಮುಖಂಡರು ರಾಜಭವನಕ್ಕೆ ತೆರಳಿ ಅಗತ್ಯ ವಸ್ತುಗಳ ಬೆಲೆಯನ್ನು ಇಳಿಸಲು ಒತ್ತಾಯಿಸಿ, ರಾಜ್ಯಪಾಲರಾದ ವಿ.ಎಸ್.ರಮಾದೇವಿ ಅವರಿಗೆ ಮನವಿ ಅರ್ಪಿಸಿದರು.

## 50 ವರ್ಷಗಳ ಹಿಂದೆ

ಸೋಮವಾರ, 14-4-1975

**• ಮೊರಾರ್ಜಿ ಉಪವಾಸ ಅಂತ್ಯ ಜೂನ್‌ನಲ್ಲಿ ಗುಜರಾತ್ ಚುನಾವಣೆ**

ನವದೆಹಲಿ, ಏ. 13– ಗುಜರಾತ್ ವಿಧಾನಸಭೆಗೆ ಜೂನ್ 7ರಂದು ಅಥವಾ ಆ ಸುಮಾರಿಗೆ ಚುನಾವಣೆ ನಡೆಸುವುದಾಗಿ ಪ್ರಧಾನಿಯಿಂದ ಪತ್ರ ಬಂದ ನಂತರ ಇಂದು ಸಂಜೆ ಸಂಸ್ಥಾ ಕಾಂಗ್ರೆಸ್ ನಾಯಕ ಮೊರಾರ್ಜಿ ದೇಸಾಯಿ ತಮ್ಮ ನಿರಶನ ಅಂತ್ಯಗೊಳಿಸಿದರು.

ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು ನೀಡಿದ ನಿಂಬೆಹಣ್ಣಿನ ಪಾನಕ ಕುಡಿದು 79 ವರ್ಷದ ಮೊರಾರ್ಜಿ ಅವರು, ವಿರೋಧ ಪಕ್ಷದ ಮತ್ತು ಕಾಂಗ್ರೆಸ್ ನಾಯಕರ ಸಮ್ಮುಖದಲ್ಲಿ ನಿರಶನ ಮುರಿದರು.

ಚರಣ್ ಸಿಂಗ್, ಪಿಲೂ ಮೋದಿ, ಪಿ.ಕೆ. ದೇವ್, ಸಮರ್ ಗುಹಾ, ಬಿಜು ಪಟ್ನಾಯಕ್, ತ್ರಿದಿಬ್ ಚೌಧುರಿ, ನಿರೇನ್ ಘೋಷ್, ಮನುಭಾಯಿ ಪಟೇಲ್, ರಾಜನಾರಾಯಣ್, ಎಸ್.ಎನ್.ಮಿಶ್ರಾ, ಅಶೋಕ ಮೆಹ್ತಾ, ಮೋಹನ್ ಧಾರಿಯಾ, ಚಂದ್ರಶೇಖರ್, ಅಡ್ವಾಣಿ, ಕಾಮರಾಜ್ ಮುಂತಾದವರು ಈ ಸಮಯದಲ್ಲಿ ಹಾಜರಿದ್ದು, ಹರ್ಷ ವ್ಯಕ್ತಪಡಿಸಿದರು.

**• ಜಲವಿವಾದ ಇತ್ಯರ್ಥಕ್ಕೆ ಕಾಲಮಿತಿ ಅಸಾಧ್ಯ**

ನವದೆಹಲಿ, ಏ. 13– ಯಾವುದೇ ಅಂತರ ರಾಜ್ಯ ನದಿ ಜಲ ವಿವಾದವನ್ನು ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಲು 3 ವರ್ಷಗಳ ಕಾಲಮಿತಿ ಇರಬೇಕೆಂದೂ, ಆನಂತರ ಅದನ್ನು ನ್ಯಾಯಮಂಡಳಿಯೊಂದರಿಂದ ಕಡ್ಡಾಯ ಪಂಚಾಯ್ತಿಗಾಗಿ ಒಪ್ಪಿಸಬೇಕೆಂದೂ ಆಡಳಿತ ಸುಧಾರಣಾ ಆಯೋಗ ಮಾಡಿದ್ದ ಶಿಫಾರಸನ್ನು ಸರ್ಕಾರ ತಿರಸ್ಕರಿಸಿದೆ.

### ಬದಲಾವಣೆಗೆ ಹೊಂದಿಕೊಳ್ಳಲು ಸಂವಿಧಾನದಲ್ಲಿ ನೀಡಿರುವ ಆದ್ಯತೆ ಗಮನಾರ್ಹ

# ಇದು ವಿನಮ್ರ ಸ್ಮರಣೆಯ ಸಮಯ

ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

**ಭಾರತದ** ಸಂವಿಧಾನಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಜನ್ಮದಿನ ಏಪ್ರಿಲ್ 14. ಸ್ವಾತಂತ್ರ್ಯ ದೊರೆತ ನಂತರದ ವರ್ಷಗಳಲ್ಲಿ ಭಾರತವು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಾಧಿಸಿರುವ ಮುನ್ನಡೆಯನ್ನು ಕಂಡಾಗ, ಅಂಬೇಡ್ಕರ್ ಅವರಲ್ಲಿನ ಅಸಾಮಾನ್ಯ ದೂರದರ್ಶಿತ್ವದ ಬಗ್ಗೆ, ದೇಶದ ಏಕತೆ, ಸಂವಿಧಾನ ಮತ್ತು ಪ್ರಜಾತಾಂತ್ರಿಕ ಮೌಲ್ಯಗಳನ್ನು ಕಾಪಾಡಿಕೊಳ್ಳಲು ನಾಗರಿಕರು ನಡೆದುಕೊಳ್ಳಬೇಕಿರುವುದು ಹೇಗೆ ಎಂಬ ಕುರಿತು ಅವರು ನೀಡಿದ್ದ ಸಲಹೆಯ ಬಗ್ಗೆ ನಾವು ಅವಲೋಕನ ನಡೆಸಬೇಕು.

ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ 1949ರ ನವೆಂಬರ್ 25ರಂದು ಮಾಡಿದ ಅಂತಿಮ ಭಾಷಣದಲ್ಲಿ ಸಂವಿಧಾನದ ತಾತ್ವಿಕತೆಯನ್ನು ಹೇಳಿದರು. ಪ್ರಜಾತಂತ್ರ ರಾಷ್ಟ್ರದ ಗುರಿಗಳನ್ನು ತಲುಪಲು, ರಾಷ್ಟ್ರೀಯ ಏಕತೆಯನ್ನು ಸಾಧಿಸಲು ಮತ್ತು ಜನರ ಸರ್ವಾಂಗೀಣ ಮುನ್ನಡೆಗೆ ಅಗತ್ಯವಿರುವ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಾಧಿಸಲು ನಾಗರಿಕರು ಇರಿಸಬೇಕಿರುವ ಮಹತ್ವದ ಹೆಜ್ಜೆಗಳ ಬಗ್ಗೆ ಅವರು ಆ ಭಾಷಣದಲ್ಲಿ ಉಲ್ಲೇಖಿಸಿದರು.

ಅವರ ಸಲಹೆಗಳು ರಾಷ್ಟ್ರೀಯ ನೀತಿಗಳಲ್ಲಿ ಯಾವ ರೀತಿಯಲ್ಲಿ ಪ್ರವೇಶಿಸಿವೆ, ಬೇರೆ ಬೇರೆ ಕ್ಷೇತ್ರಗಳಲ್ಲಿ ಭಾರತದ ಪ್ರಗತಿಯನ್ನು ಹೇಗೆ ಸಾಧ್ಯವಾಗಿಸಿವೆ? ನಾವು ಇದರ ಬಗ್ಗೆ ಅವಲೋಕನ ನಡೆಸಬೇಕಿದೆ.

ರಾಜಕೀಯ ಪ್ರಜಾಸತ್ತೆಗೇ ನಾವು ತೃಪ್ತರಾಗಬಾರದು ಎಂದು ಅವರು ಹೇಳಿದ್ದರು. ರಾಜಕೀಯ ಪ್ರಜಾಸತ್ತೆಯನ್ನು ನಾವು ಸಾಮಾಜಿಕ ಪ್ರಜಾಸತ್ತೆಯನ್ನಾಗಿಯೂ ಪರಿವರ್ತಿಸಬೇಕು ಎಂದಿದ್ದರು. ಅದಾಗದಿದ್ದರೆ ರಾಜಕೀಯ ಪ್ರಜಾಸತ್ತೆ ಉಳಿಯುವುದಿಲ್ಲ. 'ಸಾಮಾಜಿಕ ಪ್ರಜಾಸತ್ತೆ ಅಂದರೆ ಏನು? ಇದು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಜೀವನದ ತತ್ವವನ್ನಾಗಿ ಗುರುತಿಸುವ ಜೀವನಕ್ರಮ... ಒಂದನ್ನು ಇನ್ನೊಂದರಿಂದ ಬೇರ್ಪಡಿಸುವುದು ಪ್ರಜಾತಂತ್ರದ ಉದ್ದೇಶವನ್ನೇ ಸೋಲಿಸಿದಂತೆ. ಸಮಾನತೆ ಇಲ್ಲದಿದ್ದರೆ ಸ್ವಾತಂತ್ರ್ಯವು ಕೆಲವರ ಮೇಲರಿಮೆಗೆ ಕಾಣವಾಗುತ್ತದೆ... ಭ್ರಾತೃತ್ವ ಇಲ್ಲದಿದ್ದರೆ, ಸ್ವಾತಂತ್ರ್ಯ ಮತ್ತು ಸಮಾನತೆಯು ಸಹಜವಾಗಿ ಬರುವುದಿಲ್ಲ' ಎಂದು ಅವರು ಹೇಳಿದ್ದರು.

ಈ ಆದರ್ಶಗಳನ್ನು ಮನಸ್ಸಿನಲ್ಲಿ ಇರಿಸಿಕೊಂಡು ಅಂಬೇಡ್ಕರ್ ಅವರು ಮೂಲಭೂತ ಹಕ್ಕುಗಳನ್ನು ಎಲ್ಲರಿಗೂ ಖಾತರಿಪಡಿಸಿದರು. ಅದರ ಜೊತೆಯಲ್ಲೇ, ಸರ್ಕಾರದ ನೀತಿಗೆ ಒಂದು ಕಿವಿಮಾತು ಹೇಳಿದರು. ಅದು: ಅಸ್ಪೃಶ್ಯತೆಯ ನಿಷೇಧ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ, ಇತರೆ ಹಿಂದುಳಿದ ವರ್ಗದವರಿಗೆ (ಒಬಿಸಿ) ಮೀಸಲಾತಿ ಸೌಲಭ್ಯ ಮತ್ತು ಸಾಮಾಜಿಕವಾಗಿ ಸಮಾನತೆಯನ್ನು ಬೆಳೆಸುವ ಇತರ ಹಲವು ಸಾಂವಿಧಾನಿಕ ಖಾತರಿಗಳು.

ಸಂವಿಧಾನವನ್ನು ದೇಶವು ಒಪ್ಪಿಕೊಂಡ ದಿನದಿಂದಲೂ ಸರ್ಕಾರಗಳು ಬಡತನ ನಿರ್ಮೂಲನೆಗೆ, ಎಲ್ಲರ ಜೀವನಮಟ್ಟ ಸುಧಾರಿಸಲು ದೊಡ್ಡ ಪ್ರಯತ್ನಗಳನ್ನು ನಡೆಸಿವೆ. ವಸತಿ, ಕುಡಿಯುವ ನೀರಿನ ಲಭ್ಯತೆ, ಉದ್ಯೋಗ, ಪ್ರಾಥಮಿಕ ಶಿಕ್ಷಣ, ಅಡುಗೆ ಅನಿಲ ಪೂರೈಕೆಯಂತಹ ಯೋಜನೆಗಳಿಗಾಗಿ ಸರ್ಕಾರಗಳು ರಾಷ್ಟ್ರವ್ಯಾಪಿಯಾಗಿ ಕ್ರಮಗಳನ್ನು ಕೈಗೊಂಡಿವೆ. ಅದರಲ್ಲೂ ಮುಖ್ಯವಾಗಿ, ಬಡ ವರ್ಗಗಳನ್ನು ಗುರಿಯಾಗಿಸಿಕೊಂಡು ಇಂತಹ ಕ್ರಮಗಳನ್ನು ಜಾರಿಗೆ ತರಲಾಗಿದೆ.

ಸಂವಿಧಾನ ರಚನಾ ಸಭೆಯು 1946ರ ಡಿಸೆಂಬರ್ 9ರಂದು ಮೊದಲು ಸಭೆ ಸೇರಿತು. ಅದು ಒಟ್ಟು 165 ದಿನ ಸಮಾಲೋಚಿಸಿ ಸಂವಿಧಾನ ರೂಪಿಸಿತು. ಈ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಕೀರ್ಣತೆಗಳನ್ನು ಗಮನದಲ್ಲಿ ಇರಿಸಿಕೊಂಡು, ಭಾರತೀಯ ಸಂವಿಧಾನವು ಆರಂಭದಲ್ಲಿ 395 ವಿಧಿಗಳನ್ನು, 8 ಪರಿಚ್ಛೇದಗಳನ್ನು ಹೊಂದಿತ್ತು. ಬೇರೆ ದೇಶಗಳ ಸಂವಿಧಾನಗಳು ಇದಕ್ಕೆ ಹೋಲಿಸಿದರೆ ಕಿರಿದಾಗಿವೆ. ಅಮೆರಿಕದ ಸಂವಿಧಾನವು ಏಳು ವಿಧಿಗಳನ್ನಷ್ಟೇ ಹೊಂದಿದೆ. ಅವುಗಳಲ್ಲಿ ಮೊದಲ ನಾಲ್ಕು ವಿಧಿಗಳನ್ನು 21 ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಕೆನಡಾ ಸಂವಿಧಾನ ಅಂಗೀಕಾರ ಆದಾಗ ಅದು 147 ವಿಧಿಗಳನ್ನು, ದಕ್ಷಿಣ ಆಫ್ರಿಕಾ ಸಂವಿಧಾನ 153 ವಿಧಿಗಳನ್ನು ಮತ್ತು ಆಸ್ಟ್ರೇಲಿಯಾದ ಸಂವಿಧಾನ 128 ವಿಧಿಗಳನ್ನು ಹೊಂದಿದ್ದವು. ಈ ಬಗ್ಗೆ ಅರಿವಿದ್ದವರು ಭಾರತದ ಸಂವಿಧಾನವು ಅನಗತ್ಯ ಎನ್ನುವಷ್ಟು ದೀರ್ಘವಾಗಿದೆ ಎಂದು ದೂರಿದ್ದರು.

ಬೇರೆ ಬೇರೆ ವಲಯಗಳಿಂದ ಇಂತಹ ಟೀಕೆಗಳು ಬಂದಿವೆ. ಅದರಲ್ಲೂ ಮುಖ್ಯವಾಗಿ ಪಾಶ್ಚಿಮಾತ್ಯ ವಿದ್ವಾಂಸರು ಹಾಗೂ ಅವರಿಂದ ಪ್ರಭಾವಿತರಾದವರು ಹೀಗೆ ಹೇಳಿದ್ದಾರೆ. ದೇಶದ ಸಾಮಾನ್ಯ ಪ್ರಜೆಗಳು ಇದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದಿದ್ದಿದೆ. ಟೀಕಾಕಾರರೊಬ್ಬರು, ಭಾರತದ ಸಂವಿಧಾನದಲ್ಲಿ 1.46 ಲಕ್ಷ ಪದಗಳು ಇವೆ ಎಂದೂ ಅದು ಬಹಳ ಸಂಕೀರ್ಣವಾಗಿದೆ ಎಂದೂ ಅಮೆರಿಕದ ಸಂವಿಧಾನದಲ್ಲಿ 4,543 ಪದಗಳಷ್ಟೇ ಇವೆ ಎಂದೂ ಹೇಳಿದ್ದಿದೆ.

ಭಾರತದ ಸಂವಿಧಾನವು 106 ಬಾರಿ ತಿದ್ದುಪಡಿಗಳನ್ನು ಕಂಡಿದೆ ಎಂದು ಟೀಕಾಕಾರರು ಹಾಸ್ಯ ಮಾಡಿರುವುದೂ ಇದೆ. ಆದರೆ ಸ್ವಾತಂತ್ರ್ಯಾನಂತರದ 78 ವರ್ಷಗಳನ್ನು ಅವಲೋಕಿಸಿದಾಗ ಈ ಟೀಕೆಗಳನ್ನು ತಳ್ಳಿಹಾಕಬೇಕು ಎಂಬುದು ಗೊತ್ತಾಗುತ್ತದೆ.




ಭಾರತವು ವಿಶ್ವದಲ್ಲೇ ಅತ್ಯಂತ ಹೆಚ್ಚು ಶಕ್ತಿಶಾಲಿಯಾದ ಹಾಗೂ ಅತ್ಯಂತ ಹೆಚ್ಚು ವೈವಿಧ್ಯಮಯ ಸಮಾಜವನ್ನು ಹೊಂದಿರುವ ಪ್ರಜಾತಂತ್ರ. ದೇಶದ ಬಹುಸಂಖ್ಯಾತ ಹಿಂದೂಗಳಲ್ಲಿ ಸರಿಸುಮಾರು ಆರು ಸಾವಿರ ಜಾತಿಗಳಿವೆ (ಈ ಜಾತಿಗಳಲ್ಲಿ ಅಂದಾಜು 3,500 ಜಾತಿಗಳು ಒಬಿಸಿ ಸಮುದಾಯಕ್ಕೆ ಸೇರಿದವು). ಜಾತಿ ವ್ಯವಸ್ಥೆಯು ಇಸ್ಲಾಂ, ಕ್ರೈಸ್ತ ಮತ್ತು ಇತರ ಧರ್ಮಗಳಿಗೂ ಹರಡಿದೆ. ಭಾರತೀಯರು 122 ಭಾಷೆಗಳನ್ನು, 270 ಉಪಭಾಷೆಗಳನ್ನು ಮಾತನಾಡುತ್ತಾರೆ. ಜಗತ್ತಿನ ಬಹುತೇಕ ಎಲ್ಲ ಧರ್ಮಗಳೂ ಭಾರತದಲ್ಲಿವೆ. ದೇಶದಲ್ಲಿ ಉತ್ತರದ ತುದಿಯಿಂದ ದಕ್ಷಿಣದ ತುದಿಯವರೆಗೆ, ಪಶ್ಚಿಮದ ತುದಿಯಿಂದ ಪೂರ್ವದ ತುದಿಯವರೆಗೆ ಹಲವು ಲಕ್ಷಣಗಳನ್ನು ಹೊಂದಿರುವ ಜನರಿದ್ದಾರೆ, ಹಲವು ಜನಾಂಗಗಳಿಗೆ ಸೇರಿದ ಜನರಿದ್ದಾರೆ. ಹೀಗಿದ್ದರೂ ಇದು ಒಂದಾಗಿ ನಿಂತಿರುವ ದೇಶ. ಈ ವೈವಿಧ್ಯಮಯ ಸಮಾಜವನ್ನು ಒಂದಾಗಿಸುವುದು ಅಂಬೇಡ್ಕರ್ ಅವರ ಪ್ರಯತ್ನವಾಗಿತ್ತು. ಸಂವಿಧಾನಕ್ಕೆ ತಿದ್ದುಪಡಿ ತರಲು ತೀರಾ ಸಂಕೀರ್ಣವಲ್ಲದ ಮಾರ್ಗವನ್ನು ಹಾಕಿಕೊಟ್ಟ ಅಂಬೇಡ್ಕರ್ ಅವರು, ಸ್ವಾತಂತ್ರ್ಯಾನಂತರದ ಮೂರು ತಲೆಮಾರಿನ ಜನರಿಗೆ ಸಂವಿಧಾನಕ್ಕೆ ತಿದ್ದುಪಡಿ ತರಲು ಅವಕಾಶ ಮಾಡಿಕೊಟ್ಟಿದ್ದಾರೆ. ಆ ಮೂಲಕ ಅವರು, ಆಧುನಿಕ ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಸಂವಿಧಾನವು ಇರುವಂತೆ ಮಾಡಲು ನೆರವಾಗಿದ್ದಾರೆ.

ಬದಲಾವಣೆಗೆ ಸ್ಪಂದಿಸದೆ ಇರುವುದಕ್ಕಿಂತಲೂ ಹೆಚ್ಚಿನ ಆದ್ಯತೆಯನ್ನು ಅಂಬೇಡ್ಕರ್ ಅವರು ಬದಲಾವಣೆಗಳಿಗೆ ಹೊಂದಿಕೊಳ್ಳುವುದಕ್ಕೆ ನೀಡಿದ್ದಾರೆ. ಇದು ಈ ದೇಶವನ್ನು ಒಂದಾಗಿ ಇರಿಸಿದೆ. ಹೀಗೆ ಮಾಡುವಾಗ ಅಂಬೇಡ್ಕರ್ ಅವರು, ಅಮೆರಿಕದ ಪಿತಾಮಹರ ಪೈಕಿ ಒಬ್ಬರು ಎಂಬ ಹೆಗ್ಗಳಿಕೆ ಹೊಂದಿರುವ ಥಾಮಸ್ ಜೆಫರ್ಸನ್ ಅವರ ಅಭಿಪ್ರಾಯದಿಂದ ಪ್ರಭಾವಿತರಾಗಿದ್ದರು.

ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳು ತಾವು ಸಾಧಿಸಿ ತೋರಿಸಿದ್ದಕ್ಕೆ ಅತ್ಯಂತ ಹೆಚ್ಚಿನ ಮಟ್ಟದ ಪ್ರಶಂಸೆಗೆ ಅರ್ಹರಾಗಿರುತ್ತಾರೆ. ಮುಂದಿನ ದಿನಗಳನ್ನು ನೋಡುವ ಸಾಮರ್ಥ್ಯ, ಆ ಮುಂಗಾಣ್ಕೆಯು ನಮ್ಮ ಸಂವಿಧಾನದ ನೆಲಗಟ್ಟಿನಂತೆ ಇದೆ. ಇದು 1947ರಲ್ಲಿದ್ದ 35 ಕೋಟಿ ಭಾರತೀಯರಿಗೆ (ಈಗಿನ 145 ಕೋಟಿ ಭಾರತೀಯರಿಗೆ) ಒಂದಾಗಿ ಇರಲು ನೆರವಾಗಿದೆ. ಅವರಿಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕೋಲೆಗಳನ್ನು ಕಳಚಿಕೊಳ್ಳುವತ್ತ ಸದ್ದುಗದ್ದಲವಿಲ್ಲದೆ ಸಾಗಲು ನೆರವಾಗುತ್ತಿದೆ.

ಹೀಗಾಗಿ, ನಾವು ನಮ್ಮ ಸಂವಿಧಾನವನ್ನು ಹಾಗೂ ಸಂವಿಧಾನದಲ್ಲಿ ಹೇಳಿರುವ ವಿಧಾನಗಳನ್ನು ಟೀಕಿಸುವವರನ್ನು ಖಂಡಿಸಬೇಕು. ಅಂಥವರಿಗೆ, 'ನಿಮ್ಮ ಕೆಲಸ ನೋಡಿಕೊಂಡಿರಿ' ಎಂದು ಹೇಳಬೇಕು. ಏಕೆಂದರೆ, ನಮ್ಮ ಸಂವಿಧಾನವನ್ನು ರೂಪಿಸಿದವರಿಗೆ ತಮ್ಮ ಹೊಣೆ ಏನು ಎಂಬುದು ಗೊತ್ತಿತ್ತು. ಅವರು ನಮಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಉದ್ದೀಪಿಸುವ ಹಾಗೂ ಎಲ್ಲವುಗಳಿಗಿಂತ ಮಿಗಿಲಾಗಿ ರಾಷ್ಟ್ರೀಯ ಏಕತೆಯನ್ನು ಬೆಳೆಸುವ ಸಂವಿಧಾನವನ್ನು ನೀಡಿದ್ದಾರೆ.

## ಚುರುಮುರಿ

### ಬೆಕ್ಕಣ್ಣನ ಸಂದರ್ಶನ

• ಸುಮಂಗಲಾ

**ಟಿ.ವಿ.** ವಾಹಿನಿಯವರೊಬ್ಬರು ಬೆಕ್ಕಣ್ಣನ ಸಂದರ್ಶನ ಮಾಡುವುದಾಗಿ ಹೇಳಿದ್ದರು. ಬೆಕ್ಕಣ್ಣ ಖುಷಿಯಿಂದ 'ನನಗೆ ಒಂದು ಸೂಟ್ ಹೊಲೆಸಿಕೊಡು, ಟಿ.ವಿಯೊಳಗೆ ಛಂದ ಕಾಣಬಕು' ಎಂದು ವರಾತ ಹಚ್ಚಿತು. 'ಅವರು ಸಂದರ್ಶನ ಮಾಡತಾರೆ... ಪ್ರಿವೆಡ್ಡಿಂಗ್ ಶೂಟ್ ಮಾಡಾಕೆಹತ್ತಿಲ್ಲ! ನಿನಗೆ ಸೂಟ್ ಎದಕ್ಕೆ? ಅಗದಿ ಇನ್‌ಫಾರ್ಮಲ್ ಆಗಿರಬಕು' ಎಂದು ಬೈಯ್ದೆ.

'ಯಾರೂ ನಿನ್ ಸಂದರ್ಶನ ಮಾಡಲ್ಲ ಅಂತ ನಿನಗೆ ಹೊಟ್ಟೆಕಿಚ್ಚು. ಒಂದೊಳ್ಳೆ ಕೋಟಾದ್ರೂ ಕೊಡಿಸು' ಎಂದು ಬೇಡಿತು. ಕೋಟ್ ಹಾಕಿಕೊಂಡು ಭಲೇ ಜಬರ್ಾಗಿ ಸಂದರ್ಶನಕ್ಕೆ ಕೂತಿತು.

'ನಮಸ್ಕಾರ್ರೀ ಬೆಕ್ಕಣ್ಣನವರ್. ಮತ್ತ ಪ್ರಾಣಿಗಳಿಗೆ, ಮನುಷ್ಯಾರಿಗೆ ಏನು ವ್ಯತ್ಯಾಸ ಅದರೀ?' ಸಂದರ್ಶಕಿ ಕೇಳಿದಳು.

'ನಾವು ನಿಮ್ಮಂಗೆ ಮೂರು– ನಾಕು ತಲೆಮಾರಿಗೆ ಆಸ್ತಿ ಮಾಡಿಡಂಗಿಲ್ಲ. ಭ್ರಷ್ಟಾಚಾರ, ಕೊಲೆ, ಸುಲಗಿ ಇಂಥಾವೆಲ್ಲ ಮಾಡಂಗಿಲ್ಲ'.

'ಮನುಷ್ಯಾರ ಮ್ಯಾಲೆ ಅಟ್ಯಾಕ್ ಮಾಡೂದು, ಬೆಳಿ ಹಾಳಮಾಡೂದೆಲ್ಲ ಕ್ರೂರ ಅಲ್ಲೇನು?'

'ಪಶುಸ್ವಭಾವ ಅನ್ನೂದು ನಿಮ್ಮ ವ್ಯಾಖ್ಯಾನ, ಆದರ ಅದು ನಿಸರ್ಗಸಹಜರೀ. ನಮ್ಮ ಕಾಡು ನಮಗೆ ಬಿಟ್ಟರೆ, ನಮ್ಮಷ್ಟಕ್ಕೆ ನಾವಿರತೀವಿ. ಮನುಷ್ಯರ ಕ್ರೂರ ಸ್ವಭಾವವನ್ನು ಪಶುಸ್ವಭಾವ ಅನ್ನಬ್ಯಾಡರಿ' ಬೆಕ್ಕಣ್ಣ ಗುರುಗುಟ್ಟಿತು.

'ನಿಮ್ಮ ಪ್ರಾಣಿ ಸಾಮ್ರಾಜ್ಯದೊಳಗೂ ಅತ್ಯಾಚಾರ ಹಿಂಥಾವು ನಡೀತಾವೇನು?'

'ಅವೆಲ್ಲ ಮನುಷ್ಯ ಸಾಮ್ರಾಜ್ಯದೊಳಗೆ ಮಾತ್ರ! ಗಂಡುಪ್ರಾಣಿಗಳು ನಿಸರ್ಗಸಹಜ ಸ್ವಭಾವ ಬಿಟ್ಟರೆ, ಹೆಣ್ಣುಪ್ರಾಣಿಗಳ ಜೊತೆ ವಿಕೃತವಾಗಿ ನಡಕೊಳಂಗಿಲ್ಲ'.

'ಸ್ವಾತಂತ್ರ್ಯದ ಅಮೃತ ಮಹೋತ್ಸವ ಮುಗಿದರೂ ಹೆಣ್ಮಕ್ಕಳು ನಡುರಾತ್ರಿ ನಿರ್ಭಯವಾಗಿ ಓಡಾಡೂ ಹಂಗಿಲ್ಲ. ನೀವೇನಂತೀರಿ?'

'ಸ್ವಾತಂತ್ರ್ಯ ಬಂದಿದ್ದು ದೇಶಕ್ಕೆ. ದೇಶ ಅಂದರೆ ಹೆಣ್ಮಕ್ಕಳು ಅಲ್ಲ, ಬರೇ ಗಂಡ್‌ಮಕ್ಕಳು! ಸಂಜಿಯಾತು, ನೀ ಲಗೂನೆ ಮನಿ ಸೇರವ್ವಾ, ಬಾರ್, ಪಬ್ ಅಂತೆಲ್ಲ ಅಲೀಬ್ಯಾಡ. ಹೆಣ್ಮಕ್ಕಳು ಸ್ವತಃ ರಿಸ್ಕಿನೊಳಗೆ ಸಿಕ್ಕೋಬಾರದು'.

ಬೆಕ್ಕಣ್ಣ ಯುವ ಸಂದರ್ಶಕಿಗೆ ಬುದ್ಧಿವಾದ ಹೇಳಿ ಮನೆಗೆ ಕಳಿಸಿತು!

## ಸಂಗತ

# ಬಾಲಕರಿಗೆ ಬೇಕಾಗಿದೆ ಸಹಾಯಹಸ್ತ

### ಪರೀಕ್ಷಾ ಫಲಿತಾಂಶಗಳಲ್ಲಿ ಬಾಲಕರಿಗಿಂತ ಬಾಲಕಿಯರೇ ಮೇಲುಗೈ ಸಾಧಿಸುವುದೇಕೆ?

• ಎಚ್.ಬಿ.ಚಂದ್ರಶೇಖರ್

**ಈ ಬಾರಿಯ** ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶದಲ್ಲಿ ಬಾಲಕಿಯರಲ್ಲಿ ಶೇ 77.88ರಷ್ಟು ಮಂದಿ ಹಾಗೂ ಬಾಲಕರಲ್ಲಿ ಶೇ 68.22ರಷ್ಟು ಮಂದಿ ಪಾಸಾಗಿದ್ದಾರೆ. ಬಾಲಕಿಯರು ಬಾಲಕರಿಗಿಂತ ಶೇ 9.66ರಷ್ಟು ಹೆಚ್ಚಿನ ಸಾಧನೆ ಮಾಡಿರುವುದು ಗಮನಾರ್ಹ. 2024, 2023 ಮತ್ತು 2022ನೇ ಸಾಲಿನ ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ಬಾಲಕಿಯರು ಬಾಲಕರಿಗಿಂತ ಕ್ರಮವಾಗಿ ಶೇ 15.21, ಶೇ 6.99 ಮತ್ತು ಶೇ 9.36ರಷ್ಟು ಹೆಚ್ಚಿನ ಸಾಧನೆ ಮಾಡಿದ್ದರು. ಇದೇ ರೀತಿ ಸಿಬಿಎಸ್‌ಇಯ 10 ಮತ್ತು 12ನೇ ತರಗತಿಯ ಪರೀಕ್ಷೆ ಸೇರಿದಂತೆ ವಿವಿಧ ಶೈಕ್ಷಣಿಕ ಪರೀಕ್ಷೆಗಳಲ್ಲಿಯೂ ಬಾಲಕಿಯರೇ ಬಾಲಕರಿಗಿಂತ ಉತ್ತಮ ಸಾಧನೆ ತೋರುತ್ತಿರುವುದನ್ನು ಪ್ರತಿವರ್ಷದ ಫಲಿತಾಂಶದಲ್ಲಿ ನಾವು ಗಮನಿಸುತ್ತಿದ್ದೇವೆ.

ಹಾಗಿದ್ದರೆ, ಬಾಲಕಿಯರು ಬಾಲಕರಿಗಿಂತ ಜಾಣರಾಗಿರುತ್ತಾರೆಯೇ ಅಥವಾ ಇನ್ಯಾವ ಅಂಶಗಳು ಬಾಲಕಿಯರ ಸಾಧನೆಗೆ ಕಾರಣವಾಗುತ್ತಿವೆ? ಇದನ್ನು ಕಂಡುಕೊಂಡಲ್ಲಿ, ಬಾಲಕರ ಫಲಿತಾಂಶ ಸುಧಾರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ.

ಈ ಕುರಿತು, 2023ರಲ್ಲಿ ಸಿಬಿಎಸ್‌ಇ ಪರೀಕ್ಷಾ ಫಲಿತಾಂಶದ ಬಿಡುಗಡೆಯ ಸಂದರ್ಭದಲ್ಲಿ ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಾನ್ಯಂ ಭಾರದ್ವಾಜ್ ಅವರು ನೀಡಿದ್ದ ಪ್ರತಿಕ್ರಿಯೆ ಗಮನಾರ್ಹವಾಗಿದೆ. 'ಬಾಲಕಿಯರಿಗೆ ತಮ್ಮ ಮನೆಯಲ್ಲಿ ನಿರ್ವಹಿಸಲು ಅನೇಕ ಜವಾಬ್ದಾರಿಗಳಿರುತ್ತವೆ. ಅವರಿಗೆ ಉಳಿಯುವ ಕಡಿಮೆ ಸಮಯವನ್ನು ಪ್ರಜ್ಞಾಪೂರ್ವಕವಾಗಿ ಜಾಣತನದಿಂದ ಬಳಸಿಕೊಂಡು ಅವರು ಪರೀಕ್ಷೆಯಲ್ಲಿ ಯಶಸ್ಸು ಸಾಧಿಸುತ್ತಾರೆ' ಎಂದು ಅವರು ವಿಶ್ಲೇಷಿಸಿದ್ದರು.

ನಮ್ಮ ಶಾಲೆ, ಕುಟುಂಬ ಹಾಗೂ ಸುತ್ತಮುತ್ತಲ ಸನ್ನಿವೇಶಗಳಲ್ಲಿ ಬಾಲಕಿಯರನ್ನು ಸುಮ್ಮನೆ ಗಮನಿಸಿ ನೋಡಿ. ಅವರಲ್ಲಿ ತಮ್ಮ ಗುರಿಯ ಬಗ್ಗೆ ಸ್ಪಷ್ಟತೆ, ಶಿಸ್ತು, ಪರಿಣಾಮಕಾರಿ ಅಧ್ಯಯನ ಕ್ರಮ, ಕಲಿಕೆಯಲ್ಲಿ ಉತ್ತಮವಾಗಿ ತೊಡಗಿಸಿಕೊಳ್ಳುವ ವಿಧಾನ, ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಮನೋಭಾವವನ್ನು ಗುರುತಿಸಬಹುದು. ಆದರೆ ಒಂದಷ್ಟು ಸಂಖ್ಯೆಯ ಬಾಲಕರನ್ನು ಹೊರತುಪಡಿಸಿದರೆ ಹೆಚ್ಚಿನವರಲ್ಲಿ ಅನ್ಯಮನಸ್ಕತೆ, ಅಶಿಸ್ತು, ಓದನ್ನು ಗಂಭೀರವಾಗಿ ಪರಿಗಣಿಸದಿರುವುದು, ವಿಷಯಗಳನ್ನು ಲಘುವಾಗಿ ತೆಗೆದುಕೊಳ್ಳುವಂತಹ ಗುಣಗಳನ್ನು ಕಾಣಬಹುದು. ಅಮೆರಿಕ, ಇಂಗ್ಲೆಂಡ್, ಕೆನಡಾದಂತಹ ದೇಶಗಳಲ್ಲಿ ಸಹ ಬಾಲಕಿಯರ ಸಾಧನೆ ಬಾಲಕರ ಸಾಧನೆಗಿಂತ ಉತ್ತಮವಾಗಿದೆ. ಬುದ್ಧಿಶಕ್ತಿಯ ವಿಷಯದಲ್ಲಿ ಬಾಲಕ, ಬಾಲಕಿಯರ ನಡುವೆ ಹೆಚ್ಚಿನ ವ್ಯತ್ಯಾಸಗಳು ಇಲ್ಲದಿದ್ದಾಗ್ಯೂ ಬಾಲಕಿಯರ ಸಾಧನೆ ಉತ್ತಮವಾಗಿರಲು ಕಾರಣವೇನು ಎಂಬ ಬಗ್ಗೆ ಜಾಗತಿಕವಾಗಿಯೂ ಪ್ರಶ್ನೆಗಳು ಇದ್ದಂತಿವೆ. ಶೈಕ್ಷಣಿಕ ಸಾಧನೆಗೆ ಬುದ್ಧಿಶಕ್ತಿಯ ಜೊತೆ ಪರಿಶ್ರಮದಿಂದ ಓದಿನಲ್ಲಿ ತೊಡಗಿಸಿಕೊಳ್ಳುವುದು ಸಹಾಯಕ.

ತರಗತಿಯಲ್ಲಿ ಶಿಕ್ಷಕರ ಬೋಧನೆಯನ್ನು ಬಾಲಕಿಯರು ಬಾಲಕರಿಗಿಂತ ಹೆಚ್ಚಿನ ಮಟ್ಟದಲ್ಲಿ ಗಮನವಿಟ್ಟು ಆಲಿಸುತ್ತಾರೆ, ಪಾಠಗಳ ಬಗ್ಗೆ ಟಿಪ್ಪಣಿಯನ್ನು ಮಾಡಿಕೊಳ್ಳುತ್ತಾರೆ, ಮನೆಯಲ್ಲಿ ಅಧ್ಯಯನಕ್ಕಾಗಿ ಸಮಯ ವಿನಿಯೋಗಿಸುತ್ತಾರೆ. ಸಾಮಾನ್ಯವಾಗಿ ಪೋಷಕರು ಬಾಲಕಿಯರಿಂದ ಶಿಸ್ತನ್ನು ಸಹಜವೆಂಬಂತೆ ನಿರೀಕ್ಷಿಸುತ್ತಾರೆ. ಪೋಷಕರ ಈ ನಂಬಿಕೆಯನ್ನು ಬಾಲಕಿಯರು ಪೂರೈಸುವ ಜೊತೆ ಜೊತೆಗೆ ಶೈಕ್ಷಣಿಕ ಶಿಸ್ತನ್ನು ಸಹ ಬಾಲಕರಿಗಿಂತ ಒಂದಷ್ಟು ಉತ್ತಮವಾಗಿಯೇ ಮೈಗೂಡಿಸಿಕೊಳ್ಳುತ್ತಾರೆ ಎನಿಸುತ್ತದೆ. ಈ ಕುರಿತು ತಜ್ಞರಿಂದ ಅಧ್ಯಯನಗಳನ್ನು ಕೈಗೊಂಡು, ಬಾಲಕರ ಕಲಿಕೆ, ತೊಡಗಿಸಿಕೊಳ್ಳುವಿಕೆ ಮತ್ತು ಸಾಧನೆಯನ್ನು ಉತ್ತಮಗೊಳಿಸುವ ದಿಸೆಯಲ್ಲಿ ಅವರಿಗೆ ಸಹಾಯ, ಸೂಕ್ತ ಮಾರ್ಗದರ್ಶನ, ಬೆಂಬಲ ಒದಗಿಸುವ ಅವಶ್ಯಕತೆ ಇದೆ.

ಕಾಲೇಜು ಶಿಕ್ಷಣದಲ್ಲಿ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳ ಅಧ್ಯಯನ ಕ್ರಮಗಳಲ್ಲಿ ಯಾವ ರೀತಿಯ ವ್ಯತ್ಯಾಸಗಳಿವೆ ಎಂಬ ಬಗ್ಗೆ 2017ರಲ್ಲಿ ಸಂಶೋಧನಾ ಅಧ್ಯಯನವೊಂದನ್ನು ಕೈಗೊಳ್ಳಲಾಗಿತ್ತು. ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಉತ್ತಮ ಹಾಗೂ ಪರಿಣಾಮಕಾರಿ ಅಧ್ಯಯನ ಕ್ರಮಗಳನ್ನು ಅನುಸರಿಸುತ್ತಿದ್ದುದನ್ನು ಈ ಅಧ್ಯಯನವು ಗುರುತಿಸಿದೆ. ಗಂಡುಮಕ್ಕಳಿಗೆ ಹೋಲಿಸಿದಲ್ಲಿ ಹೆಣ್ಣುಮಕ್ಕಳಲ್ಲಿ ಉತ್ತಮ ಸ್ವಯಂ ಶಿಸ್ತಿನ ಗುಣವಿದ್ದು, ಅಧ್ಯಯನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದೂ ಅಲ್ಲದೆ ಅಧ್ಯಯನದಲ್ಲಿ ಗಮನವಿಟ್ಟು ತೊಡಗಿಸಿಕೊಳ್ಳುತ್ತಾರೆ ಎನ್ನಲಾಗಿದೆ.

ನಾಲ್ಕೈದು ವಿದ್ಯಾರ್ಥಿಗಳು ಒಟ್ಟಿಗೆ ಸೇರಿ ತಂಡಸ್ಫೂರ್ತಿಯಿಂದ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿ ಅಧಿಕವಾಗಿರುವುದನ್ನು ಕೆಲವು ಸಮೀಕ್ಷೆಗಳು ಗುರುತಿಸಿವೆ. ಆರ್ಗನೈಜೇಷನ್ ಫಾರ್ ಎಕನಾಮಿಕ್ ಕೋಆಪರೇಷನ್ ಆ್ಯಂಡ್ ಡೆವಲಪ್‌ಮೆಂಟ್ ಸಂಸ್ಥೆಯು ನಡೆಸುವ ಪ್ರೋಗ್ರ್ಯಾಂ ಫಾರ್ ಇಂಟರ್‌ನ್ಯಾಷನಲ್ ಸ್ಟೂಡೆಂಟ್ ಅಸೆಸ್‌ಮೆಂಟ್ ಸಮೀಕ್ಷೆಯಲ್ಲಿ ಈ ಅಂಶ ನಮೂದಾಗಿದೆ. ಇದರ ಪ್ರಕಾರ, ಹಲವರು ಜತೆಗೂಡಿ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯದಲ್ಲಿ ಬಾಲಕಿಯರು ಬಾಲಕರಿಗಿಂತ 29 ಅಂಶಗಳಷ್ಟು ಮುಂದಿದ್ದಾರೆ.

ಬಾಲಕಿಯರಲ್ಲಿ ಇರುವ ಅಧ್ಯಯನಶೀಲತೆ, ಪರಿಶ್ರಮದ ಮನೋಭಾವ, ಗಮನವಿಟ್ಟು ಆಲಿಸುವುದು ಮತ್ತು ಕಲಿಯುವುದು, ಹಲವರು ಜತೆಗೂಡಿ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯದಂತಹ ಗುಣಗಳನ್ನು ಹೆಚ್ಚಿನ ಸಂಖ್ಯೆಯ ಬಾಲಕರೂ ಕರಗತ ಮಾಡಿಕೊಳ್ಳಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚಿಂತನ, ಮಂಥನ ನಡೆಯಬೇಕಿದೆ. ಆ ಮೂಲಕ ಬಾಲಕರೆಡೆ ಸಹಾಯಹಸ್ತ ಚಾಚಲು ಮುಂದಡಿ ಇಡಬೇಕಾದ ಜರೂರಿದೆ.

## ವಾಚಕರ ವಾಣಿ

### ಯಾರು ಕಡಿಮೆ ಅಪಾಯಕಾರಿ?!

ಕಸ ವಿಲೇವಾರಿ ವಾಹನ ವೆಚ್ಚವನ್ನು ಮನೆ ಕಂದಾಯದ ಜೊತೆ ಸದ್ದಿಲ್ಲದೆ ಸಂಗ್ರಹಿಸಲು ಮುಂದಾಗಿರುವ ಸರ್ಕಾರ, ಜನರ ಬದುಕನ್ನು ಇನ್ನಷ್ಟು ಭಾರವಾಗಿಸಲು ಹೊರಟಿದೆ. ಹಿಂದಿನ ವರ್ಷಗಳಲ್ಲಿ ಆಸ್ತಿ ತೆರಿಗೆ, ಆರೋಗ್ಯ ಉಪಕರ, ಭಿಕ್ಷುಕರ ಉಪಕರ, ನೀರಿನ ಕರ, ಗ್ರಂಥಾಲಯ ಉಪಕರ, ಸಾರಿಗೆ ವಾಹನ ಉಪಕರದ ಹೆಸರಿನಲ್ಲಿ ಕರ ವಸೂಲಿ ಮಾಡಲಾಗುತ್ತಿತ್ತು. ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ, ರಾಜ್ಯ ಸರ್ಕಾರದ ಮೇಲೆ ಕೇಂದ್ರ ಸರ್ಕಾರ ಆರೋಪ, ಪ್ರತ್ಯಾರೋಪಗಳನ್ನು ಮಾಡುತ್ತಾ, ಎರಡೂ ಸರ್ಕಾರಗಳು ದೇಶದ ಜನರನ್ನು ಸುಲಿಗೆ ಮಾಡುತ್ತಿರುವುದಂತೂ ಖಚಿತ. ಆಡಳಿತ ನಡೆಸುತ್ತಿರುವವರು ದಿನನಿತ್ಯ ನೀಡುತ್ತಿರುವ ಅಸಹ್ಯಕರ ಹೇಳಿಕೆಗಳು, ಪರಸ್ಪರ ಭ್ರಷ್ಟಾಚಾರದ ಆರೋಪಗಳನ್ನು ಜನಸಾಮಾನ್ಯರು ಸಹಿಸುವುದು ಅನಿವಾರ್ಯವೇನೋ ಎಂಬಂತೆ ಆಗಿರುವುದು ವಿಪರ್ಯಾಸ. ಇವರಲ್ಲಿ ಯಾರು ಕಡಿಮೆ ಅಪಾಯಕಾರಿಗಳು ಎಂಬುದಷ್ಟೇ ಈಗ ಉಳಿದಿರುವ ಪ್ರಶ್ನೆ.

**ಎಂ.ಜಿ.ರಂಗಸ್ವಾಮಿ,** ಹಿರಿಯೂರು

### ಟ್ರಂಪ್ ಸುಂಕ: ತಿಳಿಯಬೇಕಿದೆ ಅಸಲಿ ಚಿತ್ರಣ

'ಟ್ರಂಪ್ ಟ್ಯಾರಿಫ್' ಎಂಬುದು ಈಗ ಒಂದು ತೂಗುಗತ್ತಿಯಂತೆ ಆಗಿಬಿಟ್ಟಿದೆ. ಕೆಲವು ಮಾಧ್ಯಮಗಳೂ ಊಹಾಪೋಹ ಸೃಷ್ಟಿಸಿ ಜನರನ್ನು ಆತಂಕಕ್ಕೆ ಈಡುಮಾಡುತ್ತಿವೆ. ಪ್ರತಿಸುಂಕಗಳ ಸೂತ್ರ ಸರಿಯಾದ ಆಧಾರವನ್ನೇ ಹೊಂದಿಲ್ಲ. ವ್ಯಾಪಾರದ ಕೊರತೆಗೆ (ಟ್ರೇಡ್ ಡೆಫಿಸಿಟ್) ವಿವಿಧ ಕಾರಣಗಳು ಇರುತ್ತವೆ. ಉತ್ಪನ್ನವೊಂದು ಒಂದು ದೇಶವನ್ನು ತಲುಪಿದ ಮೇಲೆ ಬೇರೆಡೆಗೆ ಹೋಗುವ ಸಾಧ್ಯತೆ ಕೂಡ ಇರುತ್ತದೆ. 'ಹೊರಗಿನಿಂದ ವಸ್ತುಗಳು ಭಾರಿ ತೆರಿಗೆಗಳೊಂದಿಗೆ ಅಮೆರಿಕಕ್ಕೆ ಬರುತ್ತಿವೆ. ಅದರ ಬದಲು ನಮ್ಮಲ್ಲೇ ತಯಾರಿಸಬೇಕು' ಎಂಬ ಆಲೋಚನೆಯಲ್ಲೇ ಲೋಪ ಇದೆ. ಒಟ್ಟಿನಲ್ಲಿ ಇದು ಒಂದು ಚೌಕಾಸಿ ವ್ಯಾಪಾರ. ವಿವಿಧ ದೇಶಗಳು ಮಾತುಕತೆಗೆ ಬಂದಾಗ ಸುಂಕದ ದರಗಳು ಬದಲಾಗುತ್ತವೆ! ಚೀನಾದಂತೆ ಭಾರತವು ಅಮೆರಿಕಕ್ಕೆ ಸಡ್ಡು ಹೊಡೆಯುವ ಸ್ಥಿತಿಯಲ್ಲಿ ಇಲ್ಲ. ಸಂಧಾನಗಳ ಮೂಲಕ ರಾಜಿಸೂತ್ರ ರೂಪುಗೊಳ್ಳಬಹುದು. ಅಸಲಿ ಚಿತ್ರಣ ಇನ್ನಷ್ಟೇ ತಿಳಿಯಬೇಕಿದೆ.

**ಎಚ್.ಎಸ್.ಮಂಜುನಾಥ,** ಗೌರಿಬಿದನೂರು

### ಪ್ರಚೋದನಕಾರಿ ಕರೆ ಸಲ್ಲದು

'ರಾಜ್ಯ ಸರ್ಕಾರದ ಕುಮ್ಮಕ್ಕಿನಿಂದ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಯಂತಾಗಿವೆ. ಬಿಜೆಪಿ ಕಾರ್ಯಕರ್ತರ ವಿರುದ್ಧ ಕಿರುಕುಳ ಮಿತಿಮೀರಿದ್ದು, ಕಾರ್ಯಕರ್ತರು ಬಡಿಗೆ ಹಿಡಿದು ಠಾಣೆಗೆ ನುಗ್ಗುವ ದಿನ ದೂರವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿರುವುದು (ಪ್ರ.ವಾ., ಏ. 12) ನಿಜಕ್ಕೂ ಆಘಾತಕಾರಿಯಾಗಿದೆ. ಪೊಲೀಸರ ವರ್ತನೆ ಅವರು ತಿಳಿಸಿರುವ ಹಾಗೆ ಆಗಿರುವುದು ನಿಜವೇ ಆಗಿದ್ದರೆ, ಅದು ಖಂಡನಾರ್ಹವಾದದ್ದೇ ಸರಿ. ಆದಾಗ್ಯೂ ನಾಯಕರಾದವರು ಹೀಗೆ ಹಿಂಸೆಗೆ, ಕಾನೂನಿನ ಉಲ್ಲಂಘನೆಗೆ ತಮ್ಮ ಕಾರ್ಯಕರ್ತರನ್ನು ಪ್ರಚೋದಿಸುವಂತೆ ಪರೋಕ್ಷವಾಗಿ ಕರೆ ನೀಡಿರುವುದು ಅಸಾಂವಿಧಾನಿಕವೂ ಅರಾಜಕವೂ ಆಗುವುದಿಲ್ಲವೆ?

'ಬೆಲೆ ಏರಿಕೆಯಿಂದ ಜನರಿಗೆ ತೊಂದರೆಯಾಗಿರುವುದಕ್ಕೆ ರಾಜ್ಯ ಸರ್ಕಾರದ ಹಾಗೆಯೇ ಅವರದೇ ಪಕ್ಷ ಆಳ್ವಿಕೆ ನಡೆಸುತ್ತಿರುವ ಕೇಂದ್ರ ಸರ್ಕಾರವೂ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇದನ್ನು ಅವರೂ ನೆನಪಿನಲ್ಲಿ ಇಡಬೇಕಾಗಿತ್ತು, ಅಲ್ಲವೆ?

**ಪು.ಸೂ.ಲಕ್ಷ್ಮೀನಾರಾಯಣ ರಾವ್,** ಬೆಂಗಳೂರು

### ಶಿವಾಜಿಯ ಪಾತ್ರ ಮಾಡಬಾರದೇಕೆ?

'ಶಿವಾಜಿ ಕುರಿತು ನಟ, ನಿರ್ದೇಶಕ ರಿಷಬ್ ಶೆಟ್ಟಿ ಅವರು ಸಿನಿಮಾ ಮಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ. ಮುಂದಿನ ಪರಿಸ್ಥಿತಿ ಮನಗಂಡು ಈಗಲೇ ಸಿನಿಮಾ ನಿಲ್ಲಿಸಬೇಕು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಅವರು ಎಚ್ಚರಿಕೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಏ. 12). ರಾಜ್ಯದಲ್ಲೇ ಐತಿಹಾಸಿಕ ಪುರುಷರು, ಮಹನೀಯರು ಬಹಳಷ್ಟು ಮಂದಿ ಇದ್ದರೂ ಅಂಥವರನ್ನು ಬಿಟ್ಟು ಶಿವಾಜಿ ಪಾತ್ರ ಮಾಡಲು ಹೊರಟಿರುವುದು ಸರಿಯಲ್ಲ ಎಂಬ ಹೇಳಿಕೆ ಅವರ ಸಂಕುಚಿತ ಮನೋಭಾವವನ್ನು ತೋರಿಸುತ್ತದೆ.

ಶಿವಾಜಿಯ ಪಾತ್ರಕ್ಕೆ ರಿಷಬ್ ದೇಹಭಾಷೆ ಉತ್ತಮವಾಗಿ ಇರಬಹುದು. ಬಹುಶಃ ಆ ಕಾರಣದಿಂದ ಚಿತ್ರತಂಡವು ಶಿವಾಜಿ ಪಾತ್ರಕ್ಕೆ ಅವರನ್ನು ಆಯ್ಕೆ ಮಾಡಿರಬಹುದು. ನಮ್ಮ ವರನಟ ರಾಜ್‌ಕುಮಾರ್ ಅವರು 'ಸಂತ ತುಕಾರಾಂ', 'ಕವಿರತ್ನ ಕಾಳಿದಾಸ' ಅವರಂತಹವರ ಜೀವನಕಥೆಯನ್ನು ಆಧರಿಸಿದ ಚಿತ್ರಗಳಲ್ಲಿ ನಟಿಸಿದ್ದಾರೆ. ಮಹಾತ್ಮ ಗಾಂಧಿ ಅವರಿಗೆ ಸಂಬಂಧಿಸಿದ ಚಿತ್ರದಲ್ಲಿ ಅವರ ಪಾತ್ರವನ್ನು ಬ್ರಿಟಿಷ್ ಪ್ರಜೆ ರಿಚರ್ಡ್ ಅಟೆನ್‌ಬರೊ ಮಾಡಿದ್ದಾರೆ. ಒಬ್ಬ ನಟನಿಗೆ ಒಪ್ಪುವಂತಹ ಪಾತ್ರವಾಗಿದ್ದರೆ ಅದನ್ನು ವಿರೋಧಿಸುವುದು ಮತ್ತು ನಟಿಸದಂತೆ ಧಮಕಿ ಹಾಕುವುದು ಸರಿಯಲ್ಲ.

**ಚಂದ್ರಕಾಂತ ನಾಮಧಾರಿ,** ಅಂಕೋಲಾ

### ಪಾಕ್ಷಿಕ, ಮಾಸಪತ್ರಿಕೆ ಮೇಲೆ ಕೆಂಗಣ್ಣು

ಅಂಚೆ ಇಲಾಖೆಯು ಹಂತಹಂತವಾಗಿ ಪಾಕ್ಷಿಕ ಮತ್ತು ಮಾಸಪತ್ರಿಕೆಗಳ ಕತ್ತನ್ನು ಹಿಸುಕಲು ಹೊರಟಿರುವುದು ಖಂಡನೀಯ. ಈ ಮೊದಲು 50 ಗ್ರಾಮ್‌ಗಿಂತ ಕಡಿಮೆ ತೂಕವುಳ್ಳ ಪಾಕ್ಷಿಕ ಅಥವಾ ಮಾಸಪತ್ರಿಕೆಯನ್ನು ರಿಯಾಯಿತಿ ದರದಲ್ಲಿ, ಅಂದರೆ 25 ಪೈಸೆಯಲ್ಲಿ ಅಂಚೆಗೆ ಹಾಕಲು ಅವಕಾಶವಿತ್ತು. ನಿಗದಿತ ದಿನಾಂಕದಲ್ಲಿ ಅಂಚೆಗೆ ಹಾಕಲು ಸಾಧ್ಯವಾಗದಿದ್ದರೆ ವರ್ಷದಲ್ಲಿ ಎರಡು ಬಾರಿ ಅನುಮತಿ ಪಡೆದು ಬೇರೆ ದಿನಾಂಕದಲ್ಲಿ ಅಂಚೆಗೆ ಹಾಕಬಹುದಿತ್ತು. ಪ್ರಸ್ತುತ ಬರೀ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಿಗೆ ಮಾತ್ರ ಆ ರಿಯಾಯಿತಿ ಇದ್ದು ಪಾಕ್ಷಿಕ, ಮಾಸಪತ್ರಿಕೆಗಳಿಗೆ ರಿಯಾಯಿತಿಯನ್ನು ತೆಗೆಯಲಾಗಿದೆ. ಇದರಿಂದ ಪಾಕ್ಷಿಕ ಹಾಗೂ ಮಾಸಪತ್ರಿಕೆಗಳನ್ನು ಎರಡು ರೂಪಾಯಿ ದರದಲ್ಲಿ ಅಂಚೆಗೆ ಹಾಕಬೇಕಾಗಿದೆ ಹಾಗೂ ಅದಕ್ಕೆ ಶೇ 18ರಷ್ಟು ಜಿಎಸ್‌ಟಿ ಅಂದರೆ 36 ಪೈಸೆ ಸೇರಿ ಒಟ್ಟು ₹ 2.36 ಆಗುತ್ತದೆ. ಇದು, ಪ್ರಸ್ತುತ ಇರುವ ದರಕ್ಕಿಂತ ಒಂಬತ್ತು ಪಟ್ಟು ಹೆಚ್ಚಳವಾಗಿದೆ.

25 ಪೈಸೆಯನ್ನು 50 ಪೈಸೆಗೆ ಹೆಚ್ಚಿಸಿದ್ದರೂ ನಿಭಾಯಿಸಬಹುದು. ಆದರೆ ಈ ರೀತಿಯ ವಿಪರೀತ ದರ ಏರಿಕೆಯಿಂದ ಈ ಪತ್ರಿಕೆಗಳನ್ನು ಉಳಿಸಿಕೊಂಡು ನಡೆಸುವುದು ಕಷ್ಟವಾಗಲಿದೆ. ಈ ಕಾರಣದಿಂದ ಇಲಾಖೆಯು ತನ್ನ ನಿರ್ಧಾರವನ್ನು ಪರಿಶೀಲಿಸಬೇಕು. ಪಾಕ್ಷಿಕ ಹಾಗೂ ಮಾಸಪತ್ರಿಕೆಗಳ ಒಡೆತನ ಹೊಂದಿರುವವರು ಈ ದಿಸೆಯಲ್ಲಿ ಸರ್ಕಾರವನ್ನು ಆಗ್ರಹಿಸಬೇಕು.

**ಈ.ಬಸವರಾಜು,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚೀನಾ ತಂತ್ರಜ್ಞಾನ ಕ್ಷೇತ್ರದಲ್ಲಿ ಶರವೇಗದಲ್ಲಿ ಮುನ್ನುಗ್ಗುತ್ತಿದೆ. ಕೃತಕ ಬುದ್ಧಿಮತ್ತೆ (ಎಐ), ರೊಬೊಟಿಕ್ಸ್ ಮುಂತಾದ ಉನ್ನತ ತಂತ್ರಜ್ಞಾನ (ಡೀಪ್ ಟೆಕ್) ವಲಯದಲ್ಲಿ ಅದು ಭಾರಿ ಸಾಧನೆ ಮಾಡುತ್ತಿದ್ದು, ಅಮೆರಿಕಕ್ಕೆ ಪೈಪೋಟಿ ನೀಡುತ್ತಿದೆ. ಆದರೆ, ಭಾರತದ ನವೋದ್ಯಮಗಳು (ಸ್ಟಾರ್ಟ್ ಅಪ್ ಕಂಪನಿಗಳು) ಫುಡ್ ಡೆಲಿವರಿ, ಕ್ವಿಕ್ ಕಾಮರ್ಸ್ ವಲಯಗಳು ಸೇರಿದಂತೆ ಗ್ರಾಹಕ ಕೇಂದ್ರಿತವಾಗಿಯೇ ಉಳಿದುಬಿಟ್ಟಿವೆ ಎಂದು ಕೇಂದ್ರ ಸಚಿವರು ಇತ್ತೀಚೆಗೆ ಆಕ್ಷೇಪಿಸಿದ್ದರು. ಈ ಹೇಳಿಕೆ ಬಗ್ಗೆ ದೇಶದಲ್ಲಿ ಪರ ವಿರೋಧ ಚರ್ಚೆ ನಡೆಯುತ್ತಿದೆ. ಚೀನಾದಲ್ಲಿ ನವೋದ್ಯಮಗಳ ಬೆಳವಣಿಗೆಗೆ ಪೂರಕವಾಗಿ ಎಂತಹ ವಾತಾವರಣ ಇದೆ, ಭಾರತದಲ್ಲಿ ಈ ದಿಕ್ಕಿನಲ್ಲಿ ಆಗಬೇಕಿರುವುದೇನು, ಇದರಲ್ಲಿ ಸರ್ಕಾರದ ಪಾತ್ರವೇನು ಮುಂತಾದ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ

# ನವೋದ್ಯಮ: ಭಾರತದಲ್ಲಿ ಆಗಬೇಕಿರುವುದೇನು?

**ದೇಶದಲ್ಲಿ ನವೋದ್ಯಮಗಳು**

- **500** — 2016
- **1.70 ಲಕ್ಷ** — 2025*
- **115 ಕ್ಕೂ ಹೆಚ್ಚು** — ದೇಶದಲ್ಲಿರುವ ಯುನಿಕಾರ್ನ್ ನವೋದ್ಯಮಗಳು
- **₹3.01 ಲಕ್ಷ ಕೋಟಿ** — 2023ರಲ್ಲಿ ನವೋದ್ಯಮಗಳು ದೇಶದ ಜಿಡಿಪಿಗೆ ನೀಡಿದ ಕೊಡುಗೆ

* ಇಲ್ಲಿವರೆಗೆ, ** 100 ಕೋಟಿ ಡಾಲರ್‌ಗಿಂತಲೂ ಹೆಚ್ಚು ಮೌಲ್ಯ (₹8,610 ಕೋಟಿ) ಹೊಂದಿರುವ ನವೋದ್ಯಮವನ್ನು ಯುನಿಕಾರ್ನ್ ನವೋದ್ಯಮ ಎಂದು ಕರೆಯಲಾಗುತ್ತದೆ

ಪ್ರಜಾವಾಣಿ ವಾರ್ತೆ

**ದೇಶದಲ್ಲಿ ತಂತ್ರಜ್ಞಾನ ನವೋದ್ಯಮ (2014ರಿಂದ 2024ರವರೆಗೆ)**

- **35 ಸಾವಿರ** ದೇಶದಲ್ಲಿರುವ ತಂತ್ರಜ್ಞಾನ ನವೋದ್ಯಮಗಳು
- **4,000** ಡೀಪ್ ಟೆಕ್ ನವೋದ್ಯಮಗಳು
- **82** ಯುನಿಕಾರ್ನ್ ಟೆಕ್ ನವೋದ್ಯಮಗಳು
- **₹94,710 ಕೋಟಿ** ಹತ್ತು ವರ್ಷಗಳಲ್ಲಿ ಡೀಪ್ ನವೋದ್ಯಮಗಳಿಗೆ ಮಾಡಲಾದ ಹೂಡಿಕೆ ಮೊತ್ತ

**ದೆಹಲಿಯಲ್ಲಿ** ಇತ್ತೀಚೆಗೆ ನಡೆದ ನವೋದ್ಯಮ (ಸ್ಟಾರ್ಟ್‌ಅಪ್) ಮಹಾಕುಂಭದ ಎರಡನೇ ಆವೃತ್ತಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಹೇಳಿರುವ ಮಾತುಗಳು ಚರ್ಚೆಗೆ ಗ್ರಾಸವಾಗಿವೆ. ಚೀನಾದ ಹೆಸರನ್ನು ಪ್ರಸ್ತಾಪಿಸದೇ, ಅಲ್ಲಿನ ನವೋದ್ಯಮಗಳು ಡೀಪ್ ಟೆಕ್ ಕ್ಷೇತ್ರದಲ್ಲಿ ಶರವೇಗದಲ್ಲಿ ಮುನ್ನುಗ್ಗುತ್ತಿವೆ. ಆದರೆ, ಭಾರತದ ಈ ವಲಯವು ಬಹುತೇಕ ಗ್ರಾಹಕರ ಸೇವೆ ಆಧಾರಿತ ಆ್ಯಪ್‌ಗಳನ್ನು ರೂಪಿಸುವುದರಲ್ಲೇ ಮಗ್ನವಾಗಿದೆ ಎಂದು ಅವರು ಹೇಳಿದ್ದರು.

ದೇಶದ ಬಹುತೇಕ ನವೋದ್ಯಮಗಳ ಸ್ಥಾಪಕರು ಐಸ್‌ಕ್ರೀಮ್ ಬ್ರ್ಯಾಂಡ್‌ಗಳು, ದಿನಸಿ ಹಾಗೂ ಇತರ ಉತ್ಪನ್ನಗಳು ಕಡಿಮೆ ಸಮಯದಲ್ಲಿ ಗ್ರಾಹಕರಿಗೆ ತಲುಪಿಸುವ ಆ್ಯಪ್‌ಗಳು, ಬೆಟ್ಟಿಂಗ್ ಮತ್ತು ಫ್ಯಾಂಟಸಿ ಸ್ಪೋರ್ಟ್ಸ್ ಅಪ್ಲಿಕೇಷನ್‌ಗಳ ಬಗ್ಗೆ ಗಮನಹರಿಸುತ್ತಿದ್ದಾರೆ; ಚೀನಾದಲ್ಲಿ ಹೊಸ ಕಾಲದ ಕಂಪನಿಗಳು ಸೆಮಿಕಂಡಕ್ಟರ್, ರೊಬೊಟಿಕ್ಸ್, ಎಐ, ಎಲೆಕ್ಟ್ರಿಕಲ್ ವೆಹಿಕಲ್, ತ್ರಿ–ಡಿ ಮ್ಯಾನುಫ್ಯಾಕ್ಚರಿಂಗ್ ಮತ್ತು ಮಷೀನ್ ಲರ್ನಿಂಗ್ ವಲಯಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಭಾರತದಲ್ಲಿ ನವೋದ್ಯಮವು ಭವಿಷ್ಯದ ದೃಷ್ಟಿಕೋನವಿಲ್ಲದೇ ಅಲ್ಪಕಾಲೀನವಾದ, ಗ್ರಾಹಕರಿಗೆ ಡಿಜಿಟಲ್ ಅನುಕೂಲ ಪೂರೈಸುವುದರಲ್ಲಿಯೇ ತೊಡಗಿವೆ ಎನ್ನುವುದು ಮುಖ್ಯ ಆಕ್ಷೇಪ.

ಬಂಡವಾಳ ಹೂಡಿಕೆ, ಬಳಕೆದಾರರ ಸಂಖ್ಯೆ, ಉದ್ಯೋಗ ಸೃಷ್ಟಿ, ಆದಾಯ ಮತ್ತು ಲಾಭದ ದೃಷ್ಟಿಯಿಂದ ಭಾರತದ ನವೋದ್ಯಮಗಳು ಉತ್ತಮವಾಗಿಯೇ ಕಾರ್ಯನಿರ್ವಹಿಸುತ್ತಿವೆ. ಆದರೆ, ಇವು ಚೀನಾ ಮತ್ತು ಇತರ ದೇಶಗಳ ಕಂಪನಿಗಳ ರೀತಿಯಲ್ಲಿ ನಾವೀನ್ಯದ ಗಡಿಗಳನ್ನು ವಿಸ್ತರಿಸಿ, ನವೋದ್ಯಮ ಕ್ಷೇತ್ರವನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿಲ್ಲ ಎನ್ನುವ ಟೀಕೆ ಇದೆ.

ಎರಡು ದಶಕಗಳಿಂದ ಭಾರತ ಮತ್ತು ಚೀನಾ, ಜಾಗತಿಕ ನವೋದ್ಯಮ ಬೆಳವಣಿಗೆಯ ಪ್ರಮುಖ ರಾಷ್ಟ್ರಗಳೆನಿಸಿವೆ. ಬೃಹತ್ ಜನಸಂಖ್ಯೆ, ತ್ವರಿತ ಡಿಜಿಟಲೀಕರಣ, ಬಂಡವಾಳ ಹೂಡಿಕೆ ಎರಡೂ ರಾಷ್ಟ್ರಗಳ ಶಕ್ತಿಯಾಗಿದೆ. ಜಗತ್ತಿನಲ್ಲಿ 2024ರ ಹೊತ್ತಿಗೆ ಚೀನಾವು ಅಲಿಬಾಬಾ, ಬೈಟ್‌ಡಾನ್ಸ್, ಟೆನ್‌ಸೆಂಟ್ ಮುಂತಾದ ಕಂಪನಿಗಳ ಬೆಳವಣಿಗೆಯೊಂದಿಗೆ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕವಾಗಿ ಮುಂಚೂಣಿ ಸ್ಥಾನ ಪಡೆದಿದೆ. ಅತಿ ಹೆಚ್ಚು ನವೋದ್ಯಮಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತ ಮೂರನೇ ಸ್ಥಾನ ಹೊಂದಿದೆ ಎಂಬುದು ಕೇಂದ್ರ ಸರ್ಕಾರದ ಹೇಳಿಕೆ. ಆದರೆ, ಆರಂಭದ ಭರವಸೆಯ ಹೊರತಾಗಿಯೂ ದೇಶದ ನವೋದ್ಯಮ ಕ್ಷೇತ್ರವು ತನ್ನ ಅಲ್ಪಕಾಲೀನ, ಗ್ರಾಹಕಕೇಂದ್ರಿತ ಯೋಜನೆಗಳಲ್ಲಿ ತೊಡಗಿ, ತನ್ನ ಗಾತ್ರ ಮತ್ತು ಲಾಭದ ದೃಷ್ಟಿಯಿಂದ ನಿರೀಕ್ಷಿತ ಪ್ರಗತಿ ಕಂಡಿಲ್ಲ. ಹೂಡಿಕೆಯ ಕೊರತೆ, ಜತೆಗೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡದಿರುವುದೇ ಮುಖ್ಯ ಕಾರಣ ಎನ್ನಲಾಗಿದೆ.

ಡೀಪ್ ಟೆಕ್ ಆವಿಷ್ಕಾರಗಳಿಗೆ ಹೆಚ್ಚು ಸಮಯ ಬೇಕು ಮತ್ತು ಹೆಚ್ಚು ಬಂಡವಾಳವನ್ನೂ ಬೇಡುತ್ತವೆ. ನವೋದ್ಯಮಿಗಳಲ್ಲಿ ದೀರ್ಘಾವಧಿ ರಿಸ್ಕ್ ತೆಗೆದುಕೊಳ್ಳುವ ಮನಃಸ್ಥಿತಿ ಇಲ್ಲ, ತಕ್ಷಣವೇ ಲಾಭ ಕಾಣಬೇಕು ಎನ್ನುವ ಧೋರಣೆಯಿಂದಾಗಿ ಗ್ರಾಹಕಕೇಂದ್ರಿತ ನವೋದ್ಯಮಗಳಲ್ಲಿ ಬಂಡವಾಳ ಹೂಡುತ್ತಿದ್ದಾರೆ. ಹೀಗಾಗಿ ಉನ್ನತ ತಾಂತ್ರಿಕತೆ ರೂಪುಗೊಳ್ಳಲು ನಮ್ಮಲ್ಲಿ ಸಾಧ್ಯವಾಗಿಲ್ಲ ಎನ್ನುವ ವಾದವೂ ಇದೆ.

ಆದರೆ, ಈ ಹಿಂದುಳಿದಿರುವಿಕೆಯಲ್ಲೂ ಬೆಳವಣಿಗೆಯ ಭರವಸೆ ಇದೆ ಎನ್ನುವುದು ಉದ್ಯಮ ರಂಗದ ಕೆಲವರ ಮಾತು. ಗ್ರಾಹಕರ ಅನುಕೂಲದ ದೃಷ್ಟಿಯಿಂದ ಆರಂಭವಾದ ಇಂಟರ್‌ನೆಟ್ ಆಧಾರಿತ ಗ್ರಾಹಕ ಕಂಪನಿಗಳೇ ಮುಂದೆ ತಾಂತ್ರಿಕ ಜಗತ್ತಿನಲ್ಲಿ ಮಹತ್ವದ ಕಾರ್ಯ ಮಾಡಿವೆ ಎನ್ನುವುದು ಕ್ವಿಕ್ ಕಾಮರ್ಸ್ ಕಂಪನಿಯಾದ ಜೆಪ್ಟೊನ ಸಂಸ್ಥಾಪಕ ಆದಿತ್ ಪಲಿಚಾ ಅವರ ಅಭಿಪ್ರಾಯ. ಇಂಟರ್‌ನೆಟ್ ಆಧಾರಿತ ಗ್ರಾಹಕ ಕಂಪನಿಯಾದ ಅಮೆಜಾನ್, ಇಂದು ಕ್ಲೌಡ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದೆ. ಈಗ ಎಐ ವಲಯದಲ್ಲಿ ಹೆಸರು ಮಾಡಿರುವ ಫೇಸ್‌ಬುಕ್, ಗೂಗಲ್ ಒಂದು ಕಾಲದಲ್ಲಿ ಇಂಟರ್ನೆಟ್ ಆಧಾರಿತ ಗ್ರಾಹಕ ಕಂಪನಿಗಳಾಗಿದ್ದವು ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರತವು ಉನ್ನತ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದರೆ, ಡೀಪ್ ಟೆಕ್ ಸ್ಟಾರ್ಟ್‌ಅಪ್‌ಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಬಂಡವಾಳ ಹೂಡಿಕೆ ಹೆಚ್ಚಾಗಬೇಕು. ಜತೆಗೆ ಸರ್ಕಾರದ ನೀತಿಗಳು ಕೂಡ ಇದಕ್ಕೆ ಪೂರಕವಾಗಿರಬೇಕು ಎನ್ನುವುದು ಕೆಲವರ ಅನಿಸಿಕೆ.

2015ರಲ್ಲಿ 'ಮೇಡ್ ಇನ್ ಚೀನಾ–2025' ಯೋಜನೆ ಮೂಲಕ ಪ್ರಮುಖ ವಲಯಗಳನ್ನು ಗುರುತಿಸಿ, ಅವುಗಳ ಪ್ರಗತಿಗೆ ಎಲ್ಲ ಸೌಲಭ್ಯಗಳನ್ನೂ ಚೀನಾ ಒದಗಿಸಿತು. ತನ್ನ 14ನೇ ಪಂಚವಾರ್ಷಿಕ ಯೋಜನೆಯಲ್ಲೂ ಸುಸ್ಥಿರ ಅಭಿವೃದ್ಧಿ ಮತ್ತು ತಾಂತ್ರಿಕ ಅಭಿವೃದ್ಧಿಗೆ ಆದ್ಯತೆ ನೀಡಿತು. 2023ರಲ್ಲಿ ಭಾರತದ ನವೋದ್ಯಮದ ಒಟ್ಟು ಹೂಡಿಕೆಯಲ್ಲಿ ಶೇ 5ರಷ್ಟು ಮಾತ್ರ ಡೀಪ್ ಟೆಕ್ ವಲಯದಲ್ಲಿ ತೊಡಗಿಸಲಾಗಿತ್ತು; ಇದೇ ವೇಳೆ, ಚೀನಾದಲ್ಲಿ ನವೋದ್ಯಮದ ಒಟ್ಟು ಹೂಡಿಕೆಯಲ್ಲಿ ಶೇ 35ರಷ್ಟು ಡೀಪ್ ಟೆಕ್ ವಲಯದಲ್ಲಿ ಹೂಡಿಕೆ ಮಾಡಲಾಗಿತ್ತು.

ಚೀನಾ ಅಷ್ಟೇ ಅಲ್ಲ, ಅಮೆರಿಕ, ದಕ್ಷಿಣ ಕೊರಿಯಾ, ಜಪಾನ್, ಜರ್ಮನಿ ಮುಂತಾದ ರಾಷ್ಟ್ರಗಳು ಕೂಡ ದೀರ್ಘಾವಧಿಯ, ಡೀಪ್ ಟೆಕ್ ಆವಿಷ್ಕಾರಗಳಲ್ಲಿ ತೊಡಗಿವೆ. 'ಈ ವಿಚಾರದಲ್ಲಿ ಭಾರತ ಸಾಗಬೇಕಾದ ಹಾದಿ ಇನ್ನೂ ದೀರ್ಘವಾಗಿದೆ; ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಬಹಳ ಮುಖ್ಯವಾಗಿದೆ. ನವೋದ್ಯಮಗಳಿಗೆ ಹೆಚ್ಚಿನ ಬಂಡವಾಳ ಮತ್ತು ಅವುಗಳ ಬೆಳವಣಿಗೆಗೆ ಪೂರಕವಾದ ನೀತಿ ನಿರೂಪಣೆಗಳ ಅಗತ್ಯವಿದೆ' ಎಂಬುದು ನವೋದ್ಯಮಿಗಳ ಅಭಿಪ್ರಾಯ.

ಆಧಾರ: ಪಿಟಿಐ, ಬಿಬಿಸಿ, ನಾಸ್ಕಾಂ ವರದಿ, ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನಾ ಸಚಿವಾಲಯ

## ಚೀನಾ ಪರಿಸ್ಥಿತಿ

- ನವೋದ್ಯಮ ಪರವಾದ ಸರ್ಕಾರದ ನೀತಿಗಳು, ದೊಡ್ಡ ಪ್ರಮಾಣದ ಆರ್ಥಿಕ ನೆರವು. ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತು
- ಭಾರಿ ಪ್ರಮಾಣದಲ್ಲಿ ತೆರಿಗೆವಿನಾಯಿತಿ. ಮಾಧ್ಯಮಗಳ ವರದಿ ಪ್ರಕಾರ, 2024ರಲ್ಲಿ ಚೀನಾವು ಡೀಪ್ ಟೆಕ್ ನವೋದ್ಯಮಗಳಿಗೆ ₹31.08 ಲಕ್ಷ ಕೋಟಿಯಷ್ಟು ತೆರಿಗೆ ಮತ್ತು ಶುಲ್ಕಗಳ ವಿನಾಯಿತಿ ನೀಡಿದೆ
- ಎಐ, ಸೆಮಿಕಂಡಕ್ಟರ್, ರೊಬೊಟಿಕ್ಸ್ ನವೋದ್ಯಮ ಕ್ಷೇತ್ರದಲ್ಲಿ ನಾವೀನ್ಯ ಕಲ್ಪನೆಗಳ ಅಭಿವೃದ್ಧಿಗಾಗಿ ಖಾಸಗಿ ಕಂಪನಿಗಳಿಂದ ಭಾರಿ ಪ್ರಮಾಣದ ಬಂಡವಾಳ ಹೂಡಿಕೆ. ಸೌತ್ ಚೀನಾ ಪೋಸ್ಟ್ ಪ್ರಕಾರ, 2023ರಲ್ಲಿ ಚೀನಿ ನವೋದ್ಯಮಗಳು ವಿವಿಧ ಕಂಪನಿಗಳಿಂದ ₹3.92 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದವು. ಎಐ ಮತ್ತು ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಈ ಹೂಡಿಕೆ ಮೊತ್ತ ₹1.06 ಲಕ್ಷ ಕೋಟಿ
- ವಿದ್ಯುತ್ ಚಾಲಿತ ವಾಹನ, ಎಐ, ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಿಣತಿ
- ಜಾಗತಿಕ ಮಟ್ಟದ ಕಂಪನಿಗಳ ಉಪಸ್ಥಿತಿ
- ಮೂಲಸೌಕರ್ಯದ ಲಭ್ಯತೆ, ಬಾಹ್ಯಕಾಶ ತಂತ್ರಜ್ಞಾನ, ಅತಿ ವೇಗದ ರೈಲು, ನವೀಕೃತ ಇಂಧನ ಕ್ಷೇತ್ರಗಳಲ್ಲಿ ದೀರ್ಘಾವಧಿಯ ಬಂಡವಾಳ ಹೂಡಿಕೆ



## ಭಾರತದ ಸ್ಥಿತಿಗತಿ

- ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳ ಕೊರತೆ
- ಸರ್ಕಾರದ ಸ್ಟಾರ್ಟ್ ಅಪ್ ಇಂಡಿಯಾ ಯೋಜನೆಯ ದೊಡ್ಡ ಲಾಭ ನವೋದ್ಯಮಿಗಳಿಗೆ ಸಿಕ್ಕಿಲ್ಲ. ಕಡಿಮೆ ಅವಧಿಗೆ (ಮೂರು ವರ್ಷ) ತೆರಿಗೆ ವಿನಾಯಿತಿ, ಅಧಿಕಾರಶಾಹಿಯ ವಿಳಂಬ ಧೋರಣೆ, ಕಠಿಣ ನಿಯಮಗಳು
- ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಸೀಮಿತ ಪ್ರಗತಿ
- ಬಾಹ್ಯಾಕಾಶ, ಡೀಪ್ ಟೆಕ್ ತಂತ್ರಜ್ಞಾನ, ಸೆಮಿಕಂಡಕ್ಟರ್‌ಗಳು, ಎಐ, ರೊಬೊಟಿಕ್ಸ್ ಸೇರಿದಂತೆ ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಿಣತಿ ಮತ್ತು ಮೂಲಸೌಕರ್ಯಗಳ ಕೊರತೆ
- ಜಾಗತಿಕ ಮಟ್ಟದ ಸಂಸ್ಥೆಗಳ ಅನುಪಸ್ಥಿತಿ
- ತಂತ್ರಜ್ಞಾನ ನವೋದ್ಯಮಗಳಲ್ಲಿ ಉತ್ಪನ್ನಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಸಮಯ ಬೇಕು. ಫಲಿತಾಂಶವೂ ವಿಳಂಬವಾಗಿ ಬರುತ್ತದೆ. ಹೀಗಾಗಿ ಈ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ನವೋದ್ಯಮಿಗಳ ನಿರಾಸಕ್ತಿ
- ನವೋದ್ಯಮಿಗಳಿಂದ ಡಿಜಿಟಲ್ ಆಧಾರಿತ ಗ್ರಾಹಕ ಸೇವೆಗಳಿಗೆ ಹೆಚ್ಚು ಒತ್ತು
- ಕಡಿಮೆ ಬಂಡವಾಳ ಹೂಡಿಕೆ. 2024ರಲ್ಲಿ ದೇಶದ ನವೋದ್ಯಮಗಳು ಸಂಗ್ರಹಿಸಿದ ಒಟ್ಟು ಬಂಡವಾಳ ಮೊತ್ತ ₹1.18 ಲಕ್ಷ ಕೋಟಿ. ಡೀಪ್ ಟೆಕ್ ನವೋದ್ಯಮಗಳು ಸಂಗ್ರಹಿಸಿದ್ದು ಕೇವಲ ₹13,776 ಕೋಟಿ
- ಡೀಪ್ ಟೆಕ್ ನವೋದ್ಯಮಗಳು ರೂಪಿಸಿದ ಉತ್ಪನ್ನಗಳಿಗೆ ಗ್ರಾಹಕರಿಂದ ಸಿಗದ ಸ್ಪಂದನೆ
- ಪ್ರತಿಭಾ ಪಲಾಯನ, ಕೌಶಲಯುಕ್ತ ತಂತ್ರಜ್ಞರ ಕೊರತೆ

## ನವೋದ್ಯಮ ಸೃಷ್ಟಿಸಿದ ನೇರ ಉದ್ಯೋಗಗಳು

| ವಲಯ | ಉದ್ಯೋಗಗಳು |
|---|---|
| ಐಟಿ ಸೇವೆಗಳು | 2.04 ಲಕ್ಷ |
| ಆರೋಗ್ಯ ಮತ್ತು ಜೀವ ವಿಜ್ಞಾನ | 1.47 ಲಕ್ಷ |
| ವೃತ್ತಿಪರ ಮತ್ತು ವಾಣಿಜ್ಯ ಸೇವೆಗಳು | 94,060 |
| ಶಿಕ್ಷಣ | 90,414 |
| ಮಾನವ ಸಂಪನ್ಮೂಲ | 87,983 |
| ನಿರ್ಮಾಣ | 88,702 |
| ಆಹಾರ ಮತ್ತು ಪಾನೀಯ | 88,468 |
| ಕೃಷಿ | 83,307 |

**16.67 ಲಕ್ಷ** ನವೋದ್ಯಮಗಳು ಸೃಷ್ಟಿಸಿರುವ ನೇರ ಉದ್ಯೋಗಗಳು

(2024ರ ಅ.31ವರೆಗೆ)

## ಆಶಾದಾಯಕ ಬೆಳವಣಿಗೆ

ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ತಂತ್ರಜ್ಞಾನ ನವೋದ್ಯಮ ಕ್ಷೇತ್ರ ಬೆಳೆಯುತ್ತಿದೆ ಎಂದು 2024ರಲ್ಲಿ ಭಾರತದ ತಂತ್ರಜ್ಞಾನ ನವೋದ್ಯಮ ವಲಯಕ್ಕೆ ಸಂಬಂಧಿಸಿದಂತೆ ನಾಸ್ಕಾಂ, ಜಿನ್ನೊವ್ ಸಹಭಾಗಿತ್ವದಲ್ಲಿ ಸಿದ್ಧಪಡಿಸಿದ ವರದಿ ಹೇಳುತ್ತದೆ. ಅದರ ಪ್ರಕಾರ,

- 2024ರಲ್ಲಿ 2,000ಕ್ಕೂ ಹೆಚ್ಚು ಟೆಕ್ ನವೋದ್ಯಮಗಳು ಸ್ಥಾಪನೆಯಾಗಿವೆ
- 900ಕ್ಕೂ ಹೆಚ್ಚು ಡೀಪ್ ಟೆಕ್ ನವೋದ್ಯಮಗಳು ಸ್ಥಾಪನೆಗೊಂಡಿವೆ
- 2023ಕ್ಕೆ ಹೋಲಿಸಿದರೆ, 2024ರಲ್ಲಿ ಟೆಕ್ ನವೋದ್ಯಮಗಳ ಹೂಡಿಕೆ ಪ್ರಮಾಣ ಶೇ 23ರಷ್ಟು ಹೆಚ್ಚಿದೆ
- ಡೀಪ್ ಟೆಕ್ ನವೋದ್ಯಮಗಳಿಗೆ ಮಾಡಿದ ಹೂಡಿಕೆ ಪ್ರಮಾಣದಲ್ಲೂ ಶೇ 78ರಷ್ಟು ಏರಿಕೆ ಕಂಡಿದೆ. ಕಳೆದ ವರ್ಷ ಡೀಪ್‌ಟೆಕ್ ನವೋದ್ಯಮಗಳ ಮೇಲೆ ₹13,776 ಕೋಟಿ ಬಂಡವಾಳ ಹೂಡಲಾಗಿದೆ
- ಡೀಪ್‌ಟೆಕ್ ನವೋದ್ಯಮಗಳ ಮೇಲೆ ಮಾಡಲಾದ ಹೂಡಿಕೆಯ ಪೈಕಿ ಶೇ 87ರಷ್ಟು ಹೂಡಿಕೆ ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ನವೋದ್ಯಮಗಳಲ್ಲಿ ಮಾಡಲಾಗಿದೆ
- ಟೆಕ್ ನವೋದ್ಯಮಗಳ ಮೇಲೆ ಕಾರ್ಪೊರೇಟ್ ಕಂಪನಿಗಳ ವಿಶ್ವಾಸ ಹೆಚ್ಚಾಗಿದ್ದು, ಅವುಗಳ ಹೂಡಿಕೆ ಪ್ರಮಾಣ ಶೇ 70ರಷ್ಟು ಅಭಿವೃದ್ಧಿ ಕಂಡಿದೆ
- ಸಂಶೋಧನೆ ಮತ್ತು ಅಭಿವೃದ್ಧಿಗೆ 2025ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ₹20 ಸಾವಿರ ಕೋಟಿ ಮೀಸಲಿಟ್ಟಿದೆ

# ನರೇಗಾ: ಮಾನವ ದಿನ, ಕೂಲಿ ಏರಿಸಲು ಶಿಫಾರಸು

ನವದೆಹಲಿ (ಪಿಟಿಐ): 'ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ತಿಳಿಯಲು ಸ್ವತಂತ್ರ ಸಮೀಕ್ಷೆ ನಡೆಸುವ ಅಗತ್ಯವಿದ್ದು, ಈಗಿನ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ಪರಿಷ್ಕರಿಸಬೇಕಾದ ಅಗತ್ಯವಿದೆ' ಎಂದು ಸಂಸದೀಯ ಸಮಿತಿಯು ಶಿಫಾರಸು ಮಾಡಿದೆ.

ಇತ್ತೀಚೆಗೆ ಮುಕ್ತಾಯಗೊಂಡ ಬಜೆಟ್ ಅಧಿವೇಶನದಲ್ಲಿ ಈ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.

'ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿ ಮಾಡಿದ ಶಿಫಾರಸಿನ ಪ್ರಕಾರ, ಖಾತರಿ ಯೋಜನೆ ಅಡಿಯಲ್ಲಿ ಈಗ ನೀಡುತ್ತಿರುವ 100 ದಿನಗಳ ಉದ್ಯೋಗದ ಬದಲಾಗಿ 150 ದಿನಕ್ಕೆ ಏರಿಕೆ, ಕೂಲಿಯನ್ನು ₹400ಕ್ಕೆ ಏರಿಕೆ ಮಾಡಬೇಕು' ಎಂದು ಸಲಹೆ ನೀಡಿದೆ.

ಗ್ರಾಮೀಣ ಭಾಗದಲ್ಲಿ ಉದ್ಯೋಗ ಕಲ್ಪಿಸುವ ಈ ಯೋಜನೆಗೆ ನಿರಂತರ ಅನುದಾನ ಕಲ್ಪಿಸಬೇಕು, ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಬೇಕು ಎಂದು ತಿಳಿಸಿದೆ.

'ನರೇಗಾವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಸಮಗ್ರ ರಾಷ್ಟ್ರೀಯ ಸಮೀಕ್ಷೆ ನಡೆಸುವ ಅಗತ್ಯವಿದೆ' ಎಂದು ಕಾಂಗ್ರೆಸ್ ಸಂಸದ ಸಪ್ತಗಿರಿ ಶಂಕರ್ ಉಲಾಕಾ ನೇತೃತ್ವದ ಸಮಿತಿ ಸರ್ಕಾರಕ್ಕೆ ತಿಳಿಸಿದೆ. ನರೇಗಾ ಉದ್ಯೋಗಿಗಳ ಸಂತೃಪ್ತಿ, ಕೂಲಿಯಲ್ಲಿನ ವಿಳಂಬ, ಭಾಗವಹಿಸುವವರ ಆಸಕ್ತಿ ಹಾಗೂ ಹಣಕಾಸು ಅಕ್ರಮಗಳನ್ನು ಈ ಸಮೀಕ್ಷೆ ಒಳಗೊಂಡಿರಬೇಕು ಎಂದು ಹೇಳಿದೆ.

## ಸಂಕ್ಷಿಪ್ತ ಸುದ್ದಿ

### ಕುಲಪತಿಗೆ ₹14 ಲಕ್ಷ ವಂಚನೆ: ಇಬ್ಬರ ಸೆರೆ

ಬ್ರಹ್ಮಪುರ (ಪಿಟಿಐ): ಒಡಿಶಾದ ಬ್ರಹ್ಮಪುರ ವಿಶ್ವವಿದ್ಯಾಲಯದ ಕುಲಪತಿ ಗೀತಾಂಜಲಿ ದಾಸ್ ಅವರಿಗೆ 'ಡಿಜಿಟಲ್ ಅರೆಸ್ಟ್' ಮೂಲಕ ₹14 ಲಕ್ಷ ವಂಚನೆ ಮಾಡಿದ ಪ್ರಕರಣ ಸಂಬಂಧ ಇಬ್ಬರನ್ನು ಗುಜರಾತ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದರು.

ಬಂಧಿತರನ್ನು ಭೂತಯ್ಯ ಜೇನಿಲ್ ಜಯಸುಖ್‌ಭಾಯಿ (23) ಮತ್ತು ವಿಶ್ವಜೀತ್ ಸಿನ್ಹಾ ಗೋಹಿಲ್ (21) ಎಂದು ಗುರುತಿಸಲಾಗಿದೆ ಎಂದರು.

ಆರೋಪಿಗಳು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ಸೋಗಿನಲ್ಲಿ ಗೀತಾಂಜಲಿ ಅವರನ್ನು ಸಂಪರ್ಕಿಸಿ, 'ನೀವು ಹಣ ಅಕ್ರಮ ವರ್ಗಾವಣೆಯಲ್ಲಿ ತೊಡಗಿದ್ದೀರಿ ಎಂಬ ಮಾಹಿತಿ ಇದೆ' ಎಂದು ಹೇಳಿದ್ದರು. ಫೆ. 14ರಿಂದ 22ರವರೆಗೆ 'ಡಿಜಿಟಲ್ ಅರೆಸ್ಟ್' ಮಾಡಿಕೊಂಡಿದ್ದರು. ತನಿಖೆಯ ಉದ್ದೇಶದಿಂದ ಅವರ ಬಳಿ ಇದ್ದ ಹಣವನ್ನು ನೀಡುವಂತೆ ಹೇಳಿದ್ದರು. ಅದರಂತೆ ಗೀತಾಂಜಲಿ ಅವರು ₹14 ಲಕ್ಷ ಹಣವನ್ನು ಆರೋಪಿಗಳಿಗೆ ವರ್ಗಾವಣೆ ಮಾಡಿದ್ದರು ಎಂದು ಪೊಲೀಸರು ತಿಳಿಸಿದರು.

ಬಳಿಕ ಆರೋಪಿಗಳು ₹80 ಸಾವಿರವನ್ನು ವಾಪಸ್ ನೀಡಿ, ಪರಿಶೀಲನೆ ಬಳಿಕ ಉಳಿದ ಹಣವನ್ನು ಹಿಂದಿರುಗಿಸುವುದಾಗಿ ತಿಳಿಸಿದ್ದರು. ಉಳಿದ ಹಣ ವಾಪಸ್ ಬರದಿದ್ದಾಗ ಫೆಬ್ರುವರಿ 24ರಂದು ಗೀತಾಂಜಲಿ ಅವರು ದೂರು ನೀಡಿದ್ದರು.

'ಆರೋಪಿಗಳು ದೇಶದ ವಿವಿಧ ಭಾಗಗಳಲ್ಲಿ ಈ ರೀತಿ ವಂಚನೆ ಮಾಡುವ ಗ್ಯಾಂಗ್‌ನ ಭಾಗವಾಗಿದ್ದು, ವಂಚಕರ ಜಾಲ ಪತ್ತೆಯಾಗಿ ತನಿಖೆಯು ಪ್ರಗತಿಯಲ್ಲಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಸರವಣ ವಿವೇಕ್ ಎಂ. ತಿಳಿಸಿದರು.

### ಇ.ಡಿ ನೋಟಿಸ್‌ಗೆ ಸಿಬಲ್ ತರಾಟೆ

ಕಪಿಲ್ ಸಿಬಲ್

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್‌ನ ಪ್ರಕರಣದಲ್ಲಿ ಸ್ಥಿರಾಸ್ತಿಯನ್ನು ತನ್ನ ಸುಪರ್ದಿಗೆ ಪಡೆಯಲು ನೋಟಿಸ್ ಜಾರಿಗೊಳಿಸಿದ ಕ್ರಮವನ್ನು 'ಪ್ರಜಾಪ್ರಭುತ್ವದ ಮೇಲಿನ ಹಲ್ಲೆ' ಎಂದು ರಾಜ್ಯಸಭೆ ಸದಸ್ಯ ಕಪಿಲ್ ಸಿಬಲ್ ಅವರು ಟೀಕಿಸಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ಅಸ್ಥಿರಗೊಳಿಸಲು ಆಡಳಿತಾರೂಢ ಬಿಜೆಪಿ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಮುಖಂಡರಾದ ಅವರು ಭಾನುವಾರ ಆರೋಪಿಸಿದರು.

'ಹೇಳಿಕೊಳ್ಳಲು ನಮ್ಮದು ಪ್ರಜಾಪ್ರಭುತ್ವದ ತಾಯಿ. ವಾಸ್ತವದಲ್ಲಿ ಅದು ನಿರಂಕುಶಾಡಳಿತದ ತಂದೆಯಂತೆ ಕಾಣುತ್ತಿದೆ. ಪ್ರತಿಪಕ್ಷಗಳನ್ನು ಹಕ್ಕಿಕ್ಕಲು ಬಿಜೆಪಿ ಹಿಂದೂ–ಮುಸ್ಲಿಂ ರಾಜಕಾರಣದ ಕಾರ್ಯಸೂಚಿ ಹೊಂದಿದೆ' ಎಂದರು.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷದ 'ನ್ಯಾಷನಲ್ ಹೆರಾಲ್ಡ್' ದಿನಪತ್ರಿಕೆ ಮತ್ತು ಅಸೋಸಿಯೇಟೆಡ್ ಜನರಲ್ ಲಿಮಿಟೆಡ್‌ಗೆ (ಎಜೆಎಲ್) ಸೇರಿದ ₹661 ಕೋಟಿ ಮೌಲ್ಯದ ಆಸ್ತಿ ಸುಪರ್ದಿಗೆ ಪಡೆಯಲು ಇ.ಡಿ ನೋಟಿಸ್ ಜಾರಿ ಮಾಡಿದ್ದನ್ನು ಉಲ್ಲೇಖಿಸಿ ಈ ಟೀಕೆ ಮಾಡಿದ್ದಾರೆ.

## ಗುಂಡಣ್ಣ

## ತಲೆಯಿಂದ 'ನಂದು' ತೆಗೆಯಬೇಕು!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

172

**ಬದಲಾಗಬೇಕಿರುವುದು** ಸೃಷ್ಟಿಯಲ್ಲ; ಸೃಷ್ಟಿ ಬದಲಾಗುವುದೂ ಇಲ್ಲ. ಬದಲಾಗಬೇಕಿರುವುದು ಸೃಷ್ಟಿಯನ್ನು ನೋಡುವ ನಮ್ಮ ದೃಷ್ಟಿ. ಒಬ್ಬ ಗುರುಗಳು ಇದ್ದರು. ಒಂದು ದಿನ ಅವರು ಗಿಡದ ಬಳಿ ಕುಳಿತಿದ್ದರು. ಒಬ್ಬ ಮಹಾರಾಜ ಅವರ ಬಳಿಗೆ ಬಂದ; 'ನೀವು ಬಹಳ ದೊಡ್ಡ ಯೋಗಿಗಳು ಎಂದು ನಾನು ಕೇಳಿದ್ದೇನೆ. ನಿಮ್ಮಲ್ಲಿ ಯಾವ ಆಸೆ, ಅಪೇಕ್ಷೆಗಳೂ ಇಲ್ಲ. ಬಹಳ ದಿನಗಳಿಂದ ಇಲ್ಲಿಯೇ ಇದ್ದೀರಿ. ನಿಮ್ಮಂತಹವರು ನಮ್ಮ ರಾಜ್ಯದ ರಾಜಗುರು ಆಗಬೇಕು. ನೀವು ನಮ್ಮ ರಾಜ್ಯಕ್ಕೆ ಬನ್ನಿರಿ' ಎಂದು ವಿನಂತಿಸಿದ. ತಕ್ಷಣವೇ ಒಪ್ಪಿಕೊಂಡ ಗುರುಗಳು 'ನಡಿ ಹೋಗೋಣ' ಎಂದರು. ಗುರುಗಳು ಅರಮನೆಗೆ ಹೋದರು. ಅವರನ್ನು ಒಂದು ದೊಡ್ಡ ಕೋಣೆಯಲ್ಲಿ ಉಳಿಸಿದರು. ಹತ್ತಾರು ಆಳುಗಳನ್ನು ನಿಯೋಜಿಸಿದರು. ಗುರುಗಳು ಏನು ಕೇಳಿದರೂ ಕೊಡಬೇಕು ಎಂದು ರಾಜ ಆದೇಶಿಸಿದ. ತಿಂಗಳಾನುಗಟ್ಟಲೆ ಗುರುಗಳು ಅಲ್ಲಿಯೇ ಉಳಿದರು. ರಾಜನಿಗೆ ಸಂಶಯ ಬಂತು. 'ದಿನಪೂರ್ತಿ ತಿಂದು ಉಂಡುಕೊಂಡು ಗುರುಗಳು ಅರಾಂ ಇದ್ದಾರೆ. ಮತ್ತೆ ನನಗೂ ಇವರಿಗೂ ಏನು ವ್ಯತ್ಯಾಸ' ಎಂಬ ಪ್ರಶ್ನೆ ಮೂಡಿತು. ನೇರವಾಗಿ ಗುರುಗಳ ಬಳಿಗೆ ಹೋಗಿ 'ಗುರುಗಳೇ, ನೀವು ರಾಜವಾಡೆಯಲ್ಲಿ ಇದ್ದೀರಿ. ನಮ್ಮ ಹಾಗೆ ರಾಜಾನ್ನ ಊಟ ಮಾಡುತ್ತಿದ್ದೀರಿ. ಮತ್ತೆ ನಮಗೂ ನಿಮಗೂ ಏನು ವ್ಯತ್ಯಾಸ ಎಂದು ಹೇಳಿ' ಎಂದು ಕೇಳಿದ. ಅದಕ್ಕೆ ಗುರುಗಳು 'ಬೆಳಿಗ್ಗೆ 6 ಗಂಟೆಗೆ ಬಾ ಹೇಳುತ್ತೀನಿ' ಎಂದರು.

ರಾಜ ಬೆಳಿಗ್ಗೆ ಬಂದ. ಗುರುಗಳು ಇವನನ್ನು ಕರೆದುಕೊಂಡು ಹೊರಟರು. ಹಾಗೆಯೇ ಸುಮಾರು 10 ಕಿಮೀ ನಡೆದರು. ರಾಜ ಮತ್ತೆ ಅದನ್ನೇ ಕೇಳಿದ; 'ನಮಗೂ ನಿಮಗೂ ಏನು ವ್ಯತ್ಯಾಸ' ಅಂತ. ಗುರುಗಳು ಏನೂ ಹೇಳದೇ ಹಾಗೆಯೇ ನಡೆಯುತ್ತಿದ್ದರು. ಮಧ್ಯಾಹ್ನ ಆಯಿತು. ಸಂಜೆ ಆಯಿತು. ನಡೆಯುತ್ತಲೇ ಇದ್ದರು. ಸಂಜೆ ವೇಳೆಗೆ ರಾಜ ಗುರುಗಳ ಕೈ ಹಿಡಿದು 'ನನ್ನ ಪ್ರಶ್ನೆಗೆ ಉತ್ತರ ಹೇಳಿ' ಎಂದು ಕೇಳಿದ. 'ಇನ್ನೂ ಎಷ್ಟು ದೂರ ಹೋಗೋದು? ಬೆಳಿಗ್ಗೆ 6 ಗಂಟೆಗೆ ಹೊರಟಿದ್ದೀವಿ. ಈಗ ಸಂಜೆ 6 ಗಂಟೆ ಆಯಿತು' ಎಂದ ರಾಜ. ಅದಕ್ಕೆ ಗುರುಗಳು 'ಹೀಗೆಯೇ ಹೋಗೋಣ' ಎಂದರು. 'ಹಾಗೆ ಹೋಗಲು ಆಗಲ್ಲ. ನಾನು ರಾಜ, ನನಗೆ ಒಂದು ರಾಜ್ಯ ಇದೆ. ಒಂದು ವ್ಯವಸ್ಥೆ ಇದೆ. ಪ್ರಜೆಗಳು ಇದ್ದಾರೆ. ಹೆಂಡತಿ ಮಕ್ಕಳೂ ಇದ್ದಾರೆ. ಅವರನ್ನೆಲ್ಲಾ ನೋಡಿಕೋ ಬೇಕು' ಎಂದು ಹೇಳಿದ ರಾಜ. ಆಗ ಗುರುಗಳು 'ಇದೇ ವ್ಯತ್ಯಾಸ ನೋಡು, ನೀನು ಹಿಂದೆ ನೋಡತಿ. ನಾನು ಮುಂದೆ ನೋಡಕೋತ ಹೋಗ್ತೀನಿ. ನಿನಗೆ ನಂದು ಎನ್ನುವುದು ಹಿಡಿದುಕೊಂಡಿದೆ. ನನಗೆ ನಂದು ಎನ್ನುವುದು ಅಳಿಸಿ ಹೋಗಿದೆ. ಇಷ್ಟೇ ವ್ಯತ್ಯಾಸ ನೋಡು' ಎಂದರು.

ಸಂತರಿಗೂ ನಮಗೂ ಏನು ವ್ಯತ್ಯಾಸ ಎಂದರೆ, ಅವರು ಭೂಮಿ ಮೇಲೆ ಇದ್ದಾರೆ. ಆದರೆ ನಂದು ಎನ್ನುವುದನ್ನು ಬಿಟ್ಟಿದ್ದಾರೆ. ಅದಕ್ಕೆ ಅವರು ಅರಾಂ ಇದ್ದಾರೆ. ನಾವೂ ಹಾಗೆಯೇ ನನ್ನದು ಎನ್ನುವುದನ್ನು ತಲೆಯಿಂದ ತೆಗೆದು ಹಾಕಬೇಕು. ಮನೆಯಲ್ಲಿ ಜಗಳ ಯಾಕೆ ಆಗಿದೆ ಹೇಳಿ. ಮನೆ ರಣರಂಗ ಆಗಿದ್ದು ಯಾತಕ್ಕೆ ಎಂದರೆ, ನಂದು ಎನ್ನುವುದರಿಂದಲೇ ಆಗಿದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 14, 2025

**ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ಚೈತ್ರ ಕೃಷ್ಣಪ್ರತಿಪದ್ ಗಂ. 08-26 ನಕ್ಷತ್ರ: ಸ್ವಾತಿ ಗಂ 24-14 ಯೋಗ: ವಜ್ರ ಗಂ. 22-38 ಕರಣ: ಕೌಲವ ಗಂ. 08-26, ಮೇಷ ಮಾಸದ 01 ನೇ ದಿನ, ಮಳೆನಕ್ಷತ್ರ: ಅಶ್ವಿನಿ 1.
**ರಾಹುಕಾಲ :** ಬೆಳಿಗ್ಗೆ 07-30 – 09-00. ಸೂರ್ಯೋದಯ : 06-22 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 14 ಶವ್ವಾಲ್, ದಿನ ವಿಶೇಷ : ಡಾ.ಬಿ. ಆರ್. ಅಂಬೇಡ್ಕರ್ ಜಯಂತಿ, ತಮಿಳು ಹೊಸ ವರ್ಷ ದಿನ, ನಿರಯನ ಕಲಿ.ಶಕ 5126 ಪ್ರಾರಂಭ.
**ಅದೃಷ್ಟ ಸಂಖ್ಯೆ :** 6, 3

**ಮೇಷ:** ಮಡದಿಯಲ್ಲಿ ಅನಗತ್ಯ ವಿಷಯಗಳನ್ನು ಪ್ರಸ್ತಾಪಿಸಿ ಭಿನ್ನಾಭಿಪ್ರಾಯ ಮೂಡದಂತೆ ಗಮನವಹಿಸಿ. ಉಳಿತಾಯದ ಹಣವನ್ನು ಮನೆಯ ನಿರ್ಮಾಣ ಕಾರ್ಯಗಳಿಗೆ ಬಳಸುವಿರಿ. ಅಲಂಕಾರಿಕ ವಸ್ತುಗಳ ಮಾರಾಟದಿಂದ ಆದಾಯ.

**ವೃಷಭ:** ಕೇಟರಿಂಗ್ ಸೇವೆಯನ್ನು ಮಾಡುವವರಿಗೆ ಅಧಿಕ ಲಾಭ ಇರಲಿದೆ. ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕ್ಷೇತ್ರಗಳಲ್ಲಿಯೂ ಹೂಡಿಕೆ ಸಲ್ಲದು. ಶ್ರೀರಾಮನಾಮದ ಜಪವನ್ನು ಮಾಡಿ.

**ಮಿಥುನ:** ಸಹೋದರಿಯರ ಆಗಮನ ಅಥವಾ ಭೇಟಿಯು ಸಂತಸ ತರುತ್ತದೆ. ಆಗು ಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಅನಿರೀಕ್ಷಿತ ಧನಾಗಮನದಿಂದ ಸಂತಸ ಮೂಡಲಿದೆ.

**ಕರ್ಕಾಟಕ:** ಬೇಕಾದ ರೀತಿಯಲ್ಲಿ ವ್ಯಕ್ತಿಯ ಮನಃ ಪರಿವರ್ತನೆ ಮಾಡುವ ವಿಚಾರದಲ್ಲಿ ಸಫಲರಾಗುತ್ತೀರಿ. ಉದರವ್ಯಾಧಿ ಅಥವಾ ಜೀರ್ಣಾಂಗಕ್ಕೆ ಸಂಬಂಧಿಸದಂತೆ ಅನಾರೋಗ್ಯ ಎದುರಾಗಬಹುದು.

**ಸಿಂಹ:** ಕಲಿಕೆಯಿಂದ ಆಫೀಸಿನ ಕೆಲಸಗಳನ್ನು ಇನ್ನಷ್ಟು ತಿಳಿದು ಕೊಳ್ಳುವ ಅವಕಾಶ ಸಿಗುತ್ತದೆ. ಕ್ರೀಡಾಪಟುಗಳಿಗೆ ಪುರಸ್ಕಾರ, ಅಭಿನಂದನೆಗಳು ಪ್ರಾಪ್ತಿ. ಮಗನಿಂದ ಮನಸ್ಸಿಗೆ ನೋವಾಗುವಂತಹ ಘಟನೆ ನಡೆಯಬಹುದು.

**ಕನ್ಯಾ:** ದೂರದ ಊರಿನಲ್ಲಿರುವ ಆಪ್ತರನ್ನು ಭೇಟಿ ಮಾಡುವ ಸಲುವಾಗಿ ಪ್ರಯಾಣವನ್ನು ಕೈಗೊಳ್ಳಬೇಕಾಗುತ್ತದೆ. ಅವಿವಾಹಿತರಿಗೆ ಮಾಂಗಲ್ಯ ಭಾಗ್ಯವಿದ್ದು, ಮದುವೆಯ ಮಾತುಕತೆಗಳನ್ನು ನಡೆಸಲಿದ್ದಾರೆ.

**ತುಲಾ:** ವ್ಯಾಪಾರಸ್ಥರು ಹೊಸ ತರದ ಯೋಜನೆಗಳನ್ನು ರೂಪಿಸಿಕೊಳ್ಳುವುದರಿಂದ ಗ್ರಾಹಕರ ಪರಿಚಯ ಆಗಬಹುದು. ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣ ಸಿಗಲಿದೆ. ಸಂಗೀತಕ್ಕೆ ಪ್ರೋತ್ಸಾಹ ಸಿಗಲಿದೆ.

**ವೃಶ್ಚಿಕ:** ಯಾರ ನೆರವೂ ಇಲ್ಲದೆ ಕಾರ್ಯಗಳನ್ನು ಸ್ವಯಂ ನಿರ್ವಹಿಸುವಂತಾಗಲಿದೆ. ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದ ರಕ್ಷಣಾ ದೇವತೆಯನ್ನು ಆರಾಧಿಸಿ. ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳು ನಿವಾರಣೆಯಾಗಲಿವೆ.

**ಧನು:** ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವಿರಿ.

**ಮಕರ:** ನೂತನ ಕೆಲಸಗಳ ಆರಂಭಕ್ಕೆ ಮತ್ತು ಒಡಂಬಡಿಕೆಗೆ ಸೂಕ್ತ ಕಾಲವಾಗಿರುತ್ತದೆ. ತೆಗೆದುಕೊಳ್ಳುವ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳು ಸಂತಸ ಹೊಂದುವರು.

**ಕುಂಭ:** ವಾಕ್ಚಾತುರ್ಯದಿಂದ ಕಾರ್ಯಗಳನ್ನು ನೆರವೇರಿಸಿಕೊಳ್ಳುವಿರಿ. ಉದಯೋನ್ಮುಖ ತಾರೆಯರಿಗೆ ಅವಕಾಶಗಳಿಂದ ಲಾಭವಿದೆ. ತತ್ವಜ್ಞಾನಿಗಳೊಡನೆ ಸುದೀರ್ಘ ಚರ್ಚೆ ನಡೆದು ಬುದ್ಧಿಮಟ್ಟ ಹೆಚ್ಚಲಿದೆ.

**ಮೀನ:** ಪಾಲುದಾರಿಕೆಯ ವ್ಯವಹಾರದ ಯೋಜನೆಯ ಬೆಳವಣಿಗೆಯಲ್ಲಿ ಸಂಬಂಧಿಸಿದವರಿಂದ ಚರ್ಚೆ ನಡೆಸದೆ ತೀರ್ಮಾನಗಳಿಗೆ ಬರುವುದು ಸರಿಯಲ್ಲ. ಸರ್ಕಾರಿ ಸಂಸ್ಥೆಗಳಲ್ಲಿ ಉಪನ್ಯಾಸ ಕೈಗೊಳ್ಳುವ ಅವಕಾಶವಿದೆ.

## ಪದಬಂಧ 6011

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಚಾರನ ಒಳ್ಳೆಯ ನಡತೆ (4)
3.ಮರದ ಬಳಿಯಿರುವ ಹೆಣ್ಣು ದುಂಬಿ (3)
4.ಭವ್ಯವಾದ ಆಕೃತಿ (4)
6.ತರಗತಿಯಲ್ಲಿ ಕಾಣಿಸಿದ ಗುಂಪು (2)
8.ಎಲ್ಲೆಯೊಳಗೆ ತೋರಿದ ಆತುರ (4)
9.ಅತಿಶಯವಾದ ಮೋಹ (3)
10.ತಾತ್ಸರ ಅಥವಾ ಕಡೆಗಣಿಸುವಿಕೆ (4)
11.ಭವನದ ಮೇಲಿಂದ ವೀಕ್ಷಿಸಿದ ಆಕಾಶ (2)
14.ಕನ್ನಡದವನ ಚಾಳೀಸು (4)
16.ಗರ ಬಡಿದಂತಿರುವ ಪಟ್ಟಣ (3)
17.ಭೇದಿಯಾಗಲು ಕೊಡುವ ಔಷಧ (4)

**ಮೇಲಿಂದ ಕೆಳಕ್ಕೆ**
1.ಗಂಗೆಯ ಮಗನಿವನು (4)
2.ನೇಸರನ ಇನ್ನೊಂದು ಹೆಸರು (2)
3.ಮಣ ಭಾರ ಹೊತ್ತು ಚಕ್ರಾಕಾರವಾಗಿ ಸುತ್ತುವುದು (3)
5.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
7.ಮೂರೆಳೆಯ ಸರ (3)
8.ಗಮನ ಕೊಟ್ಟರೂ ಸುಲಭವಲ್ಲದುದು ಇದು! (3)
10.ಈತ ತಿರುಪೆ ಬೇಡುವವನು (3)
12.ಭಯವೆಂಬ ಸ್ಥಾಯೀಭಾವದಿಂದ ಉಂಟಾಗುವ ರಸ (4)
13.ಚರವಲ್ಲದುದು ವರನ ಬಳಿಯಿದೆ! (3)
15.ಕವಿತೆ ಬರೆಯುವವನು (2)



## 6010ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಉಗ್ರಗಾಮಿ 3.ಅನುಭವಿ
5.ಮಧುಕರಿ 7.ಜಟಿಲ
8.ಪಾರಿತೋಷಕ
11.ಉತ್ತರ 12.ತ್ತುಕಕೀಹ
15.ಷಷ್ಟಿಪೂರ್ತಿ 16.ಪುರುಸೊತ್ತು

**ಮೇಲಿಂದ ಕೆಳಕ್ಕೆ:**
1.ಉತ್ತಮಣ 2.ಗಾಯಕ 3.ಅತ್ತೆ
4.ವಿಪುಲ 6.ರಿಪೇರಿ
7.ಜನಕ 8.ಪಾಮರ
9.ಷರತ್ತು 10.ಮೆಹನತ್ತು
11.ಉದ್ಘೋಷ 13.ಕದಿರು
14.ಸ್ಫೂರ್ತಿ

## ಸುಡೊಕು 6396

| | | | | | | | | |
|---|---|---|---|---|---|---|---|---|
| | 7 | | | 2 | | | | 5 |
| 3 | | 6 | 5 | | 8 | | | |
| | 4 | | | 7 | | 2 | | |
| | 6 | | | | 5 | | | |
| 9 | | 1 | | 8 | | | 6 | 2 |
| 4 | | | 2 | | | 1 | 3 | |
| | | 2 | 3 | | 7 | | 5 | |
| 7 | 1 | | | 5 | | 6 | | 3 |
| 5 | | 3 | 4 | | | | | 1 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 6395 ಸುಡೊಕು

| | | | | | | | | |
|---|---|---|---|---|---|---|---|---|
| 4 | 9 | 7 | 1 | 8 | 3 | 5 | 2 | 6 |
| 2 | 3 | 1 | 4 | 6 | 5 | 9 | 7 | 8 |
| 6 | 8 | 5 | 7 | 9 | 2 | 4 | 1 | 3 |
| 9 | 2 | 4 | 6 | 7 | 8 | 1 | 3 | 5 |
| 5 | 7 | 3 | 2 | 4 | 1 | 8 | 6 | 9 |
| 8 | 1 | 6 | 3 | 5 | 9 | 7 | 4 | 2 |
| 1 | 6 | 9 | 5 | 2 | 7 | 3 | 8 | 4 |
| 3 | 4 | 8 | 9 | 1 | 6 | 2 | 5 | 7 |
| 7 | 5 | 2 | 8 | 3 | 4 | 6 | 9 | 1 |

ಸೋಮವಾರ • ಏಪ್ರಿಲ್ 14, 2025 ಪ್ರಜಾವಾಣಿ

### ಅಮೆರಿಕ–ಚೀನಾ ನಡುವೆ ಸುಂಕ ಸಮರ: ಭಾರತದ ರಫ್ತಿಗೆ ಬಲ ನಿರೀಕ್ಷೆ

# ದೇಶೀಯ ಆಟಿಕೆಗಳಿಗೆ ವರದಾನ

ಕೋಲ್ಕತ್ತ (ಪಿಟಿಐ): ಅಮೆರಿಕ ಮತ್ತು ಚೀನಾ ನಡುವೆ ನಡೆಯುತ್ತಿರುವ ಸುಂಕ ಸಮರವು ಭಾರತದ ಆಟಿಕೆ ವಲಯಕ್ಕೆ ವರದಾನವಾಗಲಿದೆ. ಅಮೆರಿಕದ ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಳ್ಳಲು ಸುವರ್ಣಾವಕಾಶವನ್ನು ಕಲ್ಪಿಸಿದೆ ಎಂದು ಭಾರತದ ಆಟಿಕೆ ಸಂಘ ಹೇಳಿದೆ.

ಟ್ರಂಪ್ ಆಡಳಿತವು ಚೀನಾದ ಮೇಲೆ ಶೇ 145ರಷ್ಟು ಪ್ರತಿ ಸುಂಕ ಹೇರಿದೆ. ಇದು ಜಾಗತಿಕ ಆಟಿಕೆ ಮಾರುಕಟ್ಟೆಯ ವ್ಯಾಪಾರ ವಹಿವಾಟು ಹೊಸ ಆಯಾಮದತ್ತ ಹೊರಳಲು ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿದೆ.

ಅಮೆರಿಕವು ಆಮದು ಮಾಡಿಕೊಳ್ಳುವ ಆಟಿಕೆಗಳ ಪೈಕಿ ಚೀನಾದ ಪಾಲು ಶೇ 77ರಷ್ಟಿದೆ. ಸದ್ಯ ಚೀನಾ ಮೇಲೆ ಅತಿಹೆಚ್ಚು ಸುಂಕ ವಿಧಿಸಿರುವುದರಿಂದ ಆಟಿಕೆಗಳ ರಫ್ತು ಪ್ರಮಾಣದಲ್ಲಿ ಇಳಿಕೆಯಾಗಲಿದ್ದು, ಇತರೆ ದೇಶಗಳ ರಫ್ತಿಗೆ ಹೊಸ ದಾರಿ ಸೃಷ್ಟಿಸಿದೆ.

‘ಆಟಿಕೆ ರಫ್ತಿನಲ್ಲಿ ಸೃಷ್ಟಿಯಾಗಿರುವ ನಿರ್ವಾತ ತುಂಬಲು ಭಾರತಕ್ಕೆ ಸದವಕಾಶ ಒದಗಿ ಬಂದಿದೆ’ ಎಂದು ಭಾರತದ ಆಟಿಕೆ ಸಂಘದ ಅಧ್ಯಕ್ಷ ಅಕ್ಷಯ್ ಹೇಳಿದ್ದಾರೆ.

‘ಅಮೆರಿಕದ ಆಟಿಕೆ ಮಾರುಕಟ್ಟೆಯ ಮೌಲ್ಯ ₹3.58 ಲಕ್ಷ ಕೋಟಿ ಆಗಿದೆ. ಚೀನಾದ ಆಟಿಕೆಗಳಿಗೆ ನಮ್ಮಲ್ಲಿ ತಯಾರಿಸುವ ಆಟಿಕೆಗಳು ಗುಣಮಟ್ಟ ಮತ್ತು ಬೆಲೆಯಲ್ಲಿ ಸ್ಪರ್ಧೆ ಒಡ್ಡುತ್ತವೆ. ಹಾಗಾಗಿ, ದೇಶೀಯ ತಯಾರಕರಿಗೆ ಸಾಕಷ್ಟು ಅವಕಾಶ ಸೃಷ್ಟಿಯಾಗಿದೆ’ ಎಂದು ವಿವರಿಸಿದ್ದಾರೆ.

ಭಾರತದ ಆಟಿಕೆ ರಫ್ತು ಪ್ರಮಾಣವು ಗಣನೀಯವಾಗಿ ಏರಿಕೆಯಾಗುತ್ತಿದೆ. 2014–15ರಲ್ಲಿ ಆಟಿಕೆ ರಫ್ತು ಮೌಲ್ಯ ₹344 ಕೋಟಿ ಇತ್ತು. 2023–24ರಲ್ಲಿ ₹1,308 ಕೋಟಿಗೆ ಏರಿಕೆಯಾಗಿದೆ. ಇತ್ತೀಚೆಗೆ ಚೀನಾದಿಂದ ದೇಶಕ್ಕೆ ಆಮದಾಗುವ ಆಟಿಕೆಗಳ ಪ್ರಮಾಣ ಕಡಿಮೆಯಾಗಿದೆ.

‘ಸರ್ಕಾರದ ಕಠಿಣ ನೀತಿಗಳ ಹೊರತಾಗಿಯೂ ದೇಶಕ್ಕೆ ಚೀನಾದಿಂದ ಆಟಿಕೆಗಳ ಪೂರೈಕೆ ಮುಂದುವರಿದಿದೆ. ಟ್ರಂಪ್ ವಿಧಿಸಿರುವ ಪ್ರತಿ ಸುಂಕದಿಂದಾಗಿ ಚೀನಾದ ಉತ್ಪನ್ನಗಳು ದೇಶದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಲಗ್ಗೆ ಇಡುವ ಸಾಧ್ಯತೆಯಿದೆ. ಇದು ದೇಶೀಯ ಮಾರುಕಟ್ಟೆ ಮತ್ತು ಲಾಭದ ಮೇಲೆ ಪರಿಣಾಮ ಬೀರಲಿದೆ’ ಎಂದು ಅಕ್ಷಯ್ ಆತಂಕ ವ್ಯಕ್ತಪಡಿಸಿದ್ದಾರೆ.

ಭಾರತೀಯ ಪ್ರಮಾಣೀಕರಣ ಸಂಸ್ಥೆಯ (ಬಿಐಎಸ್) ಮಾನದಂಡ ಪಾಲಿಸದ ಆಟಿಕೆಗಳು ದೇಶದೊಳಗೆ ಪ್ರವೇಶಿಸದಂತೆ ಕೇಂದ್ರವು ಕಠಿಣ ಕ್ರಮ ರೂಪಿಸಬೇಕಿದೆ. ಬಂದರುಗಳಲ್ಲಿ ಈ ಬಗ್ಗೆ ನಿಗಾವಹಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.


ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



ಮೊದಲನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
(ಶ್ರೀ ಕದರಯ್ಯನವರ ಧರ್ಮಪತ್ನಿ)
ದೊಡ್ಡಕಲ್ಲಸಂದ್ರ, ಬೆಂಗಳೂರು–560062

“ ನೀವು ನಮ್ಮನ್ನು ಅಗಲಿ
ಒಂದು ವರ್ಷ ತುಂಬುತ್ತದೆ
ನಿಮ್ಮ ನೆನಪು
ನಮ್ಮ ಮನದಲ್ಲಿ ಹಸಿರಾಗಿದೆ
ನಿಮ್ಮ ಆದರ್ಶಗಳೇ
ನಮಗೆ ದಾರಿದೀಪ ”

ಇಂತಿ
ಶ್ರೀ ಕದರಯ್ಯ, ಮಕ್ಕಳು ಮತ್ತು ಮೊಮ್ಮಕ್ಕಳು
Ph: 9945312846, 9845051449


## ಸಂಕ್ಷಿಪ್ತ ಸುದ್ದಿ

### ₹52 ಕೋಟಿ ಮೌಲ್ಯದ ಮಾದಕ ವಸ್ತು ವಶ

ನವದೆಹಲಿ (ಪಿಟಿಐ): ಮಿಜೋರಾಂನ ಐಜ್ವಾಲ್ ಹೊರವಲಯದಲ್ಲಿ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, 52.67 ಕೆ.ಜಿ ತೂಕದಷ್ಟು ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಕ್ಕೆ ಪಡೆದಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈ ಮಾದಕ ವಸ್ತುವಿನ ಮೌಲ್ಯ ₹52.67 ಕೋಟಿ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಭಾನುವಾರ ತಿಳಿಸಿದೆ.

ಮ್ಯಾನ್ಮಾರ್‌ನಿಂದ ಮಿಜೋರಾಂಗೆ ಲಾರಿಯಲ್ಲಿ ಈ ಮಾದಕ ವಸ್ತುವನ್ನು ಸಾಗಣೆ ಮಾಡಲಾಗುತ್ತಿತ್ತು. ಅಧಿಕಾರಿಗಳು ತಪಾಸಣೆ ನಡೆಸಿದ ವೇಳೆ ಪತ್ತೆಯಾಗಿದೆ ಎಂದು ಹೇಳಿದೆ.

ಈ ಲಾರಿಯು ನಾಗಾಲ್ಯಾಂಡ್‌ನಲ್ಲಿ ನೋಂದಣಿಯಾಗಿದ್ದು, ಚಾಲಕ ಮತ್ತು ಸಹಾಯಕನನ್ನು ಬಂಧಿಸಲಾಗಿದೆ. ಇಬ್ಬರ ಮೇಲೆ ಮಾದಕ ದ್ರವ್ಯ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುವ ವಸ್ತುಗಳ ಕಾಯ್ದೆ 1985ರ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದೆ. ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ ಡಿಆರ್‌ಐ ಅಧಿಕಾರಿಗಳು ಈಶಾನ್ಯ ಭಾರತ ಭಾಗದಲ್ಲಿ 148 ಕೆ.ಜಿ ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಕ್ಕೆ ಪಡೆದಿದ್ದಾರೆ.

### ಪಿಎನ್‌ಬಿ: ಹೊಸ ಠೇವಣಿ ಯೋಜನೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ತನ್ನ 131ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಗ್ರಾಹಕರಿಗೆ ಅನುಕೂಲ ಕಲ್ಪಿಸಲು 34 ಹೊಸ ಯೋಜನೆಗಳನ್ನು ಪ್ರಕಟಿಸಿದೆ.

ಈ ಪೈಕಿ 12 ಗ್ರಾಹಕ ಕೇಂದ್ರಿತ ಠೇವಣಿ ಯೋಜನೆಗಳಾಗಿವೆ. ಡಿಜಿಟಲ್ ವ್ಯವಸ್ಥೆಯಡಿ ಸಾಲ ಸೌಲಭ್ಯ, ಡಿಮ್ಯಾಟ್ ಖಾತೆ ತೆರೆಯುವುದು ಹಾಗೂ ವಾಟ್ಸ್‌ಆ್ಯಪ್ ಮೂಲಕ ಸ್ಥಿರ ಠೇವಣಿಗೆ ಹೆಸರು ನೋಂದಣಿ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ವೇತನ ವರ್ಗ, ಮಹಿಳೆಯರು, ರಕ್ಷಣಾ ಸಿಬ್ಬಂದಿ, ರೈತರು, ಎನ್‌ಆರ್‌ಐ, ಹಿರಿಯ ನಾಗರಿಕರು, ಪಿಂಚಣಿದಾರರು, ವಿದ್ಯಾರ್ಥಿಗಳು ಮತ್ತು ಯುವಜನತೆಗೆ ಅನುಕೂಲವಾಗುವಂತೆ ಠೇವಣಿ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಹೇಳಿದೆ.

ಗ್ರಾಹಕರ ಪ್ರತಿಕ್ರಿಯೆಗಾಗಿ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಪರಿಚಯಿಸಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಗಳ ಬಗ್ಗೆ ಮಾಹಿತಿ ಒದಗಿಸುವ ಕಾರ್ಯಕ್ಕೂ ಚಾಲನೆ ನೀಡಲಾಗಿದೆ ಎಂದು ವಿವರಿಸಿದೆ.

# ಬಡ್ಡಿ ಹೊರೆ ಎಷ್ಟು ತಗ್ಗಲಿದೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಕಡಿತಗೊಳಿಸುವ ಮೂಲಕ ಸಾಲ ಪಡೆದಿರುವ ಗ್ರಾಹಕರಿಗೆ ಸಿಹಿಸುದ್ದಿ ನೀಡಿದೆ. ಪ್ರಸ್ತುತ ರೆಪೊ ದರ ಶೇ 6.25ರಿಂದ ಶೇ 6ಕ್ಕೆ ಇಳಿಕೆಯಾಗಿದೆ. ಆರ್‌ಬಿಐನ ಈ ತೀರ್ಮಾನದಿಂದ ಈಗಾಗಲೇ ಸಾಲ ಪಡೆದಿರುವ ಗ್ರಾಹಕರಿಗೆ ಬಡ್ಡಿದರ ಇಳಿಕೆಯ ಲಾಭ ದೊರಕಿದರೆ, ಹೊಸದಾಗಿ ಸಾಲ ಪಡೆದು-ಕೊಳ್ಳುವವರಿಗೆ ಬಡ್ಡಿ ಹೊರೆ ಕೊಂಚ ತಗ್ಗಲಿದೆ.

ಆರ್‌ಬಿಐ ರೆಪೊ ದರವನ್ನು 2020ರ ಮೇ ತಿಂಗಳಿನಿಂದ 2022ರ ಏಪ್ರಿಲ್ ಅವಧಿಯಲ್ಲಿ ಶೇ 4ಕ್ಕೆ ಇಳಿಕೆ ಮಾಡಿತ್ತು. ನಂತರ 2022ರ ಏಪ್ರಿಲ್‌ನಿಂದ 2023ರ ಫೆಬ್ರುವರಿ ಅವಧಿಯಲ್ಲಿ ಹಂತ ಹಂತವಾಗಿ ಶೇ 6.5ರ ವರೆಗೆ ಏರಿಕೆ ಮಾಡಿತ್ತು. ಪ್ರಸಕ್ತ ವರ್ಷದ ಫೆಬ್ರುವರಿಯಲ್ಲಿ ಶೇ 0.25ರಷ್ಟು ಮತ್ತು ಈ ತಿಂಗಳಿನಲ್ಲಿ ಶೇ 0.25ರಷ್ಟು ಬಡ್ಡಿದರ ಇಳಿಕೆ ಮಾಡಿದೆ. ಬನ್ನಿ ರೆಪೊ ದರ ಇಳಿಕೆಯಿಂದ ಸಾಲ ಪಡೆದ ಗ್ರಾಹಕರಿಗೆ ಎಷ್ಟರಮಟ್ಟಿಗೆ ಬಡ್ಡಿ ಹೊರೆ ತಗ್ಗುತ್ತದೆ ಎನ್ನುವುದನ್ನು ಪ್ರಾಯೋಗಿಕ ಉದಾಹರಣೆಗಳ ಮೂಲಕ ತಿಳಿಯೋಣ.

**ರೆಪೊ ದರ ಎಂದರೇನು?:** ಯಾವುದೇ ಬ್ಯಾಂಕ್‌ಗೆ ಎರಡು ರೀತಿಯಲ್ಲಿ ಬಂಡವಾಳ ಸಿಗುತ್ತದೆ. ಒಂದನೆಯದ್ದು ಗ್ರಾಹಕರು ಇಡುವ ಠೇವಣಿ ಮೂಲಕ; ಎರಡನೆಯದ್ದು ಭಾರತೀಯ ರಿಸರ್ವ್ ಬ್ಯಾಂಕ್ ಮೂಲಕ. ಗ್ರಾಹಕರಿಂದ ಪಡೆದ ಠೇವಣಿಗಳಿಗೆ ಬ್ಯಾಂಕ್ ಕಾಲ ಕಾಲಕ್ಕೆ ನಿಗದಿತ ಬಡ್ಡಿ ನೀಡಬೇಕಾಗುತ್ತದೆ. ಅದೇ ರೀತಿ ಆರ್‌ಬಿಐನಿಂದ ಪಡೆದ ಸಾಲಕ್ಕೂ ಬ್ಯಾಂಕ್‌ಗಳು ಬಡ್ಡಿ ನೀಡಬೇಕಾಗುತ್ತದೆ.

ಸರಳವಾಗಿ ಹೇಳುವುದಾದರೆ ಆರ್‌ಬಿಐನಿಂದ ಬ್ಯಾಂಕ್‌ಗಳು ಪಡೆದುಕೊಳ್ಳುವ ಸಾಲಕ್ಕೆ ನಿಗದಿ ಮಾಡುವ ಬಡ್ಡಿದರವೇ ರೆಪೊ ದರ. ದೇಶದ ಅರ್ಥ ವ್ಯವಸ್ಥೆಯ ಸ್ಥಿತಿಗತಿಗೆ ಅನುಗುಣವಾಗಿ ಆರ್‌ಬಿಐ, ರೆಪೊ ದರ ಏರಿಸುವ ಅಥವಾ ಇಳಿಸುವ ನಿರ್ಧಾರ ತೆಗೆದುಕೊಳ್ಳುತ್ತದೆ. ರೆಪೊ ದರ ತಗ್ಗಿದರೆ ಗೃಹ, ವಾಹನ, ವೈಯಕ್ತಿಕ ಸಾಲ ಸೇರಿ ಪ್ರಮುಖ ಸಾಲಗಳ ಬಡ್ಡಿದರ ಇಳಿಕೆಯಾಗುತ್ತದೆ.

**ಗೃಹ ಸಾಲದ ಇಎಂಐ ಎಷ್ಟು ತಗ್ಗಲಿದೆ?:** ಉದಾಹರಣೆಗೆ ವ್ಯಕ್ತಿಯೊಬ್ಬರು ₹50 ಲಕ್ಷ ಸಾಲವನ್ನು 20 ವರ್ಷದ ಅವಧಿಗೆ ಶೇ 9ರ ಬಡ್ಡಿದರದಲ್ಲಿ ಪಡೆದಿದ್ದು, ಅವರ ತಿಂಗಳ ಇಎಂಐ ಮೊತ್ತ ₹44,986 ಅಂದುಕೊಳ್ಳೋಣ. ಇದೀಗ ಆರ್‌ಬಿಐ ಎರಡು ಬಾರಿ (25 + 25 = 50) ಬಡ್ಡಿ ಇಳಿಕೆ ಮಾಡಿರುವ ಕಾರಣ ಗೃಹ ಸಾಲದ ಬಡ್ಡಿದರ ಶೇ 8.5ಕ್ಕೆ ಇಳಿಕೆಯಾಗುತ್ತದೆ ಎಂದು ಭಾವಿಸೋಣ. ಅದರಂತೆ ಇಎಂಐ ಮೊತ್ತ ₹44,986ರಿಂದ ₹43,391ಕ್ಕೆ ಇಳಿಕೆಯಾಗುತ್ತದೆ. ಅಂದರೆ ತಿಂಗಳ ಇಎಂಐ ಮೊತ್ತದಲ್ಲಿ ₹1,595 ತಗ್ಗಲಿದೆ. ವರ್ಷಕ್ಕೆ ₹19,140 ಉಳಿತಾಯವಾದರೆ, ಸಂಪೂರ್ಣ ಸಾಲದ ಅವಧಿಗೆ ಈ ಬಡ್ಡಿದರ ಮುಂದುವರಿದರೆ ಸುಮಾರು ₹3.8 ಲಕ್ಷ ಉಳಿತಾಯವಾಗುತ್ತದೆ.

**ಈ ಅಂಶಗಳು ಗೊತ್ತಿರಲಿ?:** ರೆಪೊ ದರದಲ್ಲಿ ಸಾಲ ಪಡೆದವರಿಗೆ ಬಡ್ಡಿದರ ಇಳಿಕೆಯ ಅನುಕೂಲ ಸಿಗಲಿದೆ. ಯಾವಾಗ ಬಡ್ಡಿದರ ತಗ್ಗಿಸಬೇಕು ಎನ್ನುವುದನ್ನು ಬ್ಯಾಂಕ್‌ಗಳು ಆರ್‌ಬಿಐ ನಿಯಮಗಳಿಗೆ ಅನುಗುಣವಾಗಿ ತೀರ್ಮಾನಿಸುತ್ತವೆ. ಎಂಸಿಎಲ್‌ಆರ್ (ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ ಬೇಸ್ಡ್ ಲೆಂಡಿಂಗ್ ರೇಟ್) ಅಡಿ ಸಾಲ ಪಡೆದಿದ್ದರೆ ಬಡ್ಡಿದರ ಇಳಿಕೆಯ ವರ್ಗಾವಣೆಗೆ ಕೊಂಚ ಸಮಯ ಹಿಡಿಯಲಿದೆ.

ರೆಪೊ ದರ ಇಳಿಕೆ ಮಾಡಿದಾಗ ಗ್ರಾಹಕನಿಗೆ ಎರಡು ಆಯ್ಕೆ ಸಿಗುತ್ತವೆ. ಒಂದನೆಯದ್ದು ಬಡ್ಡಿದರ ಇಳಿಕೆಗೆ ಅನುಗುಣವಾಗಿ ಸಾಲದ ಮಾಸಿಕ ಕಂತು (ಇಎಂಐ) ತಗ್ಗಿಸಿಕೊಳ್ಳುವುದು. ಎರಡನೆಯದ್ದು ಇಎಂಐ ಮೊತ್ತ ತಗ್ಗಿಸದೆ ಸಾಲದ ಅವಧಿಯಲ್ಲಿ ತಗ್ಗಿಸುವುದು. ಆದರೆ, ನಿಮಗೆ ತಿಳಿದಿರಲಿ. ಇಎಂಐ ಮೊತ್ತ ಎಂದಿನಂತೆ ಮುಂದುವರಿಸಿದರೆ ಸಾಲದ ಅವಧಿ ಇಳಿಕೆಯಾಗಿ ಬೇಗ ಸಾಲ ತೀರಿಸಲು ಅನುಕೂಲವಾಗಲಿದೆ. ಹಾಗಾಗಿ, ಸಾಲದ ಅವಧಿ ಕಡಿಮೆ ಮಾಡಿಕೊಳ್ಳುವುದೇ ಒಳ್ಳೆಯ ಆಯ್ಕೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

### ಚೇತರಿಕೆ ಕಂಡ ಷೇರು ಸೂಚ್ಯಂಕಗಳು

ಏಪ್ರಿಲ್ 11ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಅಲ್ಪ ಪ್ರಮಾಣದಲ್ಲಿ ಕುಸಿತ ದಾಖಲಿಸಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಪ್ರತಿ ಸುಂಕ ಜಾರಿಯನ್ನು ತಾತ್ಕಾಲಿಕವಾಗಿ ಮುಂದೂಡಿರುವುರಿಂದ ಶುಕ್ರವಾರ ಮಾರುಕಟ್ಟೆ ಭಾರಿ ಚೇತರಿಕೆ ಕಂಡಿತು.

ಆದರೆ, ವಾರದ ಗಳಿಕೆ ಅಂತ ನೋಡಿದಾಗ ಮಾರುಕಟ್ಟೆ ಸೂಚ್ಯಂಕಗಳು ಕೊಂಚ ಹಿನ್ನಡೆ ಅನುಭವಿಸಿವೆ. 75,157 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.28ರಷ್ಟು ಕುಸಿತ ದಾಖಲಿಸಿದ್ದರೆ, 22,828 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.33ರಷ್ಟು ಕುಸಿದಿದೆ. ಇನ್ನು ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.29ರಷ್ಟು ಇಳಿಕೆ ಕಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಮಾತ್ರ ಶೇ 0.13ರಷ್ಟು ಗಳಿಸಿಕೊಂಡಿದೆ.

ವಾರದ ಅವಧಿಯಲ್ಲಿ ವಲಯವಾರು ನೋಡಿದಾಗ ಎಫ್ಎಂಸಿಜಿ ಶೇ 3.55, ಮಾಧ್ಯಮ ಶೇ 1.03 ಮತ್ತು ಎನರ್ಜಿ ಶೇ 0.32ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಲೋಹ ವಲಯ ಶೇ 2.93, ಮಾಹಿತಿ ತಂತ್ರಜ್ಞಾನ ಶೇ 2.3, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.53, ಬ್ಯಾಂಕ್ ನಿಫ್ಟಿ ಸೂಚ್ಯಂಕ ಶೇ 0.97, ಫೈನಾನ್ಸ್ ಶೇ 0.88, ಸೇವಾ ವಲಯ ಶೇ 0.65, ಫಾರ್ಮಾ ಶೇ 0.48 ಮತ್ತು ಆಟೊ ವಲಯ ಶೇ 0.28ರಷ್ಟು ಕುಸಿದಿವೆ.

**ಗಳಿಕೆ–ಇಳಿಕೆ:** ವಾರದ ಲೆಕ್ಕಾಚಾರದಲ್ಲಿ ನೋಡಿದರೆ ನಿಫ್ಟಿಯಲ್ಲಿ ಹಿಂದೂಸ್ಥಾನ್ ಯುನಿಲಿವರ್ ಶೇ 5.44, ಟೈಟನ್ ಶೇ 4.99, ನೆಸ್ಲೆ ಇಂಡಿಯಾ ಶೇ 4.23, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 3.54, ಜಿಯೊ ಫೈನಾನ್ಶಿಯಲ್ ಶೇ 3.51, ಸಿಪ್ಲಾ ಶೇ 3.28, ಎಟರ್ನಲ್ ಲಿಮಿಟೆಡ್ ಶೇ 3.06, ಐಟಿಸಿ ಶೇ 2.99, ಎನ್‌ಟಿಪಿಸಿ ಶೇ 2.64, ಬಜಾಜ್ ಫೈನಾನ್ಸ್ ಶೇ 2.36, ಐಷರ್ ಮೋಟರ್ಸ್ ಶೇ 2.18, ಒಎನ್‌ಜಿಸಿ ಶೇ 1.92ರಷ್ಟು ಗಳಿಸಿಕೊಂಡಿವೆ.

ಟ್ರೆಂಟ್ ಶೇ 14.05, ಟಾಟಾ ಸ್ಟೀಲ್ ಶೇ 4.98, ಎಲ್ ಆ್ಯಂಡ್ ಟಿ ಶೇ 4.36, ಟಾಟಾ ಮೋಟರ್ಸ್ ಶೇ 3.06, ಟೆಕ್ ಮಹೀಂದ್ರ ಶೇ 2.99, ಇನ್ಫೊಸಿಸ್ ಶೇ 2.87, ವಿಪ್ರೊ ಶೇ 2.62, ಶ್ರೀರಾಮ್ ಫೈನಾನ್ಸ್ ಶೇ 2.55, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 2.33, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 2.14, ಟಿಸಿಎಸ್ ಶೇ 2.04 ಮತ್ತು ಎಕ್ಸಿಸ್ ಬ್ಯಾಂಕ್ ಶೇ 1.83ರಷ್ಟು ಕುಸಿದಿವೆ.

**ಮುನ್ನೋಟ:** ಈ ವಾರ ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ, ವಿಪ್ರೊ, ಏಂಜಲ್ ಒನ್, ಇನ್ಫೊಸಿಸ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್, ಎಚ್‌ಡಿಎಫ್‌ಸಿ ಎಎಂಸಿ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಯೆಸ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಪ್ರತಿ ಸುಂಕ ಜಾರಿಗೆ ನೀಡಿರುವ ವಿರಾಮದ ಬೆಳವಣಿಗೆ, ಇನ್ನಿತರ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.


ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

WANTED ELECTRICIANS- ITI electrical, Supervisors- DEEE, MIS executives- Any graduate. Work location: Bangalore. Sri Manjunath Technical Services. Mob: 9959087575/ 8106223344

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್`ಸೌಲಭ್ಯವಿದೆ. 6366625808, 6366627808.

ಭವಿಷ್ಯ

Astrology

★॥ನಂ.1.ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ ವಶೀಕರಣ ಸಂಭೋಗ ವಶೀಕರಣ ನೋಡುವ_ಮೂಲಕ ಹೆಸರಿನ_ಮೂಲಕ ಹನ್ನೊಂದು ಗಂಟೆಯಲ್ಲಿ ಶಾಶ್ವತ ಪರಿಹಾರ. ಪಂಡಿತ್. ಸಾಯಿಭಟ್. 9900222591

ಪ್ರವಾಸ

Travel Agencies

19/5/2025 ರಿಂದ 11 ದಿನಗಳು ನೇಪಾಳ ಪಶುಪತಿನಾಥ ಮುಕ್ತಿನಾಥ್ ಕಾಶಿ ಗಯಾ ಅಯೋಧ್ಯೆ ವಿಮಾನದಲ್ಲಿ 45000/ ಶ್ರೀರಾಮ್ ಟೂರ್ಸ್ 9108933383/ 9606600383

Travel

★ಶ್ರೇಯಸ್ ಟೂರ್ಸ್★ 18.04.2025,09.05.2025 31.05.2025 9ದಿನಗಳು ಈಶಾನ್ಯ ಭಾರತದ ನಾಗಲ್ಯಾಂಡ್ ಮಣಿಪುರ,ಮಿಜೋರಾಂ,ತ್ರಿಪುರ ರಾಜ್ಯದ ಧಿಮಾಪುರ ಕೋಹಿಮಾ,ಇಂಪಾಲ,ಮೋರೆ ಐಜ್ವಲ್,ಉನಕೋಟಿ,ಅಗರ್ತಲ ಮಾತಾಬರಿ,ನೀರ್‌ಮಹಲ್. 05.07.2025 ಅಮರನಾಥ್, ಅಮೃತ್‌ಸರ್,ವೈಷ್ಣೋದೇವಿ, ಲಡಾಕ್ 5/11/13ದಿನಗಳು. 14.05.2025 12ದಿನಗಳು ಆದಿಕೈಲಾಸ ಓಂಪರ್ವತ ಪಾತಾಳ,ಭುವನೇಶ್ವರ,ಜಾಗೇಶ್ವರ ಬಾಬಾಗುಹೆ,ದಾರ್ಚುಲಾ ಮುನ್ಸಿಯಾರಿ.10.06.2025 10ದಿನಗಳು ನೇಪಾಳ ರಾಷ್ಟ್ರ ಪ್ರವಾಸ.29.05.2025, 12.06.2025 ಚಾರ್‌ದಾಮ್ ಯಾತ್ರೆ 12ದಿನಗಳು 9743351212 9206979202 9606032154

14 ದಿನಗಳ ಚಾರ್ಧಾಮ್`ಯಾತ್ರ 29.5.2025. 8 ದಿನಗಳ ಅಮರನಾಥ್`ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಜುಲೈ 3 ರಿಂದ 13 ದಿನಗಳು ಅಮರ್ನಾಥ್, ಶ್ರೀನಗರ, ಅಮೃತಸರ, ವೈಷ್ಣೋಮಾತ, ಕುರುಕ್ಷೇತ್ರ. ಶ್ರೀಗಂಗಾ ಟೂರಿಸ್ಟ್ ಸಂಪರ್ಕಿಸಿ:9480253807, 8105522123.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
www.dhclassifieds.com
BOOK NOW
@ 750/-* PER SQCM
SINGLE / DOUBLE / MULTIPLE COLUMN
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | +91 9731810277


### ಕಚ್ಚಾ ಸೋಯಾಬೀನ್ ತೈಲ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ತೈಲ ಮಾರುಕಟ್ಟೆ ವರ್ಷದ (ನವೆಂಬರ್‌ನಿಂದ ಅಕ್ಟೋಬರ್) ಮೊದಲ ಐದು ತಿಂಗಳ ಅವಧಿಯಲ್ಲಿ 19.11 ಲಕ್ಷ ಟನ್ ಕಚ್ಚಾ ಸೋಯಾಬೀನ್ ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ತಿಳಿಸಿದೆ.

2023–24ನೇ ತೈಲ ಮಾರುಕಟ್ಟೆ ವರ್ಷದ ಇದೇ ಅವಧಿಯಲ್ಲಿ 8.82 ಲಕ್ಷ ಟನ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣ 2 ಪಟ್ಟುಗಿಂತಲೂ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಚ್ಚಾ ಮತ್ತು ಸಂಸ್ಕರಿಸಿದ ತಾಳೆ ಎಣ್ಣೆ ಆಮದು ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದರಿಂದ ಕಚ್ಚಾ ಸೋಯಾಬೀನ್ ತೈಲದ ಆಮದು ಹೆಚ್ಚಳವಾಗಿದೆ ಎಂದು ತಿಳಿಸಿದೆ. ಅರ್ಜೆಂಟೀನಾ, ಬ್ರೆಜಿಲ್ ಮತ್ತು ರಷ್ಯಾದಿಂದ ಭಾರತಕ್ಕೆ ಈ ತೈಲವು ಆಮದಾಗುತ್ತದೆ.

### ಅಣುಶಕ್ತಿ ಮೂಲಸೌಲಭ್ಯ ಅಭಿವೃದ್ಧಿ ಭಾರತಕ್ಕೆ ಸಹಕಾರ ನೀಡಲು ಸಿದ್ಧ

ನ್ಯೂಯಾರ್ಕ್ (ಪಿಟಿಐ): ‘ಅಣುಶಕ್ತಿ ಕ್ಷೇತ್ರದಲ್ಲಿ ಸೌಲಭ್ಯ ಅಭಿವೃದ್ಧಿಗೆ ಭಾರತಕ್ಕೆ ಸಹಕಾರ ನೀಡಲು ಅಮೆರಿಕ ಆಸಕ್ತವಾಗಿದೆ. ಉಭಯ ದೇಶಗಳು ಈ ಕ್ಷೇತ್ರದಲ್ಲಿ ಸಮಾನ ಆಸಕ್ತಿ ಹೊಂದಿವೆ’ ಎಂದು ಅಮೆರಿಕದ ಹಾಲ್ಟೆಕ್ ಸಂಸ್ಥೆಯ ಸಿಇಒ ಡಾ. ಕ್ರಿಸ್ ಸಿಂಗ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಪರಸ್ಪರ ಸಹಕಾರ ಕುರಿತು ಪ್ರಗತಿಯನ್ನು ಕಾಣುವ ವಿಶ್ವಾಸ ತಮಗಿದೆ ಎಂದು ಕ್ರಿಸ್ ಸಿಂಗ್ ಹೇಳಿದರು.

ಶುದ್ಧ ಇಂಧನ ಕ್ಷೇತ್ರದಲ್ಲಿ ಭಾರತ– ಅಮೆರಿಕ ಕಾರ್ಯತಂತ್ರ ಪಾಲುದಾರಿಕೆ ಹೊಂದಿವೆ. ಸಹಜವಾಗಿ ಭಾರತಕ್ಕೆ ಹೆಚ್ಚಿನ ನೆರವಾಗಲಿದೆ. ಇದಕ್ಕಾಗಿ ಭಾರತ ರಫ್ತುಪೂರಕ ತಂತ್ರಜ್ಞಾನ ಹೊಂದುವುದು ಅಗತ್ಯ ಎಂದು ‘ಪಿಟಿಐ’ ಜೊತೆಗೆ ಮಾತನಾಡಿದ ಅವರು ಹೇಳಿದರು.

ಹಾಲ್ಟೆಕ್ ಇಂಟರ್‌ನ್ಯಾಷನಲ್ ಇಂಧನ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಪ್ರಮುಖ ಕಂಪನಿಯಾಗಿದ್ದು, ಅಣುಶಕ್ತಿ ಮತ್ತು ಸೋಲಾರ್ ಇಂಧನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದೆ.

ಕ್ರಿಸ್ ಸಿಂಗ್ ಅವರು ಕಳೆದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದರು.

### ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹254-564

ದ್ವಿತಳಿ (ಬಿ.ವಿ) ₹415-666

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| ಬೆಂಗಳೂರು | |
| 100ಕ್ಕೆ | ₹450 |
| 12 ಕ್ಕೆ | ₹60 |
| ಮೈಸೂರು | |
| 100ಕ್ಕೆ | ₹450 |

### ‘ಪ್ರಾದೇಶಿಕ ಮೀಸಲಿಲ್ಲ; ಆದ್ಯತೆಯಷ್ಟೇ’

ನವದೆಹಲಿ (ಪಿಟಿಐ): ಪ್ರಾದೇಶಿಕ ಹಾಗೂ ಸಂಸ್ಕೃತಿ ಆಧಾರದ ಮೇಲೆ ವಿದ್ಯಾರ್ಥಿನಿಲಯದಲ್ಲಿ ಮೀಸಲಾತಿ ನೀಡುವುದಿಲ್ಲ ಎಂದು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ತಿಳಿಸಿದೆ.

ಹೊಸದಾಗಿ ಉದ್ಘಾಟನೆಗೊಂಡ ಬರಾಕ್ ವಿದ್ಯಾರ್ಥಿನಿಲಯದಲ್ಲಿ ಸೀಟುಗಳನ್ನು ಕಾಯ್ದಿರಿಸಬೇಕು ಎಂಬ ಬೇಡಿಕೆಗಳ ಮಧ್ಯೆ ಜೆಎನ್‌ಯು ಈ ಸ್ಪಷ್ಟನೆ ನೀಡಿದ್ದು, ಅಧಿಕೃತ ನಿರ್ದೇಶನಗಳಿಗೆ ಅನುಗುಣವಾಗಿ ಈಶಾನ್ಯ ಭಾರತದ ವಿದ್ಯಾರ್ಥಿಗಳಿಗೆ ಈ ಹಾಸ್ಟೆಲ್‌ನಲ್ಲಿ ಆದ್ಯತೆ ನೀಡಲಾಗಿದೆ ಎಂದಿದೆ.

ವಿದ್ಯಾರ್ಥಿನಿಲಯದಲ್ಲಿನ ಸೀಟುಗಳ ಹಂಚಿಕೆ ಪ್ರಕ್ರಿಯೆಯು ಏ. 8ರಿಂದ ಹಂತ ಹಂತವಾಗಿ ಆರಂಭಗೊಂಡಿದ್ದು, ಬರಾಕ್ ಹಾಸ್ಟೆಲ್‌ನಲ್ಲಿ ಈಶಾನ್ಯದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗಿದೆ ಎಂದು ವಿ.ವಿ. ತಿಳಿಸಿದೆ.

ಬರಾಕ್ ವಿದ್ಯಾರ್ಥಿನಿಲಯದ ಶೇ 75ರಷ್ಟು ಸೀಟುಗಳನ್ನು ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳಿಗೆ ಮೀಸಲಿಡಬೇಕು ಎಂದು ಒತ್ತಾಯಿಸಿ ಈಶಾನ್ಯ ವಿದ್ಯಾರ್ಥಿಗಳ ವೇದಿಕೆ ಹಾಸ್ಟೆಲ್ ಉದ್ಘಾಟನೆ ವೇಳೆ ಪ್ರತಿಭಟನೆ ನಡೆಸಿತ್ತು.


ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036


### ಎರಡು ವರ್ಷದಲ್ಲಿ ₹10 ಲಕ್ಷ ಕೋಟಿ ವೆಚ್ಚಕ್ಕೆ ನಿರ್ಧಾರ: ಸಚಿವ ಗಡ್ಕರಿ

# ಹೆದ್ದಾರಿ ಮೂಲಸೌಕರ್ಯ ಬಲವರ್ಧನೆ

ನವದೆಹಲಿ (ಪಿಟಿಐ): ದೇಶದ ಹೆದ್ದಾರಿಗಳ ಮೂಲಸೌಕರ್ಯ ಬಲವರ್ಧನೆಗೆ ಕೇಂದ್ರ ಸರ್ಕಾರವು ಮುಂದಿನ ಎರಡು ವರ್ಷಗಳಲ್ಲಿ ₹10 ಲಕ್ಷ ಕೋಟಿ ವೆಚ್ಚ ಮಾಡಲು ನಿರ್ಧರಿಸಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಿದೆ. ಬಳಕೆದಾರರಿಗೆ ವಿಶ್ವದರ್ಜೆಯ ಸೌಲಭ್ಯ ಒದಗಿಸುವ ಗುರಿ ಹೊಂದಲಾಗಿದೆ. ಮುಖ್ಯವಾಗಿ ಈಶಾನ್ಯ ಭಾರತ ಭಾಗ ಮತ್ತು ದೇಶದ ಗಡಿ ಭಾಗದಲ್ಲಿರುವ ಹೆದ್ದಾರಿಗಳ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುವುದು ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ವಿವರಿಸಿದ್ದಾರೆ.

ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ರಾಜಸ್ಥಾನ ಮತ್ತು ದೆಹಲಿಯಲ್ಲಿ ಹೆದ್ದಾರಿಗಳ ನಿರ್ವಹಣಾ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದ್ದಾರೆ.

ಈಶಾನ್ಯ ಭಾರತ ಭಾಗದಲ್ಲಿ ₹3.73 ಲಕ್ಷ ಕೋಟಿ ವೆಚ್ಚದಡಿ ಹೆದ್ದಾರಿ ಯೋಜನೆಗಳಿಗೆ ಚಾಲನೆ ನೀಡಲು ನೀಲನಕ್ಷೆ ಸಿದ್ಧಪಡಿಸಲಾಗಿದೆ. ಒಟ್ಟು 21,355 ಕಿ.ಮೀ ಉದ್ದದ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ವಿವರಿಸಿದ್ದಾರೆ.

ಪ್ರಸ್ತುತ ಅಸ್ಸಾಂ ₹57,696 ಕೋಟಿ, ಬಿಹಾರ ₹90 ಸಾವಿರ ಕೋಟಿ ಮೊತ್ತದ ಯೋಜನೆಗಳು ಪ್ರಗತಿಯಲ್ಲಿವೆ. ಪಶ್ಚಿಮ ಬಂಗಾಳ ₹42 ಸಾವಿರ ಕೋಟಿ, ಜಾರ್ಖಂಡ್ ₹53 ಸಾವಿರ ಕೋಟಿ ಮತ್ತು ಒಡಿಶಾದಲ್ಲಿ ₹58 ಸಾವಿರ ಕೋಟಿ ವೆಚ್ಚದಲ್ಲಿ ಹೆದ್ದಾರಿ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ದೇಶದಲ್ಲಿ ಹೆದ್ದಾರಿ ಜಾಲದ ವಿಸ್ತರಣೆಯು ಸುಧಾರಣೆ ಕಂಡಿದೆ. 2014ರಲ್ಲಿ ದೇಶದಲ್ಲಿದ್ದ ಹೆದ್ದಾರಿಗಳ ಉದ್ದ 91,287 ಕಿ.ಮೀ. ಈಗ 1.46 ಲಕ್ಷ ಕಿ.ಮೀ.ಗೆ ವಿಸ್ತರಣೆಯಾಗಿದೆ. ಗುಣಮಟ್ಟದಲ್ಲೂ ಸಾಕಷ್ಟು ಸುಧಾರಣೆಯಾಗಿದೆ ಎಂದು ಹೇಳಿದ್ದಾರೆ.

**ಕ್ಷಿಪ್ರ ಸಾರಿಗೆ ವ್ಯವಸ್ಥೆ:** ನಾಗಪುರದಲ್ಲಿ ₹170 ಕೋಟಿ ವೆಚ್ಚದಡಿ ವಿದ್ಯುತ್ ಚಾಲಿತ ಕ್ಷಿಪ್ರ ಸಾರಿಗೆ ವ್ಯವಸ್ಥೆಯ ಪ್ರಾಯೋಗಿಕ ಯೋಜನೆ ಅನುಷ್ಠಾನಗೊಂಡಿದೆ ಎಂದು ಗಡ್ಕರಿ ತಿಳಿಸಿದ್ದಾರೆ.

ಇ-ಬಸ್‌ಗಳಲ್ಲಿ ಏಕಕಾಲಕ್ಕೆ 135 ಮಂದಿ ಪ್ರಯಾಣಿಸಬಹುದಾಗಿದೆ. ಇದು ಯಶಸ್ವಿಯಾದರೆ ದೇಶದಾದ್ಯಂತ ವಿಸ್ತರಿಸುವ ಗುರಿ ಹೊಂದಲಾಗಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ದಡಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

2024–25ರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಹೊಸದಾಗಿ 5,614 ಕಿ.ಮೀ ಉದ್ದದಷ್ಟು ಹೆದ್ದಾರಿಯನ್ನು ಅಭಿವೃದ್ಧಿಪಡಿಸಿದೆ.

# ಇಂದು ರಾತ್ರಿಯಿಂದ ಲಾರಿ ಮುಷ್ಕರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡೀಸೆಲ್ ದರ ಏರಿಕೆ ಖಂಡಿಸಿ ಏಪ್ರಿಲ್ 14ರ ರಾತ್ರಿಯಿಂದಲೇ ಲಾರಿಗಳ ಸಂಚಾರ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘ ಪ್ರಕಟಿಸಿದೆ.

ಜಲ್ಲಿ, ಮರಳು ಸಾಗಣೆ ವಾಹನಗಳು, ಗ್ಯಾಸ್ ಟ್ಯಾಂಕ್ ಮಾಲೀಕರ ಸಂಘ ಸಹಿತ 69 ಸಂಘಟನೆಗಳು ಮುಷ್ಕರ ಬೆಂಬಲಿಸಿವೆ. ರಾಜ್ಯದಲ್ಲಿ ಸುಮಾರು 700 ಗೂಡ್ಸ್ ಕಚೇರಿಗಳಿದ್ದು, ಬಂದ್ ಆಗಲಿವೆ. ಈ ಬಗ್ಗೆ ಕೈಗಾರಿಕೆ, ಕಾರ್ಖಾನೆ, ಕಂಪನಿಗಳಿಗೆ ಮುಷ್ಕರದ ಬಗ್ಗೆ ಪತ್ರ ಬರೆಯಲಾಗಿದೆ ಎಂದು ಸಂಘದ ಅಧ್ಯಕ್ಷ ಜಿ.ಆರ್.ಷಣ್ಮುಖಪ್ಪ ತಿಳಿಸಿದ್ದಾರೆ.

2024ರ ಜೂನ್‌ನಲ್ಲಿ ಪ್ರತಿ ಲೀಟರ್‌ಗೆ ಡೀಸೆಲ್ ದರವನ್ನು ₹3 ಏರಿಸಿದ್ದ ರಾಜ್ಯ ಸರ್ಕಾರ, ಈಗ ಮತ್ತೆ ₹2 ಏರಿಸಿದೆ. ಈ ಏರಿಕೆ ಕೈಬಿಡುವವರೆಗೆ ಮುಷ್ಕರ ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

‘ರಾಜ್ಯದಲ್ಲಿ 18 ರಾಜ್ಯ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಿಸಲಾಗುತ್ತಿದೆ. ಬೇರೆ ಯಾವ ರಾಜ್ಯದಲ್ಲಿಯೂ ರಾಜ್ಯ ಹೆದ್ದಾರಿಗೆ ಟೋಲ್ ಇಲ್ಲ. ರಾಜ್ಯದಲ್ಲಿ ಟೋಲ್ ಸಂಗ್ರಹ ಕೈಬಿಡಬೇಕು. ಗಡಿ ಚೆಕ್‌ಪೋಸ್ಟ್‌ಗಳನ್ನು ರದ್ದು ಮಾಡಬೇಕು. ವಾಹನಗಳ ಸಾಮರ್ಥ್ಯ ಅರ್ಹತಾ ಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್) ನವೀಕರಣಕ್ಕೆ ಶುಲ್ಕ ಹೆಚ್ಚಿಸಿ, ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ. ಅದನ್ನು ರಾಜ್ಯ ಸರ್ಕಾರ ಜಾರಿ ಮಾಡಬಾರದು ಎಂದರು.

ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಿಗೆ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿಷೇಧಿಸಿರುವುದು, ಕೇವಲ ಐದು ಗಂಟೆ ಅವಕಾಶ ನೀಡಿರುವುದನ್ನು ತೆಗೆದುಹಾಕಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಗಳಾಗಿವೆ’ ಎಂದು ತಿಳಿಸಿದರು.

### ಲಾರಿ ಫೆಡರೇಷನ್ ಬೆಂಬಲವಿಲ್ಲ

ರಾಜ್ಯ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘ ನಡೆಸಲು ಉದ್ದೇಶಿಸಿರುವ ಮುಷ್ಕರಕ್ಕೆ ಫೆಡರೇಷನ್ ಆಫ್ ಕರ್ನಾಟಕ ಲಾರಿ ಮಾಲೀಕರ ಸಂಘ ಬೆಂಬಲ ನೀಡದಿರಲು ನಿರ್ಧರಿಸಿದೆ.

‘ದಕ್ಷಿಣ ಭಾರತದಲ್ಲಿ ಪಾಂಡಿಚೇರಿ ಬಿಟ್ಟರೆ ಅತಿ ಕಡಿಮೆ ಡೀಸೆಲ್ ದರ ಇರುವುದು ಕರ್ನಾಟಕದಲ್ಲಿ. ₹ 2 ಜಾಸ್ತಿ ಮಾಡಿದ್ದಾರೆ. ಬೆಲೆ ಕಡಿಮೆ ಮಾಡಲು ಆಗ್ರಹಿಸೋಣ. ದರ ಇಳಿಸಲು ನಾವು ಕೂಡ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಆದರೆ, ಮುಷ್ಕರ ಮಾಡುವಷ್ಟು ದೊಡ್ಡ ವಿಚಾರವಲ್ಲ’ ಎಂದು ಫೆಡರೇಷನ್ ಗೌರವಾಧ್ಯಕ್ಷ ಚನ್ನಾರೆಡ್ಡಿ ತಿಳಿಸಿದ್ದಾರೆ.

‘ನಮ್ಮದು 48 ವರ್ಷಗಳಿಂದ ಇರುವ ಹಳೇ ಸಂಘಟನೆ. ರಾಜ್ಯದ ಎಲ್ಲ ಜಿಲ್ಲೆಗಳ ಲಾರಿ ಮಾಲೀಕರ ಸಂಘಗಳೊಂದಿಗೆ ಸಭೆ ನಡೆಸಿದಾಗ ಯಾರೂ ಮುಷ್ಕರ ನಡೆಸಲು ತಯಾರಿಲ್ಲ. ಒಂದು ದಿನ ಲಾರಿ ನಿಲ್ಲಿಸಿದರೆ ಮೊದಲೇ ಸಂಕಷ್ಟದಲ್ಲಿರುವ ಲಾರಿ ಮಾಲೀಕರಿಗೆ ಇನ್ನಷ್ಟು ನಷ್ಟವಾಗುತ್ತದೆ. ಅಲ್ಲದೇ ರಾಜ್ಯ ಸರ್ಕಾರಕ್ಕೆ ಗಡುವು ನೀಡಬೇಕೇ ಹೊರತು, ಏಕಾಏಕಿ ಮುಷ್ಕರಕ್ಕೆ ಕರೆ ಕೊಡುವುದು ಸರಿಯಲ್ಲ ಎಂದು ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ನಾವು ಬೆಂಬಲ ಸೂಚಿಸಿಲ್ಲ. ಲಾರಿಗಳು ಎಂದಿನಂತೆ ಸಂಚರಿಸಲಿವೆ’ ಎಂದು ಫೆಡರೇಷನ್ ಅಧ್ಯಕ್ಷ ನವೀನ್ ರೆಡ್ಡಿ ತಿಳಿಸಿದ್ದಾರೆ.

### ಕೃಷ್ಣನ ಚಿತ್ರಕಾರಳ ಮೇಲೆ ಗಲಭೆ ಯತ್ನದ ಪ್ರಕರಣ

ಪ್ರಜಾವಾಣಿ ವಾರ್ತೆ

**ತಿರುವನಂತಪುರ:** ಭಗವಾನ್ ಕೃಷ್ಣನ ವರ್ಣಚಿತ್ರ ರಚನೆಯಲ್ಲಿ ಖ್ಯಾತಿ ಗಳಿಸಿರುವ ಮತ್ತು ಕೃಷ್ಣನ ಕಲಾಕೃತಿಯನ್ನು ಪ್ರಧಾನಿ ಮೋದಿಯವರಿಗೆ ಉಡುಗೊರೆ ನೀಡಿ ಅವರ ಪ್ರಶಂಸೆ ಗಳಿಸಿದ್ದ ಕೇರಳದ ಮುಸ್ಲಿಂ ಮಹಿಳೆಯೊಬ್ಬರು ಗಲಭೆ ಸೃಷ್ಟಿಸಲು ಯತ್ನಿಸಿದ ಆರೋಪದ ಪ್ರಕರಣ ಎದುರಿಸುತ್ತಿದ್ದಾರೆ.

ಪ್ರಸಿದ್ಧ ಗುರುವಾಯೂರು ಶ್ರೀ ಕೃಷ್ಣ ದೇವಾಲಯದ ಮುಂದೆ ಭಗವಾನ್ ಕೃಷ್ಣನ ವಿಗ್ರಹಕ್ಕೆ ಮಾಲಾರ್ಪಣೆ ಮಾಡಿರುವ ದೃಶ್ಯವನ್ನು ವಿಡಿಯೊ ಮಾಡಿರುವುದಕ್ಕೆ ಪೊಲೀಸರು ಅವರ ವಿರುದ್ಧ ಇಂತಹ ಆರೋಪದ ಪ್ರಕರಣ ದಾಖಲಿಸಿದ್ದಾರೆ.

ಕೋಯಿಕ್ಕೋಡ್ ಜಿಲ್ಲೆಯ ಕೊಯಿಲಾಂಡಿಯ ಜಸ್ನಾ ಸಲೀಂ, ಕೇರಳ ಹೈಕೋರ್ಟ್ ವಿಧಿಸಿರುವ ನಿರ್ಬಂಧಗಳನ್ನು ಉಲ್ಲಂಘಿಸಿ ‘ನಾಡಾ ಪಂಡಲ್’ನಲ್ಲಿ (ದೇವಾಲಯದ ಪೀಠ) ವಿಡಿಯೊ ಮಾಡಿರುವ ಆರೋಪದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜಸ್ನಾ ಇತ್ತೀಚೆಗೆ ದೇವಾಲಯದ ಪೀಠದಲ್ಲಿ ಭಗವಾನ್ ಕೃಷ್ಣನ ವಿಗ್ರಹಕ್ಕೆ ಹಾರ ಹಾಕುವ ವಿಡಿಯೊ ಚಿತ್ರೀಕರಿಸಿದ್ದಾರೆ. ಈ ಸಂಬಂಧ ದೇವಾಲಯದ ಅಧಿಕಾರಿಗಳು ಆಕೆಯ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಗಲಭೆಗೆ ಪ್ರಚೋದನೆ ನೀಡುವ ಉದ್ದೇಶದ ಮತ್ತು ನ್ಯಾಯಾಂಗ ನಿಂದನೆಯ ಆರೋಪದ ಪ್ರಕರಣವನ್ನು ಜಸ್ನಾ ವಿರುದ್ಧ ಗುರುವಾಯೂರ್ ದೇವಾಲಯದ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಜಸ್ನಾ ಈ ಹಿಂದೆ ದೇವಾಲಯದೊಳಗೆ ಹುಟ್ಟುಹಬ್ಬದ ಕೇಕ್ ಕತ್ತರಿಸುವ ವಿಡಿಯೊ ಪೋಸ್ಟ್ ಮಾಡಿದ್ದು ವಿವಾದಕ್ಕೆ ಕಾರಣವಾಗಿತ್ತು. ಆನಂತರ ದೇವಾಲಯದೊಳಗೆ ವಿಡಿಯೊ ಚಿತ್ರೀಕರಣಕ್ಕೆ ಹೈಕೋರ್ಟ್ ನಿರ್ಬಂಧ ವಿಧಿಸಿತ್ತು.

ಕಳೆದ ಹತ್ತು ವರ್ಷಗಳಿಂದ ಕೃಷ್ಣನ ವರ್ಣ-ಚಿತ್ರಗಳನ್ನು ರಚಿಸುತ್ತಿರುವ ಜಸ್ನಾ, ಮುಸ್ಲಿಮರು ಮತ್ತು ಹಿಂದೂ ಸಂಘಟನೆಗಳೆರಡರಿಂದಲೂ ತೀವ್ರ ಪ್ರತಿರೋಧಗಳನ್ನು ಎದುರಿಸುತ್ತಿದ್ದಾರೆ.

### ಲೇಖಕನಿಗೆ ಜೀವ ಬೆದರಿಕೆ

ತಿರುವನಂತಪುರ (ಪಿಟಿಐ): ತಿರುವಾಂಕೂರು ರಾಜಮನೆತನದ ಕೊನೆಯ ಆಡಳಿತಗಾರ ಹಾಗೂ ಮಹಿಳೆಯೊಬ್ಬರ ನಡುವೆ ಇದ್ದ ಸಂಬಂಧವನ್ನು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದ ಲೇಖಕ, ಇತಿಹಾಸಕಾರ ಎಂ.ಜಿ.ಶಶಿಭೂಷಣ್ ಅವರಿಗೆ ಜೀವ ಬೆದರಿಕೆ ಒಡ್ಡಲಾಗಿದೆ.

ಶಶಿಭೂಷಣ್ ಅವರ ಕೃತಿ ‘ಮಾಂಜುಪೋಯ ಶಂಕುಮುದ್ರ’ದಲ್ಲಿ-ರುವ ಉಲ್ಲೇಖ ಕುರಿತು ಈಗ ಆಕ್ಷೇಪ ವ್ಯಕ್ತವಾಗಿದೆ. ಜೀವ ಬೆದರಿಕೆ ವ್ಯಕ್ತವಾಗಿರುವ ಸಂಬಂಧ ತಿರುವನಂತಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಬೆಳವಣಿಗೆಯಿಂದ ಮಾನಸಿಕ ಒತ್ತಡದಲ್ಲಿರುವ ಲೇಖಕರು, ‘ಹೊಸ ಕೃತಿಯಲ್ಲಿ ಬರೆದಿರುವ ಅಂಶಗಳಿಗೆ ನಾನು ಬದ್ಧನಾಗಿದ್ದೇನೆ’ ಎಂದು ಪ್ರತಿಕ್ರಿಯಿಸಿದ್ದಾರೆ.

ಫೆಬ್ರುವರಿ ತಿಂಗಳಲ್ಲಿ ಕೃತಿ ಬಿಡುಗಡೆಗೊಂಡಿತ್ತು.

# ಒಂದೇ ರೀತಿ ಪಾತ್ರ ಮಾಡಲು ಇಷ್ಟವಿಲ್ಲ

**‘ಕೆಜಿಎಫ್’ನಲ್ಲಿ ರಾಕಿಬಾಯ್ ತಾಯಿಯಾಗಿ ಗಮನ ಸೆಳೆದವರು ನಟಿ ಅರ್ಚನಾ ಜೋಯ್ಸ್. ಅವರು ಮುಖ್ಯಭೂಮಿಕೆಯಲ್ಲಿರುವ ‘ಯುದ್ಧಕಾಂಡ’ ಚಿತ್ರ ಈ ವಾರ ತೆರೆ ಕಾಣುತ್ತಿದೆ. ಅವರು ಮಾತಿಗೆ ಸಿಕ್ಕರು...**

ವಿನಾಯಕ ಕೆ.ಎಸ್

‘ಕೆಜಿಎಫ್ ಚಿತ್ರದ ತಾಯಿ ಪಾತ್ರ ಒಂದು ರೀತಿ ವರ. ಇನ್ನೊಂದು ರೀತಿ ಶಾಪ. ಈಗೀಗ ತಾಯಿ ಪಾತ್ರಗಳೇ ನನ್ನನ್ನು ಹುಡುಕಿಕೊಂಡು ಬರುತ್ತಿವೆ. ಆದರೆ ನನಗೆ ಅದದೇ ಪಾತ್ರ ಮಾಡುತ್ತ ಒಂದು ಜಾನರ್‌ಗೆ ಸೀಮಿತವಾಗಲು ಇಷ್ಟವಿಲ್ಲ. ಹೀಗಾಗಿ ಅಂಥ ಪಾತ್ರಗಳನ್ನು ಒಪ್ಪಿಕೊಳ್ಳದೆ ಸೂಕ್ತ ಪಾತ್ರಗಳಿಗೆ ಕಾಯುತ್ತಿರುವೆ’ ಎಂದು ಮಾತು ಆರಂಭಿಸಿದರು ಅರ್ಚನಾ.

‘ಯುದ್ಧಕಾಂಡ’ ಚಿತ್ರದಲ್ಲಿ ನಿವೇದಿತಾ ಆಗಿ ಅವರು ಕಾಣಿಸಿಕೊಂಡಿದ್ದಾರೆ. ಕಥೆಯ ಮುಖ್ಯ ಭಾಗವಾದ ಶ್ಯಾಮಿಲಿ ಎಂಬ ಪುಟಾಣಿ ಮಗುವಿನ ತಾಯಿಯ ಪಾತ್ರವಿದು. ತನ್ನ ಮಗಳಿಗಾದ ಅನ್ಯಾಯದ ವಿರುದ್ಧ ನಿವೇದಿತಾ ಹೇಗೆ ಹೋರಾಡುತ್ತಾಳೆ, ಸಿಡಿದೇಳುತ್ತಾಳೆ ಎಂಬುದೇ ಈ ಚಿತ್ರದ ಮುಖ್ಯಕಥೆ.

‘ಒಂದು ರೀತಿಯಲ್ಲಿ ಸಮಾಜದಲ್ಲಿ ಶೋಷಣೆಗೆ, ಅನ್ಯಾಯಕ್ಕೆ ಒಳಗಾದ ಹೆಣ್ಣುಮಕ್ಕಳ ಪ್ರತಿನಿಧಿ ಪಾತ್ರ. ದಿನನಿತ್ಯ ಮಕ್ಕಳ ಮೇಲೆ ಅತ್ಯಾಚಾರ, ದೌರ್ಜನ್ಯದಂತಹ ಸುದ್ದಿ ಓದುತ್ತ, ನೋಡುತ್ತ ಇರುತ್ತೇವೆ. ಆಗ ಮನಸು ಕರಗುತ್ತದೆ. ಹೀಗಾಗಬಾರದಿತ್ತು ಎನ್ನಿಸುತ್ತದೆ. ಈ ರೀತಿ ಘಟನೆಗಳು ನಡೆಯದಂತೆ ತಡೆಯುವ ಆಲೋಚನೆಗಳು ಬರುತ್ತವೆ. ಆಲೋಚನೆಗೆ ಹಚ್ಚುವ ಒಂದು ಗಂಭೀರವಾದ ಪಾತ್ರವನ್ನು ಮಾಡಿರುವ ತೃಪ್ತಿಯಿದೆ’ ಎಂದರು.

ಕಿರುತೆರೆ ನಟಿಯಾಗಿ ಬಂದ ಅರ್ಚನಾ ‘ದುರ್ಗಾ’, ‘ಮಹಾದೇವಿ’ಯಂತಹ ದೈವಿಕ ಪಾತ್ರಗಳಿಂದ ಮನೆಮಾತಾದವರು. ಗ್ಲಾಮರಸ್ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು ಕಡಿಮೆ. ‘ಹೊಂದಿಸಿ ಬರೆಯಿರಿ’, ‘ಕ್ಷೇತ್ರಪತಿ’ ಚಿತ್ರಗಳಲ್ಲಿಯೂ ತುಸು ಗಾಂಭೀರ್ಯದಿಂದ ಕೂಡಿದ ಪಾತ್ರಗಳಲ್ಲಿಯೇ ಕಾಣಿಸಿಕೊಂಡರು.

‘ಗಂಭೀರ ಪಾತ್ರಗಳು ಸಾಕೆನಿಸಿದೆ. ಹಾಸ್ಯಮಯ, ರಾಮ್‌ಕಾಮ್ ರೀತಿಯ ಪಾತ್ರಗಳಿಗೆ ಎದುರು ನೋಡುತ್ತಿರುವೆ. ಅಂಥ ಪಾತ್ರಗಳು ಸಿಗುತ್ತಿಲ್ಲ. ಹೀಗಾಗಿ ‘ಯುದ್ಧಕಾಂಡ’ದ ಬಳಿಕ ಯಾವುದೇ ಚಿತ್ರ ಕೈಯ್ಯಲ್ಲಿ ಇಲ್ಲ. ನಟನೆಯಲ್ಲಿ ಪೈಪೋಟಿ, ಚಿತ್ರಗಳ ಯಶಸ್ಸಿನ ಕೊರತೆ ಇಂದು ಕಲಾವಿದರಿಗೆ ಸವಾಲಾಗಿದೆ. ಉತ್ತಮ ನಿರ್ಮಾಣ ಸಂಸ್ಥೆಗಳು ಬರಹಗಾರರ ತಂಡ ರಚಿಸಿ, ಉತ್ತಮ ಕಂಟೆಂಟ್ ಸಿನಿಮಾಗಳನ್ನು ಮಾಡಬೇಕು. ಆಗ ಸಾಕಷ್ಟು ಜನರಿಗೆ ಕೆಲಸ ಸಿಗುತ್ತದೆ. ನಮ್ಮಲ್ಲಿ ಬರಹಗಾರರಿಗೆ ಆದ್ಯತೆ ಇಲ್ಲ. ಎಷ್ಟೋ ಚಿತ್ರದ ಸಮಾರಂಭಗಳಲ್ಲಿ ಬರಹಗಾರರು ವೇದಿಕೆ ಬರುವುದಿಲ್ಲ. ಅವರಿಗೊಂದು ಸೂಕ್ತ ಸಂಭಾವನೆ ಸಿಗದಿದ್ದರೆ, ಯಾರು ತಾನೆ ಪ್ಯಾಷನ್ ಎಂದುಕೊಂಡು ಎಷ್ಟು ದಿನ ಆಸಕ್ತಿಯಿಂದ ಬರೆದಾರು? ಬರಹಗಾರರನ್ನು ನಡೆಸಿಕೊಳ್ಳುವ ರೀತಿ ಬದಲಾಗಬೇಕು. ನಟ, ನಟಿ, ನಿರ್ದೇಶಕನಿಗಿಂತ ಮೊದಲ ಆದ್ಯತೆ ಬರವಣಿಗೆಗೆ ಸಿಕ್ಕರೆ ಉತ್ತಮ ಕಥೆಗಳು ಬರಬಹುದು’ ಎನ್ನುತ್ತಾರೆ ಅರ್ಚನಾ.

ಸಿನಿಮಾಗಳಿಗೆ ಜನ ಬರುತ್ತಿಲ್ಲ ಎಂಬ ಆರೋಪವನ್ನು ಅವರು ಒಪ್ಪುವುದಿಲ್ಲ. ಜನ ಬರುವಂಥ ಚಿತ್ರಗಳನ್ನು ನಾವು ನೀಡುತ್ತಿಲ್ಲ. ಹಿಟ್ ಆದ ಸಿನಿಮಾಗಳಿಗೆ ಜನ ಬರುತ್ತಾರೆ ಎಂದರೆ, ಅದೇ ಜನ ಉಳಿದ ಸಿನಿಮಾಗಳಿಗೂ ಬರುತ್ತಿದ್ದರು ಎಂಬ ಅರ್ಥವಲ್ಲವೇ ಎನ್ನುವ ಅವರು, ಜನಕ್ಕೆ ಬೇಕಾದ ಚಿತ್ರ ನೀಡುವಲ್ಲಿ ನಾವು ಎಡವುತ್ತಿದ್ದೇವೆ ಎಂಬುದನ್ನು ಬಲವಾಗಿ ಪ್ರತಿಪಾದಿಸಿ ಮಾತಿಗೆ ವಿರಾಮ ವಿಟ್ಟರು. ❖

ಅಲ್ಲು ಅರ್ಜುನ್, ಅಟ್ಲಿ

## ಹಾಲಿವುಡ್‌ನತ್ತ ಅಲ್ಲು ಅರ್ಜುನ್ ಚಿತ್ತ?

‘ಪುಷ್ಪ’, ‘ಪುಷ್ಪ - 2’ ಚಿತ್ರದ ಬಳಿಕ ಅಲ್ಲು ಅರ್ಜುನ್ ಮಾರುಕಟ್ಟೆ ಬದಲಾಗಿದೆ. ಪ್ಯಾನ್ ಇಂಡಿಯಾಕ್ಕಿಂತಲೂ ದೊಡ್ಡದಾದ ಸಿನಿಮಾಗಳನ್ನೇ ಎದುರು ನೋಡುತ್ತಿರುವ ಅಲ್ಲು ಅರ್ಜುನ್, ತಮ್ಮ ಮುಂದಿನ ಚಿತ್ರಕ್ಕಾಗಿ ತಮಿಳಿನ ಖ್ಯಾತ ನಿರ್ದೇಶಕ ಅಟ್ಲಿ ಜೊತೆ ಕೈಜೋಡಿಸಿದ್ದಾರೆ. ಅಟ್ಲಿ ನಿರ್ದೇಶನದಲ್ಲಿ ಶಾರೂಕ್ ಖಾನ್ ಅಭಿನಯದ ‘ಜವಾನ್’ ಚಿತ್ರ ಸೂಪರ್ ಹಿಟ್ ಎನಿಸಿಕೊಂಡಿತ್ತು. ಇದರ ಬಳಿಕ ಅಟ್ಲಿ ಬಾಲಿವುಡ್‌ನಲ್ಲಿ ಬಹುಬೇಡಿಕೆಯ ನಿರ್ದೇಶಕರಾಗಿದ್ದಾರೆ.

ಅಟ್ಲಿ ಮತ್ತು ಸಲ್ಮಾನ್ ಖಾನ್ ಜೋಡಿಯ ಬೃಹತ್ ಬಜೆಟ್‌ನ ಸಿನಿಮಾವೊಂದು ಸೆಟ್ಟೇರಲಿದೆ ಎಂದು ಸುದ್ದಿಯಾಗಿತ್ತು. ಆದರೆ ಆ ಸಿನಿಮಾವಿನ್ನೂ ಅಧಿಕೃತವಾಗಿ ಘೋಷಣೆಗೊಂಡಿಲ್ಲ. ರಜನಿಕಾಂತ್ ಕೂಡ ನಟಿಸುತ್ತಾರೆ ಎಂಬ ವದಂತಿ ಇರುವ ಈ ಚಿತ್ರ ಬಜೆಟ್ ಸಮಸ್ಯೆಯಿಂದಾಗಿ ಇನ್ನೂ ಸೆಟ್ಟೇರಿಲ್ಲ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ. ಅದರ ಬೆನ್ನಲ್ಲೇ ಸನ್ ಪಿಕ್ಚರ್ಸ್ ನಿರ್ಮಾಣದಲ್ಲಿ ಅಟ್ಲಿ–ಅಲ್ಲು ಅರ್ಜುನ್ ಸಿನಿಮಾ ಘೋಷಣೆಗೊಂಡಿದೆ.

‘ಸದ್ಯ ಚಿತ್ರಕ್ಕೆ #ಎಎ22 ಎಂದು ಹೆಸರಿಡಲಾಗಿದೆ. ಇದು ಅಲ್ಲು ಅರ್ಜುನ್ ಅವರ ಇಪ್ಪತ್ತೆರಡನೆ ಚಿತ್ರ. ನಿರ್ದೇಶಕ ಅಟ್ಲಿ ಅವರ ಆರನೇ ಚಿತ್ರ. ವೈಜ್ಞಾನಿಕ ಕಥೆಯೊಂದಿಗಿನ ಆ್ಯಕ್ಷನ್ ಚಿತ್ರ ಇದಾಗಿದ್ದು, ಭಾರತ ಮತ್ತು ಅಮೆರಿಕದ ಪ್ರತಿಷ್ಠಿತ ಸ್ಟುಡಿಯೋಗಳಲ್ಲಿ ಚಿತ್ರದ ವಿಎಫ್‌ಎಕ್ಸ್ ಕೆಲಸ ನಡೆಯುತ್ತಿದೆ’ ಎಂದು ಕಲಾನಿಧಿ ಮಾರನ್ ಒಡೆತನದ ಸನ್ ಪಿಕ್ಚರ್ಸ್ ಪ್ರಕಟಣೆ ತಿಳಿಸಿದೆ.

‘ಸ್ಪೈಡರ್ ಮ್ಯಾನ್’, ‘ಅವೆಂಜರ್ಸ್’ನಂತಹ ಚಿತ್ರಗಳಿಗೆ ಕೆಲಸ ಮಾಡಿದ್ದ ಅಮೆರಿಕದ ಐರನ್‌ಹೆಡ್ ಸ್ಟುಡಿಯೊ ಅಲ್ಲು ಅರ್ಜುನ್ ಚಿತ್ರದ ಗ್ರಾಫಿಕ್ಸ್ ಕೆಲಸ ಮಾಡುತ್ತಿದೆ. ಹೀಗಾಗಿ ಚಿತ್ರದ ಕುರಿತು ನಿರೀಕ್ಷೆ ಹೆಚ್ಚಾಗಿದೆ. ಯಶ್ ನಟನೆಯ ‘ಟಾಕ್ಸಿಕ್’ ಕನ್ನಡದ ಜೊತೆಗೆ ಇಂಗ್ಲಿಷ್‌ನಲ್ಲಿ ನಿರ್ಮಾಣಗೊಳ್ಳುತ್ತಿದೆ. ಇದರಲ್ಲಿಯೂ ಹಾಲಿವುಡ್ ತಂತ್ರಜ್ಞರು ತೊಡಗಿಸಿಕೊಂಡಿದ್ದಾರೆ. ಇದೀಗ ಅಲ್ಲು ಅರ್ಜುನ್ ಕೂಡ ಹಾಲಿವುಡ್ ಸಂಸ್ಥೆಗಳೊಂದಿಗೆ ಕೈಜೋಡಿಸಿ ಪ್ಯಾನ್ ಇಂಡಿಯಾಕ್ಕಿಂತ ದೊಡ್ಡದಾದ ಹೆಜ್ಜೆ ಇಟ್ಟಿದ್ದಾರೆ. ಇದರೊಂದಿಗೆ ದೇಶದ ಸೂಪರ್ ಸ್ಟಾರ್‌ಗಳು ಪ್ಯಾನ್ ಇಂಡಿಯಾ ಜೊತೆಗೆ ಹಾಲಿವುಡ್ ಅನ್ನೂ ಗಮನದಲ್ಲಿಟ್ಟುಕೊಂಡು ಸಿನಿಮಾಗಳಿಗೆ ಕೈ ಹಾಕುತ್ತಿರುವ ಪರಿಪಾಠ ಶುರುವಾದಂತಾಗಿದೆ. ಅಲ್ಲು ಅರ್ಜುನ್‌ಗೆ ನಟಿ ಸಮಂತಾ ನಾಯಕಿಯಾಗಲಿದ್ದಾರೆ ಎಂಬ ಸುದ್ದಿಯೂ ಹರಿದಾಡುತ್ತಿದೆ. ❖

ಶಿವರಾಜ್‌ಕುಮಾರ್

## ಮತ್ತೆ ಶಿವಣ್ಣ ಡಾನ್ಸ್ ಪ್ರಾರಂಭ

**ಕ್ಯಾನ್ಸರ್‌ನಿಂದ** ಗುಣಮುಖರಾಗುತ್ತಿರುವ ನಟ ಶಿವರಾಜ್‌ಕುಮಾರ್ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ. ತಮ್ಮ ಆರೋಗ್ಯ ಮತ್ತು ಚಿತ್ರರಂಗದ ಚಟುವಟಿಕೆ ಕುರಿತು ಅವರು ಇತ್ತೀಚೆಗೆ ಮಾಧ್ಯಮಗಳೊಂದಿಗೆ ಮಾತನಾಡಿದರು.

‘ಆರೋಗ್ಯ ಸುಧಾರಿಸುತ್ತಿದೆ. ಈಗ ಮೊದಲಿನಂತೆ ವಾಕಿಂಗ್ ಮಾಡುತ್ತಿರುವೆ. ಬಹುತೇಕ ಸಹಜ ಜೀವನಕ್ಕೆ ಮರಳಿದ್ದೇನೆ. ಡಾನ್ಸ್ ಮಾಡಲು ಶುರು ಮಾಡಿದ್ದೇನೆ. ಸಾಮಾನ್ಯವಾಗಿ ಈ ರೀತಿ ಶಸ್ತ್ರಚಿಕಿತ್ಸೆಗೆ ಒಳಗಾದರೆ ಚೇತರಿಕೆಗೆ ಐದಾರು ತಿಂಗಳು ಬೇಕು. ಆದರೆ ಬೇಗ ಚೇತರಿಕೆಗೊಂಡಿದ್ದೇನೆ. ವೈದ್ಯರು ಪ್ರತಿ ಹತ್ತು ದಿನಕ್ಕೆ ಒಂದು ಸಲ ಫೋನ್ ಮಾಡಿ ಆರೋಗ್ಯ ವಿಚಾರಿಸುತ್ತಾರೆ’ ಎಂದರು ಶಿವಣ್ಣ.

‘ಎರಡು ಜಾಹೀರಾತು ಚಿತ್ರೀಕರಣದಲ್ಲಿ ಭಾಗಿಯಾದೆ. ರಾಮ್‌ಚರಣ್ ನಟನೆಯ ‘ಪೆದ್ದಿ’ ಚಿತ್ರದ ಚಿತ್ರೀಕರಣದಲ್ಲಿ ಎರಡು ದಿನ ಪಾಲ್ಗೊಂಡೆ. ‘131’ ಚಿತ್ರೀಕರಣ ಮುಗಿಸಿ ಇನ್ನೊಂದು ಚಿತ್ರ ಶುರು ಮಾಡಬೇಕು. ಆ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ. ಸದ್ಯದಲ್ಲಿ ಪವನ್ ಒಡೆಯರ್ ಜೊತೆ ಸಿನಿಮಾ ಚಿತ್ರೀಕರಣ ಪ್ರಾರಂಭಿಸಬೇಕು’ ಎಂದು ಅವರು ತಿಳಿಸಿದರು.

‘ಪೆದ್ದಿಯಲ್ಲಿ ವಿಶೇಷ ಪಾತ್ರ. ಜನ ನೋಡಿದಾಗ ಕನೆಕ್ಟ್ ಆಗುತ್ತಾರೆ. ನನಗೆ ರಾಮಚರಣ್ ಮೇಲಿರುವ ಪ್ರೀತಿ, ಅವರಿಗೆ ನನ್ನ ಮೇಲಿನ ಪ್ರೀತಿ ಈ ಪಾತ್ರದಲ್ಲಿದೆ’ ಎಂದರು. ❖

## ಹೊಸಬರ ‘ರಿಕ್ಷಾ ಚಾಲಕ’

ನಂದಿನಿ

**ಆಟೊ** ಚಾಲಕರ ವೈಯಕ್ತಿಕ ಜೀವನ, ನೋವು ನಲಿವಿನ ಕುರಿತಾದ ಕಥೆ ಹೊಂದಿರುವ ‘ರಿಕ್ಷಾ ಚಾಲಕ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಆಯುಷ್ ಶಶಿಕುಮಾರ್ ಚಿತ್ರದ ನಿರ್ದೇಶಕ.

‘ಕರೋನಾದಿಂದ ಲಾಕ್ಡೌನ್ ಆದಾಗ ರಿಕ್ಷಾ ಚಾಲಕರು ಎದುರಿಸಿದ ಸಂಕಷ್ಟ, ಅನುಭವಿಸಿದ ನೋವುಗಳನ್ನೇ ಸಿನಿಮಾವಾಗಿಸಿದ್ದೇವೆ. ಮೈಸೂರು, ವರುಣಾ, ಕೆ.ಆರ್‌.ನಗರ, ಸಾಲಿಗ್ರಾಮ ಹಾಗೂ ಮುರುಡೇಶ್ವರದಲ್ಲಿ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ’ ಎಂದರು ಆಯುಷ್.

ಯುವ ನಟ ಚಿರಂತ್‌ಗೆ ನಂದಿನಿ ಜೋಡಿಯಾಗಿದ್ದಾರೆ. ಬಲ ರಾಜವಾಡಿ, ಚಂದ್ರಪ್ರಭ, ಮಿಮಿಕ್ರಿ ಗೋಪಿ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ. ಶರಾವತಿ ಶಶಿಕುಮಾರ್ ಬಂಡವಾಳ ಹೂಡಿದ್ದು, ವೇದಾಂತ್ ಅತಿಶಯ್ ಜೈನ್ ಸಂಗೀತವಿದೆ. ಆನಂದ್ ಛಾಯಾಚಿತ್ರಗ್ರಹಣ, ವಂಶಿ ಸಂಕಲನವಿದೆ. ❖

# ಉಕ್ರೇನ್ ಮೇಲೆ ರಷ್ಯಾ ದಾಳಿ 30ಕ್ಕೂ ಹೆಚ್ಚು ಮಂದಿ ಸಾವು

**ಕೀವ್ (ಎಪಿ):** ಉಕ್ರೇನ್‌ನ ಸುಮಿ ನಗರದ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದ ಪರಿಣಾಮ 30ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಜನರು ಪವಿತ್ರ ಪಾಮ್ ಸಂಡೇ ಸಂಭ್ರದಲ್ಲಿದ್ದಾಗಲೇ ಬೆಳಿಗ್ಗೆ 10.15ರ ಸುಮಾರಿಗೆ ನಗರದ ಮಧ್ಯಭಾಗದ ಮೇಲೆ ಎರಡು ಖಂಡಾಂತರ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಅವರು ತಿಳಿಸಿದರು.

ನಗರದಾದ್ಯಂತ ದಟ್ಟ ಹೊಗೆ ಆವರಿಸಿರುವ ಮತ್ತು ಭಗ್ನಾವಶೇಷಗಳ ಮಧ್ಯೆ ಮೃತದೇಹಗಳು ಬಿದ್ದಿರುವ ದೃಶ್ಯವಿರುವ ವಿಡಿಯೊಗಳನ್ನು ಸುದ್ದಿಮಾಧ್ಯಮಗಳು ಬಿತ್ತರಿಸಿವೆ.

‘ಪವಿತ್ರ ಪಾಮ್ ಸಂಡೇ ದಿನದಂದೇ ನಮ್ಮ ಸಮುದಾಯವು ಶೋಕದಲ್ಲಿ ಮುಳುಗಿದೆ’ ಎಂದು ಹಂಗಾಮಿ ಮೇಯರ್ ಅರ್ತೆಮ್ ಕೊಬ್ಜಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ದಾಳಿಯಿಂದಾಗಿ ಏಳು ಮಕ್ಕಳು ಸೇರಿದಂತೆ 83 ಮಂದಿ ಗಾಯಗೊಂಡಿದ್ದಾರೆ’ ಎಂದು ಆಂತರಿಕ ವ್ಯವಹಾರಗಳ ಸಚಿವ ಇಹೋರ್ ಕ್ಲಿಮೆನ್ಕೊ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ರಷ್ಯಾ ದಾಳಿ ಬಳಿಕ ಉಕ್ರೇನ್‌ನ ರಕ್ಷಣಾ ಕಾರ್ಯಕರ್ತರು ಅಳಿದುಳಿದವರ ರಕ್ಷಣೆಗೆ ಮುಂದಾದರು ಎಎಫ್‌ಪಿ ಚಿತ್ರ

# ಬ್ರಿಟನ್: ಆಮದು ಸುಂಕ ಕಡಿತ

**ಲಂಡನ್ (ಪಿಟಿಐ):** ಆರ್ಥಿಕ ಬೆಳವಣಿಗೆ ಹೆಚ್ಚಿಸುವ ಪ್ರಯತ್ನದ ಭಾಗವಾಗಿ ಪಾಸ್ತಾ, ಹಣ್ಣಿನ ರಸಗಳು ಮತ್ತು ಮಸಾಲೆ ಪದಾರ್ಥಗಳಿಂದ ಹಿಡಿದು ದೈನಂದಿನ ಅಗತ್ಯ ವಸ್ತುಗಳು ಸೇರಿ ಹಲವು ವಿದೇಶಿ ಉತ್ಪನ್ನಗಳ ಬೆಲೆಗಳನ್ನು ತಗ್ಗಿಸಲು ಆಮದು ಸುಂಕ ಕಡಿತಗೊಳಿಸುವುದಾಗಿ ಬ್ರಿಟನ್ ಭಾನುವಾರ ಪ್ರಕಟಿಸಿದೆ.

89 ಉತ್ಪನ್ನಗಳ ಮೇಲಿನ ಸುಂಕ ಅಮಾನತುಗೊಳಿಸಲಾಗುವುದು ಎಂದು ವ್ಯವಹಾರ ಮತ್ತು ವ್ಯಾಪಾರ ಇಲಾಖೆ (ಡಿಬಿಟಿ) ಹೇಳಿದೆ. ಇದರಿಂದ ವಾರ್ಷಿಕ 1.7 ಕೋಟಿ ಪೌಂಡ್ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿ ಸುಂಕ ವಿಧಿಸಿದ ಹಿನ್ನೆಲೆಯಲ್ಲಿ, 2027ರ ಜುಲೈವರೆಗೆ ಶೂನ್ಯ ಸುಂಕದಿಂದ ಪ್ರಯೋಜನ ಪಡೆಯಬಹುದಾದ ವ್ಯವಹಾರಗಳಿಗೆ ವೆಚ್ಚ ತಗ್ಗಿಸಲು ಮತ್ತು ಕೆಲವು ಅಗತ್ಯ ವಸ್ತುಗಳ ಆಮದು ಸುಂಕ ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ ಎಂದು ಡಿಬಿಟಿ ಹೇಳಿದೆ.

‘ಮುಕ್ತ ವ್ಯಾಪಾರವು ಆರ್ಥಿಕತೆ ಬೆಳಸಲಿದೆ. ಬೆಲೆ ತಗ್ಗಿಸಲಿದೆ. ಮಾರಾಟಕ್ಕೂ ನೆರವಾಗಲಿದೆ. ಅದಕ್ಕಾಗಿಯೇ ನಾವು ಹಲವು ಉತ್ಪನ್ನಗಳ ಮೇಲಿನ ಸುಂಕ ಕಡಿತಗೊಳಿಸುತ್ತಿದ್ದೇವೆ’ ಎಂದು ಡಿಬಿಟಿ ಕಾರ್ಯದರ್ಶಿ ಜೊನಾಥನ್ ರೆನಾಲ್ಡ್ಸ್ ಹೇಳಿದ್ದಾರೆ.

ಭಾರತ, ಗಲ್ಫ್ ಸಹಕಾರ ಮಂಡಳಿ, ದಕ್ಷಿಣ ಕೊರಿಯಾ ಮತ್ತು ಸ್ವಿಟ್ಜರ್ಲೆಂಡ್ ಸೇರಿದಂತೆ ಪಾಲುದಾರರೊಂದಿಗೆ ವ್ಯಾಪಾರ ಒಪ್ಪಂದಗಳ ಮಾತುಕತೆಗೆ ಬ್ರಿಟನ್ ಚುರುಕು ನೀಡಿದೆ. ದ್ವಿಪಕ್ಷೀಯ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಮಾತುಕತೆಗೆ ಮತ್ತಷ್ಟು ವೇಗ ನೀಡುವ ಸಲುವಾಗಿಯೇ ಇತ್ತೀಚೆಗಷ್ಟೇ ಬ್ರಿಟನ್ ಚಾನ್ಸಲರ್ ರಾಚೆಲ್ ರೀವ್ಸ್ ಅವರು ಭಾರತದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ವ್ಯಾಪಕ ಮಾತುಕತೆ ಕೂಡ ನಡೆಸಿದ್ದರು.

**ಸಂಕ್ಷಿಪ್ತ ಸುದ್ದಿ**

## ‘ಎಲೆಕ್ಟ್ರಾನಿಕ್ ಉತ್ಪನ್ನ: ಪ್ರತ್ಯೇಕ ಸುಂಕ’

**ವಾಷಿಂಗ್ಟನ್ (ರಾಯಿಟರ್ಸ್/ಎಪಿ):** ಪ್ರತಿ ಸುಂಕದಿಂದ ವಿನಾಯಿತಿ ಪಡೆದಿರುವ ಎಲೆಕ್ಟ್ರಾನಿಕ್ ಉತ್ಪನ್ನಗಳು ಪ್ರತ್ಯೇಕ ಸುಂಕದ ಅಡಿಯಲ್ಲಿ ಬರಲಿವೆ ಎಂದು ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ಹೇಳಿದ್ದಾರೆ.

‘ಪ್ರತಿ ಸುಂಕ ವಿನಾಯಿತಿಯು ತಾತ್ಕಾಲಿಕ ಪರಿಹಾರ ಮಾತ್ರ. ಏಕೆಂದರೆ ಸೆಮಿಕಂಡಕ್ಟರ್ ಉದ್ಯಮಕ್ಕೆ ನಿರ್ದಿಷ್ಟ ಸುಂಕ ವಿಧಾನವನ್ನು ಅಳವಡಿಸುವಾಗ ಸ್ಮಾರ್ಟ್‌ಫೋನ್‌ಗಳು, ಕಂಪ್ಯೂಟರ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳಿಗೂ ಪ್ರತ್ಯೇಕ ಸುಂಕ ನಿಗದಿ ಮಾಡಲಾಗುತ್ತದೆ’ ಎಂದು ಅವರು ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ಸೆಮಿಕಂಡಕ್ಟರ್ ಉದ್ಯಮದ ಸರಕುಗಳಿಗೆ ಇನ್ನೊಂದು ತಿಂಗಳಲ್ಲಿ ಸುಂಕ ನಿಗದಿಪಡಿಸುವ ಸಾಧ್ಯತೆಯಿದೆ ಎಂದಿದ್ದಾರೆ.

ಎಲೆಕ್ಟ್ರಾನಿಕ್ಸ್ ಸರಕುಗಳಿಗೆ ಪ್ರತಿ ಸುಂಕಗಳಿಂದ ವಿನಾಯಿತಿ ನೀಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಶುಕ್ರವಾರ ಘೋಷಿಸಿತ್ತು. ಇದರಿಂದ ಆ್ಯಪಲ್‌ನಂತಹ ಕಂಪನಿಗಳಿಗೆ ಪ್ರಯೋಜನ ಲಭಿಸಲಿದೆ.

## ಹಸೀನಾ, ಸಹೋದರಿ ವಿರುದ್ಧ ಹೊಸ ಅರೆಸ್ಟ್ ವಾರಂಟ್ ಜಾರಿ

**ಢಾಕಾ (ಪಿಟಿಐ):** ರಾಜಕೀಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು, ಅಕ್ರಮವಾಗಿ ಹಣ ಸಂಪಾದಿಸಿದ ಆರೋಪದ ಮೇಲೆ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ, ಆಕೆಯ ಸಹೋದರಿ ಶೇಖ್ ರೆಹಾನಾ, ಅವರ ಸಂಬಂಧಿಯೂ ಆದ ಬ್ರಿಟನ್‌ನ ಸಂಸದೆ ತುಲಿಪ್ ರಿಜ್ವಾನಾ ಸಿದ್ದಿಕ್ ಹಾಗೂ 50 ಮಂದಿಯ ವಿರುದ್ಧ ಬಾಂಗ್ಲಾದೇಶ ನ್ಯಾಯಾಲಯವು ಭಾನುವಾರ ಬಂಧನ ವಾರಂಟ್ ಹೊರಡಿಸಿದೆ.

‘ಭ್ರಷ್ಟಾಚಾರ ನಿಗ್ರಹ ಆಯೋಗವು (ಎಸಿಸಿ) ಸಲ್ಲಿಸಿದ್ದ ಮೂರು ಪ್ರತ್ಯೇಕ ದೋಷಾರೋಪ ಪಟ್ಟಿ ಸ್ವೀಕರಿಸಿ ಢಾಕಾದ ಮೆಟ್ರೊಪಾಲಿಟನ್‌ನ ಹಿರಿಯ ವಿಶೇಷ ನ್ಯಾಯಾಧೀಶ ಝಾಕೀರ್ ಹೊಸೈನ್ ಗಾಲಿಬ್ ಅವರು ಈ ಆದೇಶ ಪ್ರಕಟಿಸಿದರು’ ಎಂದು ‘ಢಾಕಾ ಟ್ರಿಬ್ಯೂನ್’ ಪತ್ರಿಕೆ ವರದಿ ಮಾಡಿದೆ. ಬಂಧನ ಆದೇಶ ಪರಿಶೀಲಿಸಲು ಏ.27ರಂದು ದಿನಾಂಕ ನಿಗದಿಪಡಿಸಿದರು ಎಂದು ಎಸಿಸಿಯ ನಿರ್ದೇಶಕ (ಪ್ರಾಸಿಕ್ಯೂಟರ್) ಅಮಿನುಲ್ ಇಸ್ಲಾಂ ತಿಳಿಸಿದರು.

## ನೇಪಾಳ: ಘರ್ಷಣೆ

**ಕಾಠ್ಮಂಡು (ಪಿಟಿಐ):** ನೇಪಾಳದ ಪರ್ಸಾ ಜಿಲ್ಲೆಯ ಬೀರಗಂಜ್‌ನಲ್ಲಿ ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಸಂಘರ್ಷ ಉಂಟಾಗಿದ್ದು, ಕರ್ಫ್ಯೂ ವಿಧಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಬೀರಗಂಜ್‌ನಲ್ಲಿ ಭಾನುವಾರ ಮಧ್ಯಾಹ್ನದವರೆಗೆ ಕರ್ಫ್ಯೂ ವಿಧಿಸಲಾಗಿತ್ತು. ಆ ಬಳಿಕ ಕರ್ಫ್ಯೂವನ್ನು ವಿಸ್ತರಿಸಲಾಗಿದೆ’ ಎಂದು ಜಿಲ್ಲಾಡಳಿತ ತಿಳಿಸಿದೆ. ‘ಹನುಮನ ಮೂರ್ತಿಯ ಮೆರವಣಿಗೆ ಬೀರಗಂಜ್‌ನ ಘಂಟಾಘರ್‌ನಿಂದ ಆರಂಭವಾಗಿ ಪ್ರಮುಖ ರಸ್ತೆಗಳಲ್ಲಿ ಸಾಗಿದೆ. ಈ ವೇಳೆ ಕೆಲವು ದುಷ್ಕರ್ಮಿಗಳು ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ್ದು, ಎರಡು ಗುಂಪುಗಳ ನಡುವೆ ಘರ್ಷಣೆಗೆ ಕಾರಣವಾಯಿತು. ಪೊಲೀಸರು ಒಳಗೊಂಡಂತೆ 10ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಚೆಸ್: ಅಗ್ರಸ್ಥಾನಕ್ಕೇರಿದ ಪ್ರಣವ್ ಟೂರ್ನಿಯಿಂದ ಹಿಂದಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಆಟಗಾರ, ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ಆನಂದ್ ಅವರು ‘ನಮ್ಮ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ’ಯ ಆರನೇ ಸುತ್ತಿನ ಬಳಿಕ ಗರಿಷ್ಠ ಆರು ಪಾಯಿಂಟ್‌ಗಳೊಡನೆ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು. ಆದರೆ ಈ ಹಂತದಲ್ಲೇ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ವಿದೇಶಿ ಟೂರ್ನಿಯಲ್ಲಿ ಆಡಲು ಮೊದಲೇ ನಿರ್ಧರಿಸಿ ಸಿದ್ಧತೆ ನಡೆಸಿದ್ದ ಬೆಂಗಳೂರಿನ ಆಟಗಾರ, ಈ ಸಂಬಂಧ ಆಯೋಜಕರಿಂದ ಪೂರ್ವಾನುಮತಿ ಪಡೆದಿದ್ದರು ಎಂದು ಮೂಲವೊಂದು ತಿಳಿಸಿದೆ. ಸೋಮವಾರ ಈ ಟೂರ್ನಿಗೆ ವಿರಾಮದ ದಿನವಾಗಿದ್ದು ಬ್ಲಿಟ್ಜ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕದ ಪ್ರಣವ್ ಭಾನುವಾರ ಆರನೇ ಸುತ್ತಿನಲ್ಲಿ ಜಾರ್ಜಿಯಾದ ಗ್ರ್ಯಾಂಡ್ ಮಾಸ್ಟರ್ ಲೆವೊನ್ ಪಂತ್ಸುಲೈಯಾ (5) ಅವರನ್ನು ಸೋಲಿಸಿದರು.

ಗೋವಾದ ಇತನ್ ವಾಝ್, ಅರ್ಮೇನಿಯಾದ ಮ್ಯಾನ್ಯುವೆಲ್ ಪೆಟ್ರೋಸಿಯಾನ್ ಮತ್ತು ಒಡಿಶಾದ ಪದ್ಮಿನಿ ರಾವುತ್ ಅವರು ತಲಾ 5.5 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಎಂಟು ಮಂದಿ ಆಟಗಾರರು ತಲಾ ಐದು ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನದಲ್ಲಿದ್ದಾರೆ.

ಆರನೇ ಸುತ್ತಿನ ಇತರ ಪಂದ್ಯಗಳಲ್ಲಿ ಲ್ಲಿ ಪೆಟ್ರೋಸಿಯಾನ್, ಎರಡನೇ ಬೋರ್ಡ್‌ನಲ್ಲಿ ತಮಿಳುನಾಡಿನ ಮನಿಷ್ ಅಂಟೊ ಕ್ರಿಸ್ಟಿಯಾನೊ (4.5) ಅವರನ್ನು ಸೋಲಿಸಿದರೆ, ಐಎಂ ಪದ್ಮಿನಿ ಅವರು ಕೇರಳದ ಗೌತಮ್ ಕೃಷ್ಣ (4.5) ಅವರನ್ನು, ಐಎಂ ಇತನ್ ವಾಝ್ ಅವರು ಮಂಗಳೂರಿನ ವಿಯಾನಿ ಡಿ'ಕುನ್ಹ (4.5) ಅವರನ್ನು ಸೋಲಿಸಿದರು.

**ಆದಿತ್ಯಗೆ ಪ್ರಶಸ್ತಿ:** ಉದಯೋನ್ಮುಖ ಆಟಗಾರರಿಗೆ ನಡೆದ ‘ಬಿ’ ವಿಭಾಗದ ಟೂರ್ನಿಯಲ್ಲಿ ಕೇರಳದ ಆದಿತ್ಯ ದಿಲೀಪ್ ರಾಜ್ ಅವರು 10 ಸುತ್ತುಗಳಿಂದ 9 ಪಾಯಿಂಟ್ ಕಲೆಹಾಕಿ ಚಾಂಪಿಯನ್ ಕಿರೀಟ ಧರಿಸಿದರು. ಟ್ರೋಫಿ ಜೊತೆ 1,25,000 ನಗದು ಬಹುಮಾನ ಅವರ ಪಾಲಾಯಿತು.

ಆಂಧ್ರಪ್ರದೇಶ ಅಫ್ರೀದ್ ಖಾನ್ ಎರಡನೇ (8.5) ಮತ್ತು ತಮಿಳುನಾಡಿನ ಪಿ.ರೋಹಿತ್ (8.5) ಸಮಾನ ಅಂಕ ಪಡೆದರೂ, ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಟ್ರೋಫಿಯೊಡನೆ ಇವರಿಬ್ಬರು ಕ್ರಮವಾಗಿ ₹1 ಲಕ್ಷ ಮತ್ತು ₹80 ಸಾವಿರ ಬಹುಮಾನ ಪಡೆದರು.

## ಎಜಿಲಿಟಾಸ್‌ನಲ್ಲಿ ವಿರಾಟ್ ಹೂಡಿಕೆ



**ನವದೆಹಲಿ (ಪಿಟಿಐ):** ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರು ಕ್ರೀಡಾ ಉಡುಪುಗಳ ತಯಾರಕರಾದ ‘ಎಜಿಲಿಟಾಸ್’ ಕಂಪೆನಿಯಲ್ಲಿ ಹೂಡಿಕೆ ಮಾಡಿದ್ದಾರೆ. ಜೊತೆಗೆ ಕೋ ಕ್ರಿಯೆಟರ್ ಕೂಡ ಆಗಿದ್ದಾರೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಕ್ರೀಡಾ ಉಡುಪು ತಯಾರಿಕಾ ಸಂಸ್ಥೆ ‘ಪೂಮಾ’ದೊಂದಿಗೆ ವಿರಾಟ್ ಅವರು ಮಾಡಿಕೊಂಡಿದ್ದ ಎಂಟು ವರ್ಷಗಳ ಒಪ್ಪಂದ ಈಚೆಗೆ ಕೊನೆಗೊಂಡಿತ್ತು. ಪೂಮಾ ಸಂಸ್ಥೆಗೆ ವಿರಾಟ್ ಪ್ರಚಾರ ರಾಯಭಾರಿಯಾಗಿದ್ದರು. ಒಪ್ಪಂದವನ್ನು ಮುಂದಿನ ಎಂಟು ವರ್ಷಗಳ ಅವಧಿಗೆ ಮುಂದುವರಿಸಲು ಕೊಹ್ಲಿ ಅವರಿಗೆ ಪೂಮಾ ₹ 300 ಕೋಟಿ ನೀಡುವುದಾಗಿ ಪ್ರಸ್ತಾವ ಸಲ್ಲಿಸಿತ್ತು. ಆದರೆ ಕೊಹ್ಲಿ ಅವರು ಸಮ್ಮತಿಸಿರಲಿಲ್ಲ.

ಅವರು ಎಜಿಲಿಟಾಸ್ ಸಂಸ್ಥೆಯಲ್ಲಿ ಹೂಡಿಕೆ ಮಾಡಿ ಪಾಲುದಾರರಾಗುವ ನಿರ್ಧಾರ ಕೈಗೊಂಡರು. ಈ ಕುರಿತು ಮುಂದಿನ ಮೂರು ತಿಂಗಳೊಳಗೆ ಅಧಿಕೃತ ಘೋಷಣೆ ಮಾಡುವ ಸಾಧ್ಯತೆ ಇದೆ. 2023ರಲ್ಲಿ ಎಜಿಲಿಟಾಸ್ ಆರಂಭವಾಗಿತ್ತು ಎಂದು ಮೂಲಗಳು ತಿಳಿಸಿವೆ.

ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದ ಆತಿಥೇಯ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ. (ನಿಂತವರು) ಎಡದಿಂದ; ಆಧ್ಯಾ, ಅನ್ವೈಧ್ಯಾ, ಆಶಿ, ಅದಿತಿ, ಜೆ. ದಿಲೀಪ್ (ಒಲಿಪಿಯನ್), ಮೋಹನ್ ಕುಮಾರ್ (ಮುಖ್ಯ ಕೋಚ್), ಸುಷ್ಮಾ ಗೋಲ್ (ಕೋಚ್) , ಆಕಾಂಕ್ಷಾ, ಓಜಸ್ವಿ. (ಕುಳಿತವರು) ದಿಶ್, ಹಿತಾ, ಯಾಮಿನಿ, ದೇವಾಂಶಿ, ಸೈದಾ ಇರಾ, ಕನಿಷ್ಕಾ

## ಮಡಿಕೇರಿ: ಕೊಡವ ಕೌಟುಂಬಿಕ ಹಾಕಿ ಟೂರ್ನಿ
# ಅಲ್ಲಪಂಡ, ಕೂತಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ಅಲ್ಲಪಂಡ ಮತ್ತು ಕೂತಂಡ ತಂಡಗಳು ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿ ‘ಮುದ್ದಂಡ ಕಪ್’ನಲ್ಲಿ ಭಾನುವಾರ ಗೆಲುವು ಸಾಧಿಸಿದವು.

ಅಲ್ಲಪಂಡ ತಂಡವು ಪಟ್ಟಡ ವಿರುದ್ಧ ಹಾಗೂ ಕೂತಂಡ ತಂಡವು ಬೊಜ್ಜಂಗಡ ವಿರುದ್ಧ ತಲಾ 6–0 ಗೋಲುಗಳ ಅಂತರದಿಂದ ಜಯ ಗಳಿಸಿದವು. ಬಿಪಿನ್ ಅಯ್ಯಪ್ಪ ಗಳಿಸಿದ ನಾಲ್ಕು ಗೋಲುಗಳ ನೆರವಿನಿಂದ ಚೋಯಮಾಡಂಡ ತಂಡವು 4–1ರಿಂದ ಅಪ್ಪಾರಂಡ ಎದುರು ಜಯ ಗಳಿಸಿತು.

ಉಳಿದ ಪಂದ್ಯಗಳಲ್ಲಿ ಕೋಟೆರ 5-1ರಿಂದ ಅಪ್ಪನೆರವಂಡ ವಿರುದ್ಧ, ಅಮ್ಮಣಿಚಂಡ 4-0ಯಿಂದ ಬೊಳಕಾರಂಡ ವಿರುದ್ಧ, ಐಚೆಟ್ಟಿರ 4-0ಯಿಂದ ಕಳಕಂಡ ವಿರುದ್ಧ, ಚೇನಂಡ 4-0 ಯಿಂದ ತಾಪಂಡ ವಿರುದ್ಧ, ಅಮ್ಮಂಡ 3-2ರಿಂದ ಕಲಿಯಾಟಂ ವಿರುದ್ಧ, ಪುಳ್ಳಂಗಡ 3-1ರಿಂದ ಅಜ್ಜೆಟ್ಟಿರ ವಿರುದ್ಧ ಗೆಲುವು ಸಾಧಿಸಿದವು. ಪೆಮ್ಮಂಡ 2-0ಯಿಂದ ಬೊಳಿಯಾಡಿರ ವಿರುದ್ಧ, ಕುಲ್ಲಚಂಡ 2-1ರಿಂದ ಆಲೆಮಾಡ ವಿರುದ್ಧ, ಅಜ್ಜಮಾಡ 2-1ರಿಂದ ಕೊಟ್ಟಂಗಡ ವಿರುದ್ಧ, ನಾಳಿಯಂಡ 2-1ರಿಂದ ತೀತಮಾಡ ವಿರುದ್ಧ, ಕೊಂಗೇಟಿರ 2-1ರಿಂದ ಕಾಳಿಮಾಡ ವಿರುದ್ಧ ಜಯ ಗಳಿಸಿದವು.

‘ಮುದ್ದಂಡ ಕಪ್’ನಲ್ಲಿ ಭಾನುವಾರ ನಾಳಿಯಂಡ ಮತ್ತು ತೀತಮಾಡ ತಂಡಗಳ ಆಟಗಾರರು ಚೆಂಡಿಗಾಗಿ ಸೆಟಸಾಟ ನಡೆಸಿದರು

## ಪಾಕ್ ಜಲಸಂಧಿ ಈಜಿದ ಪ್ಯಾರಾ ಈಜುಪಟು ಧ್ಯಾನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂತರರಾಷ್ಟ್ರೀಯ ಪ್ಯಾರಾ ಈಜುಪಟು ಧ್ಯಾನ್ ಕಶ್ಯಪ್ ಎನ್.ಎಂ. ಅವರು ಭಾನುವಾರ ಪಾಕ್ ಜಲಸಂಧಿಯ 29 ಕಿಲೋ ಮೀಟರ್ ದೂರವನ್ನು 11 ಗಂಟೆ 35 ನಿಮಿಷದಲ್ಲಿ ಕ್ರಮಿಸಿದ್ದಾರೆ.

ನಗರದ ಖೇಲೊ ಇಂಡಿಯಾ ರಾಷ್ಟ್ರೀಯ ಉತ್ಕೃಷ್ಟತಾ ಕೇಂದ್ರದಲ್ಲಿ ಮುಖ್ಯ ಕೋಚ್ ಸುಂದರೇಶ್ ಸತ್ಯನಾರಾಯಣ ಅವರಿಂದ 19 ವರ್ಷ ವಯಸ್ಸಿನ ಧ್ಯಾನ್ ತರಬೇತಿ ಪಡೆಯುತ್ತಿದ್ದಾರೆ. ಭಾನುವಾರ ನಸುಕಿನ ಜಾವ 3.30ಕ್ಕೆ ಶ್ರೀಲಂಕಾದ ತಲೈಮನ್ನಾರ್‌ನಿಂದ ಈಜು ಆರಂಭಿಸಿ, ಮಧ್ಯಾಹ್ನ 3.05ಕ್ಕೆ ಭಾರತದ ಧನುಷ್ಕೋಡಿ ತಲುಪಿದ್ದಾರೆ.

ಬೆಂಗಳೂರಿನ ರೇವಾ ವಿಶ್ವವಿದ್ಯಾಲಯದಲ್ಲಿ ಎರಡನೇ ವರ್ಷದ ಬಿ.ಕಾಂ ಓದುತ್ತಿರುವ ಧ್ಯಾನ್ ಅವರು ಈಗಾಗಲೇ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ಯಾರಾ ಈಜು ಕೂಟಗಳಲ್ಲಿ ಎಸ್–10 ವಿಭಾಗದಲ್ಲಿ ಸ್ಪರ್ಧಿಸಿದ್ದಾರೆ.

‘ಹುಟ್ಟಿನಿಂದಲೇ ನನ್ನ ಬಲಗಾಲಿನ ಬೆಳವಣಿಗೆ ಕುಂಠಿತವಾಗಿದೆ. ಆ ನ್ಯೂನತೆ ಮೆಟ್ಟಿನಿಂತು ಒಂಬತ್ತು ವರ್ಷಗಳಿಂದ ಈಜು ತರಬೇತಿ ಪಡೆಯುತ್ತಿದ್ದೇನೆ. ಮುಂದಿನ ಏಷ್ಯನ್ ಪ್ಯಾರಾ ಕ್ರೀಡಾಕೂಟ ಮತ್ತು ಲಾಸ್ ಏಂಜಲೀಸ್ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಪ್ರಯತ್ನದಲ್ಲಿದ್ದೇನೆ. ಜೊತೆಗೆ ‘ಇಂಗ್ಲಿಷ್ ಕಾಲುವೆ’ಯನ್ನು ಕ್ರಮಿಸುವ ಗುರಿ ಹೊಂದಿದ್ದೇನೆ’ ಎಂದು ಧ್ಯಾನ್ ಪ್ರತಿಕ್ರಿಯಿಸಿದ್ದಾರೆ.

‘ಎರಡು ವರ್ಷದ ಹಿಂದೆ ಉತ್ಕೃಷ್ಟತಾ ಕೇಂದ್ರಕ್ಕೆ ಧ್ಯಾನ್ ಆಯ್ಕೆಯಾದಾಗಲೇ ಸ್ಪರ್ಧೆಗಳಿಗೆ ಸಜ್ಜಾಗುವ ಜೊತೆಗೆ ಪಾಕ್ ಜಲಸಂಧಿ ಕ್ರಮಿಸುವ ಇಂಗಿತ ವ್ಯಕ್ತಪಡಿಸಿದ್ದರು. ಈ ನಿಟ್ಟಿನಲ್ಲಿ ಅವರಿಗೆ ತರಬೇತಿ ನೀಡಲಾಗಿತ್ತು. ಕಳೆದ ಮಹಾಶಿವರಾತ್ರಿಯಂದು ಅವರು 10 ಕಿ.ಮೀ ದೂರ ಈಜಿ ಪೂರ್ವತಯಾರಿ ಮಾಡಿಕೊಂಡಿದ್ದರು’ ಎಂದು ಮುಖ್ಯ ಕೋಚ್ ಸುಂದರೇಶ್ ಹೇಳಿದ್ದಾರೆ.

ಕೋಚ್ ಸುಂದರೇಶ್ ಸತ್ಯನಾರಾಯಣ ಅವರೊಂದಿಗೆ ಪ್ಯಾರಾ ಈಜುಪಟು ಧ್ಯಾನ್ ಕಶ್ಯಪ್

## ಬೀಗಲ್ಸ್, ಸದರ್ನ್ ಬ್ಲೂಸ್‌ಗೆ ಪ್ರಶಸ್ತಿ

**ಬೆಂಗಳೂರು:** ಆತಿಥೇಯ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ಸದರ್ನ್ ಬ್ಲೂಸ್ ತಂಡವು ಭಾನುವಾರ ಮುಕ್ತಾಯಗೊಂಡ 13 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಸಾನ್ವಿ (18) ಮತ್ತು ಆಶಿ (16) ಅವರ ಅಮೋಘ ಆಟದ ಬಲದಿಂದ ಬೀಗಲ್ಸ್ ತಂಡವು ಬಾಲಕಿಯರ ಫೈನಲ್‌ನಲ್ಲಿ 57–24ರಿಂದ ಬೆಂಗಳೂರು ಸ್ಪೋರ್ಟಿಂಗ್ ತಂಡವನ್ನು ಮಣಿಸಿತು. ಸ್ಪೋರ್ಟಿಂಗ್ ಪರ ಅಂಕಿತಾ 10 ಅಂಕ ಗಳಿಸಿದರು. ಉತ್ತಮ ಆಟಗಾರ್ತಿಯಾಗಿ ಸಾನ್ವಿ ಹೊರಹೊಮ್ಮಿದರು. ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಎಚ್‌ಬಿಆರ್ ತಂಡವು 31–26ರಿಂದ ವೈಎನ್‌ಬಿಸಿ ತಂಡವನ್ನು ಸೋಲಿಸಿತು.

ಬಾಲಕರ ಫೈನಲ್‌ನಲ್ಲಿ ಸದರ್ನ್ ತಂಡವು 62–38ರಿಂದ ಎಂಎನ್‌ಕೆ ರಾವ್ ತಂಡವನ್ನು ಸೋಲಿಸಿತು. ಸದರ್ನ್ ಪರ ತ್ರಿನಾಭ್ 24, ಶೌರ್ಯ 12 ಅಂಕ ಗಳಿಸಿದರೆ, ಎಂಎನ್‌ಕೆ ಪರ ಅನಿರುದ್ಧ 15 ಪಾಯಿಂಟ್ಸ್ ಕಲೆ ಹಾಕಿದರು. ತ್ರಿನಾಭ್ ಉತ್ತಮ ಆಟಗಾರ ಗೌರವಕ್ಕೆ ಪಾತ್ರವಾದರು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಪಿಪಿಸಿ ತಂಡವು 61–38ರಿಂದ ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡವನ್ನು ಮಣಿಸಿತು.

ವಿರಾಟ್ ಕೊಹ್ಲಿ ಅರ್ಧಶತಕ • ಮಿಂಚಿದ ದೇವದತ್ತ ಪಡಿಕ್ಕಲ್ • ಬೆಂಗಳೂರು ಬಳಗಕ್ಕೆ ಗೆಲುವಿನ ಸಂಭ್ರಮ

# ಬೆಂಗಳೂರಿಗೆ ಜಯದ ಸಿಹಿಯುಣಿಸಿದ ಸಾಲ್ಟ್!

**ಜೈಪುರ (ಪಿಟಿಐ):** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರಿನಾಚೆಯ ತಾಣಗಳಲ್ಲಿ ಗೆಲುವಿನ ಓಟವನ್ನು ಮುಂದುವರಿಸಿತು.

ಭಾನುವಾರ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಿಂಚಿನ ಬ್ಯಾಟಿಂಗ್ ಮಾಡಿದ ಫಿಲ್ ಸಾಲ್ಟ್ ಮತ್ತು ತಾಳ್ಮೆಯುತ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ ಅವರಿಂದಾಗಿ ಬೆಂಗಳೂರು ಬಳಗವು 9 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು.

ಮಧ್ಯಾಹ್ನ ಬಿಸಿಲಿನಲ್ಲಿ ಟಾಸ್ ಗೆದ್ದ ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಹಸಿರು ಪೋಷಾಕು ತೊಟ್ಟು ಕಣಕ್ಕಿಳಿದ ಆರ್‌ಸಿಬಿ ತಂಡದ ಬೌಲರ್‌ಗಳು ಉತ್ತಮ ಬೌಲಿಂಗ್ ಮಾಡಿದರು. ದಾಳಿಯನ್ನು ಸಮರ್ಥವಾಗಿ ಮೆಟ್ಟಿ ನಿಂತ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ (75; 47ಎ) ಬಲದಿಂದ ರಾಯಲ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 173 ರನ್ ಗಳಿಸಿತು.

ಅದಕ್ಕುತ್ತರವಾಗಿ ಆರ್‌ಸಿಬಿ ನಿರಾಯಾಸ ಜಯ ಸಾಧಿಸಲು ಸಾಲ್ಟ್ (65; 33ಎ, 4X5, 6X6) ಮತ್ತು ವಿರಾಟ್ (ಔಟಾಗದೇ 62; 45ಎ, 4X4, 6X2) ಕಾರಣರಾದರು. ಕನ್ನಡಿಗ ಪಡಿಕ್ಕಲ್ ಕೂಡ ಅಜೇಯ 40 ರನ್ ಗಳಿಸಿ, ಗೆಲುವಿಗೆ ಕಾಣಿಕೆ ನೀಡಿದರು. 17.3 ಓವರ್‌ಗಳಲ್ಲಿ 1 ವಿಕೆಟ್‌ಗೆ 175 ರನ್ ಗಳಿಸಿತು.

ಬೆಂಗಳೂರು ತಂಡಕ್ಕೆ ಇದು 6ನೇ ಪಂದ್ಯ ಮತ್ತು ನಾಲ್ಕನೇ ಜಯ. ಬೆಂಗಳೂರಿನಲ್ಲಿ ಆಡಿದ ಎರಡೂ ಪಂದ್ಯಗಳನ್ನೂ ಸೋತಿರುವ ರಜತ್ ಬಳಗ ತವರಿನಾಚೆ ಆಡಿದ ಎಲ್ಲ ಪಂದ್ಯಗಳಲ್ಲಿಯೂ ಗೆದ್ದಿದೆ. ಈಚೆಗಷ್ಟೇ ಗುಜರಾತ್ ಟೈಟನ್ಸ್ ವಿರುದ್ಧ ಸೋತಿದ್ದ ರಾಯಲ್ಸ್ ತಂಡದ ಗಾಯಕ್ಕೆ ಇಲ್ಲಿ ಆರ್‌ಸಿಬಿಯ ಸಾಲ್ಟ್ ಮತ್ತು ವಿರಾಟ್ ಉಪ್ಪು ಸವರಿದರು. ಸಂಜು ಬಳಗಕ್ಕೆ ಟೂರ್ನಿಯಲ್ಲಿ ಇದು ನಾಲ್ಕನೇ ಸೋಲು.

ಈಚೆಗೆ ಡೆಲ್ಲಿ ಎದುರಿನ ಪಂದ್ಯದಲ್ಲಿ ಆರ್‌ಸಿಬಿಯು ಇನಿಂಗ್ಸ್‌ನ ಮೊದಲ ಮೂರು ಓವರ್‌ಗಳಲ್ಲಿ 50 ರನ್ ಸೇರಲು ಕಾರಣರಾಗಿದ್ದ ಸಾಲ್ಟ್ ಅಬ್ಬರ ಇಲ್ಲಿಯೂ ಮುಂದುವರಿಯಿತು. ಕ್ರೀಸ್‌ನಲ್ಲಿ ಸಾಲ್ಟ್ ಇದ್ದಷ್ಟು ಹೊತ್ತು ವಿರಾಟ್ ಅವರು ದೊಡ್ಡ ಹೊಡೆತಗಳಿಗೆ ಪ್ರಯತ್ನಿಸಲಿಲ್ಲ. ಪವರ್‌ಪ್ಲೇ ಅವಧಿಯಲ್ಲಿ 65 ರನ್‌ಗಳು ಖಾತೆ ಸೇರಿದವು.

ಸಾಲ್ಟ್ ಅವರು 28 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದರಲ್ಲಿ ನಾಲ್ಕು ಅಮೋಘ ಸಿಕ್ಸರ್‌ಗಳು ಇದ್ದವು. 9ನೇ ಓವರ್ ಹಾಕಿದ ಕುಮಾರ ಕಾರ್ತಿಕೆಯ ಎಸೆತದಲ್ಲಿ ಸಿಕ್ಸರ್ ಹೊಡೆಯಲು ಪ್ರಯತ್ನಿಸಿದ ಸಾಲ್ಟ್ ಅವರು ಬೌಂಡರಿಲೈನ್‌ನಲ್ಲಿದ್ದ ಜೈಸ್ವಾಲ್‌ಗೆ ಸುಲಭ ಕ್ಯಾಚ್ ಆದರು. 92 (52ಎಸೆತ) ರನ್‌ಗಳ ಮೊದಲ ವಿಕೆಟ್ ಜೊತೆಯಾಟವೂ ಮುರಿಯಿತು. 24 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ವಿರಾಟ್ ಇನಿಂಗ್ಸ್ ನಿಭಾಯಿಸುವ ಹೊಣೆಯನ್ನು ತಮ್ಮ ಕೈಗೆತ್ತಿಕೊಂಡರು. ಟೂರ್ನಿಯಲ್ಲಿ 3ನೇ ಅರ್ಧಶತಕ ಪೂರೈಸಿದರು. ದೇವದತ್ತ ಅವರೊಂದಿಗೆ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 83 (54ಎಸೆತ) ರನ್ ಸೇರಿಸಿದರು.



ಜೈಪುರದಲ್ಲಿ ಭಾನುವಾರ ನಡೆದ ಪಂದ್ಯದ ನಂತರ ರಾಜಸ್ಥಾನ ರಾಯಲ್ಸ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಆರ್‌ಸಿಬಿಯ ವಿರಾಟ್ ಕೊಹ್ಲಿ ಹಾಗೂ ಬೌಲರ್ ಭುವನೇಶ್ವರ್ ಕುಮಾರ್ ಮಾತುಕತೆ –ಪಿಟಿಐ ಚಿತ್ರ

ಆರ್‌ಸಿಬಿ ಬೌಲರ್‌ಗಳ ದಾಳಿಯೂ ಪರಿಣಾಮಕಾರಿಯಾಗಿತ್ತು. ರಾಯಲ್ಸ್ ತಂಡದ ಯಶಸ್ವಿ ಮತ್ತು ಸಂಜು (15 ರನ್) ಜೋಡಿಯು ಉತ್ತಮ ಆರಂಭ ನೀಡಿತು. ಮೊದಲ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು. ಸ್ಪಿನ್ನರ್ ಕೃಣಾಲ್ ಪಾಂಡ್ಯ ಬೌಲಿಂಗ್‌ನಲ್ಲಿ ಸಂಜು ಅವರನ್ನು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಸ್ಟಂಪಿಂಗ್ ಮಾಡಿದರು. ಜೊತೆಯಾಟ ಮುರಿಯಿತು.

ಯಶಸ್ವಿ ಜೊತೆಗೂಡಿದ ರಿಯಾನ್ ಪರಾಗ್ (30; 22ಎ) ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ 56 ರನ್ ಸೇರಿಸಿದರು. ಆದರೆ ಇವರ ಜೊತೆಯಾಟದಲ್ಲಿಯೂ ಅಬ್ಬರವಿರಲಿಲ್ಲ. ಪರಾಗ್ ಔಟಾದಾಗ ತಂಡದ ಖಾತೆಯಲ್ಲಿ 105 ರನ್‌ಗಳು ಮಾತ್ರ ಇದ್ದವು.

ಸ್ವಲ್ಪ ಹೊತ್ತಿನ ನಂತರ ಯಶಸ್ವಿ ಕೂಡ ಔಟಾದರು. ಆದರೆ ತಂಡವು ಹೋರಾಟದ ಮೊತ್ತ ಗಳಿಸಲು ಧ್ರುವ ಜುರೇಲ್ (ಔಟಾಗದೇ 35; 23ಎ, 4X2, 6X2) ಅವರ ಬೀಸಾಟ ಕಾರಣವಾಯಿತು.

## ಆರ್‌ಸಿಬಿ ಹಸಿರು ಪೋಷಾಕು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು ಹಸಿರು ಪೋಷಾಕು ಧರಿಸಿ ಆಡಿದರು. ಪ್ರತಿ ವರ್ಷವೂ ಪರಿಸರ ಜಾಗೃತಿಗಾಗಿ ಆರ್‌ಸಿಬಿ ತಂಡದವರು ಒಂದು ಪಂದ್ಯದಲ್ಲಿ ಹಸಿರು ಪೋಷಾಕು ಧರಿಸಿ ಆಡುವುದು ವಾಡಿಕೆ.

2011ರಿಂದ ಇಲ್ಲಿಯವರೆಗೆ ಹಸಿರು ದಿರಿಸಿನಲ್ಲಿ ಆಡಿದ ಪಂದ್ಯಗಳ ಪೈಕಿ ಐದರಲ್ಲಿ ಜಯಿಸಿದೆ.




ಆರ್‌ಸಿಬಿಯ ಫಿಲ್ ಸಾಲ್ಟ್ ಅರ್ಧಶತಕ ಸಂಭ್ರಮ ಪಿಟಿಐ ಚಿತ್ರ

## ಸ್ಕೋರ್ ಕಾರ್ಡ್

**ರಾಜಸ್ಥಾನ ರಾಯಲ್ಸ್ 4ಕ್ಕೆ173 (20 ಓವರ್‌ಗಳಲ್ಲಿ)**
ಯಶಸ್ವಿ ಎಲ್‌ಬಿಡಬ್ಲ್ಯು ಬಿ ಹೇಜಲ್‌ವುಡ್ 75 (47ಎ, 4X10, 6X2)
ಸಂಜು ಸ್ಟಂಪ್ಡ್ ಜಿತೇಶ್ ಬಿ ಕೃಣಾಲ್ 15 (19ಎ, 4X1)
ಪರಾಗ್ ಸಿ ಕೊಹ್ಲಿ ಬಿ ಯಶ್ 30 (22ಎ, 4X3, 6X1)
ಜುರೇಲ್ ಔಟಾಗದೇ 35 (23ಎ, 4X2, 6X2)
ಹೆಟ್ಮೆಯರ್ ಸಿ ಪಡಿಕ್ಕಲ್ ಬಿ ಭುವನೇಶ್ವರ್ 9 (8ಎ, 4X1)
ರಾಣಾ ಔಟಾಗದೇ 4 (1ಎ, 4X1)
**ಇತರೆ:** 5 (ಲೆಗ್‌ಬೈ 3, ವೈಡ್ 2)
**ವಿಕೆಟ್ ಪತನ:** 1–49 (ಸಂಜು ಸ್ಯಾಮ್ಸನ್; 6.5), 2–105 (ರಿಯಾನ್ ಪರಾಗ್; 13.2), 3–126 (ಯಶಸ್ವಿ ಜೈಸ್ವಾಲ್; 15.6), 4–169 (ಶಿಮ್ರಾನ್ ಹೆಟ್ಮೆಯರ್;19.5)
**ಬೌಲಿಂಗ್:** ಭುವನೇಶ್ವರ್ ಕುಮಾರ್ 4–0–32–1, ಯಶ್ ದಯಾಳ್ 4–0–36–1, ಜೋಷ್ ಹೇಜಲ್‌ವುಡ್ 3–0–26–1, ಕೃಣಾಲ್ ಪಾಂಡ್ಯ 4–0–29–1, ಲಿಯಾಮ್ ಲಿವಿಂಗ್‌ಸ್ಟೋನ್ 1–0–8–0, ಸುಯಶ್ ಶರ್ಮಾ 4–0–39–0

**ರಾಯಲ್ ಚಾಲೆಂಜರ್ಸ್ ಬೆಂಗಳೂರು 1ಕ್ಕೆ175 (17.3 ಓವರ್‌ಗಳಲ್ಲಿ)**
ಸಾಲ್ಟ್ ಸಿ ಯಶಸ್ವಿ ಬಿ ಕಾರ್ತಿಕೇಯ 65 (33ಎ, 4X5, 6X6)
ವಿರಾಟ್ ಔಟಾಗದೇ 62 (45ಎ, 4X4, 6X2)
ದೇವದತ್ತ ಔಟಾಗದೇ 40 (28ಎ, 4X5, 6X1)
**ಇತರೆ:** 8 (ವೈಡ್ 7, ನೋಬಾಲ್ 1)
**ವಿಕೆಟ್ ಪತನ:** 1–92 (ಫಿಲಿಪ್ ಸಾಲ್ಟ್; 8.4)
**ಬೌಲಿಂಗ್:** ಜೋಫ್ರಾ ಆರ್ಚರ್ 4–0–36–0, ತುಷಾರ್ ದೇಶಪಾಂಡೆ 2–0–21–0, ಸಂದೀಪ್ ಶರ್ಮಾ 2.3–0–29–0, ಮಹೀಷ ತೀಕ್ಷಣ 2–0–21–0, ಕುಮಾರ ಕಾರ್ತಿಕೇಯ 3–0–25–1, ವಣಿಂದು ಹಸರಂಗಾ 3–0–33–0, ರಿಯಾನ್ ಪರಾಗ್ 1–0–10–0.
**ಪಂದ್ಯದ ಆಟಗಾರ:** ಫಿಲ್ ಸಾಲ್ಟ್

**ಫಲಿತಾಂಶ: ಆರ್‌ಸಿಬಿ ತಂಡಕ್ಕೆ 9 ವಿಕೆಟ್ ಜಯ**

## ಮೈದಾನಕ್ಕೆ ನುಗ್ಗಿದ ಅಭಿಮಾನಿಗಳು

ಪಂದ್ಯದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರ ಇಬ್ಬರು ಅಭಿಮಾನಿಗಳು ಮೈದಾನಕ್ಕೆ ನುಗ್ಗಿದರು. ಪಂದ್ಯ ಮುಗಿದು ಉಭಯ ತಂಡಗಳ ಆಟಗಾರರು ಪರಸ್ಪರ ಕೈಕುಲುಕುವ ಸಂದರ್ಭದಲ್ಲಿ ಗ್ಯಾಲರಿಯಲ್ಲಿದ್ದ ಇಬ್ಬರು ಯುವಕರು ಆಟದಂಗಳದತ್ತ ಧಾವಿಸಿದರು. ವಿರಾಟ್ ಅವರನ್ನು ಆಲಂಗಿಸಿಕೊಳ್ಳಲು ಪ್ರಯತ್ನಿಸಿದರು. ಭದ್ರತಾ ಸಿಬ್ಬಂದಿಯು ಅವರಿಬ್ಬರನ್ನೂ ವಶಕ್ಕೆ ಪಡೆದು ಹೊರಗೆ ಕರೆದೊಯ್ದರು.

# ಚೆನ್ನೈಗೆ ಜೈಂಟ್ಸ್ ಸವಾಲು

## ಧೋನಿ ಪಡೆಗೆ 6ನೇ ಸೋಲಿನ ಭೀತಿ

ಧೋನಿ

**ಲಖನೌ (ಪಿಟಿಐ):** ಸತತ ಮೂರು ಪಂದ್ಯಗಳಲ್ಲಿ ಗೆದ್ದಿರುವ ಲಖನೌ ಸೂಪರ್ ಜೈಂಟ್ಸ್ ಮತ್ತು ಐದು ಸೋಲಿನಿಂದ ಜರ್ಜರಿತವಾಗಿರುವ ಚೆನ್ನೈ ಸೂಪರ್ ಜೈಂಟ್ಸ್ ತಂಡಗಳು ಸೋಮವಾರ ಮುಖಾಮುಖಿಯಾಗಲಿವೆ.

ಈ ಹಿಂದಿನ ಯಾವುದೇ ಆವೃತ್ತಿಯಲ್ಲಿಯೂ ಚೆನ್ನೈ ತಂಡವು ಸತತ ಐದು ಪಂದ್ಯಗಳನ್ನು ಸೋತಿರಲಿಲ್ಲ. ಆದರೆ ಈ ಬಾರಿ ತನ್ನ ತವರು ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಮೂರು ಪಂದ್ಯಗಳೂ ಸೇರಿ ಒಟ್ಟು ಐದರಲ್ಲಿ ಸತತ ಸೋಲು ಅನುಭವಿಸಿದೆ. ಅದರಲ್ಲೂ ಕಳೆದ ಪಂದ್ಯದಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ಚೆನ್ನೈ ಮುಗ್ಗರಿಸಿತ್ತು. ಋತುರಾಜ್ ಗಾಯಕವಾಡ ಅವರು ಗಾಯಗೊಂಡು ಟೂರ್ನಿಯಿಂದ ಹೊರ ಬಿದ್ದ ಕಾರಣ ಧೋನಿ ಮತ್ತೆ ನಾಯಕತ್ವ ವಹಿಸಿಕೊಂಡಿದ್ದಾರೆ.

ಚೆನ್ನೈ ತಂಡದ ಬ್ಯಾಟರ್‌ಗಳು ತವರಿನಲ್ಲಿ ಸ್ಪಿನ್ ಬೌಲರ್‌ಗಳ ಎದುರು ಪರದಾಡಿದ್ದರು. ಡೆವೊನ್ ಕಾನ್ವೆ, ರಚಿನ್ ರವೀಂದ್ರ, ವಿಜಯಶಂಕರ್, ರಾಹುಲ್ ತ್ರಿಪಾಠಿ, ದೀಪಕ್ ಹೂಡಾ ಮತ್ತು ಶಿವಂ ದುಬೆ ಅವರ ಮೇಲೆ ತಂಡದ ಬ್ಯಾಟಿಂಗ್ ವಿಭಾಗ ಅವಲಂಬಿತವಾಗಿದೆ. ನಾಯಕ ಧೋನಿ ಅವರು ಕೊನೆಯ ಹಂತದಲ್ಲಿ ಒಂದಿಷ್ಟು ರನ್‌ಗಳ ಕಾಣಿಕೆ ನೀಡುತ್ತಾರೆ.

ಲಖನೌ ತಂಡದಲ್ಲಿ ಉತ್ಸಾಹಿ ಬೌಲಿಂಗ್ ಪಡೆ ಇದೆ. ಶಾರ್ದೂಲ್ ಠಾಕೂರ್, ಆವೇಶ್ ಖಾನ್, ರವಿ ಬಿಷ್ಣೋಯಿ ಹಾಗೂ ದಿಗ್ವೇಶ್ ರಾಠಿ ಅವರು ಚೆನ್ನೈ ಪಡೆಗೆ ಕಠಿಣ ಸವಾಲೊಡ್ಡಬಲ್ಲ ಸಮರ್ಥರು. ಅವರ ಎಸೆತಗಳಲ್ಲಿ ದೊಡ್ಡ ಹೊಡೆತ ಪ್ರಯೋಗಿಸುವ ತಂತ್ರಗಾರಿಕೆಯನ್ನು ರೂಪಿಸುವ ಹೊಣೆ ನಾಯಕ ಧೋನಿ ಮುಂದಿದೆ.

ನಾಯಕ ರಿಷಭ್ ಪಂತ್ ಅವರು ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆದರೆ, ನಿಕೊಲಸ್ ಪೂರನ್ ಪ್ರತಿ ಪಂದ್ಯದಲ್ಲಿಯೂ ರನ್ ಸೂರೆ ಮಾಡುತ್ತಿದ್ದಾರೆ. ಅವರ ಅಬ್ಬರಕ್ಕೆ ಕಡಿವಾಣ ಹಾಕುವುದೇ ಚೆನ್ನೈ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಚೆನ್ನೈನ ವೇಗಿ ಖಲೀಲ್ ಅಹಮದ್, ಮುಕೇಶ್ ಚೌಧರಿ, ಸ್ಪಿನ್ನರ್ ನೂರ್ ಅಹಮದ್, ರವೀಂದ್ರ ಜಡೇಜ ಹಾಗೂ ಆರ್. ಅಶ್ವಿನ್ ಅವರು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕಿದರೆ ತಮ್ಮ ತಂಡದ ಸೋಲಿನ ಸರಪಣಿ ತುಂಡರಿಸುವುದು ಸುಲಭವಾಗಬಹುದು.

**ಪಂದ್ಯ ಆರಂಭ:** ರಾತ್ರಿ 7.30
**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

**ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಅಂಕ | ಎನ್‌ಆರ್‌ಆರ್ |
|---|---|---|---|---|---|
| ಗುಜರಾತ್ ಟೈಟನ್ಸ್ | 6 | 4 | 2 | 8 | 1.081 |
| ಡೆಲ್ಲಿ ಕ್ಯಾಪಿಟಲ್ಸ್ | 5 | 4 | 1 | 8 | 0.889 |
| ರಾಯಲ್ ಚಾಲೆಂಜರ್ಸ್ ಬೆಂಗಳೂರು | 6 | 4 | 2 | 8 | 0.672 |
| ಲಖನೌ ಸೂಪರ್ ಜೈಂಟ್ಸ್ | 6 | 4 | 2 | 8 | 0.162 |
| ಕೋಲ್ಕತ್ತ ನೈಟ್ ರೈಡರ್ಸ್ | 6 | 3 | 3 | 6 | 0.803 |
| ಪಂಜಾಬ್ ಕಿಂಗ್ಸ್ | 5 | 3 | 2 | 6 | 0.065 |
| ಮುಂಬೈ ಇಂಡಿಯನ್ಸ್ | 6 | 2 | 4 | 4 | 0.104 |
| ರಾಜಸ್ಥಾನ ರಾಯಲ್ಸ್ | 6 | 2 | 4 | 4 | -0.838 |
| ಸನ್‌ರೈಸರ್ಸ್ ಹೈದರಾಬಾದ್ | 6 | 2 | 4 | 4 | -1.245 |
| ಚೆನ್ನೈ ಸೂಪರ್ ಕಿಂಗ್ಸ್ | 6 | 1 | 5 | 2 | -1.554 |

**ಆರೇಂಜ್ ಕ್ಯಾಪ್**
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 349 ರನ್

**ಪರ್ಪಲ್ ಕ್ಯಾಪ್**
ನೂರ್ ಅಹಮ್ಮದ್ (ಸಿಎಸ್‌ಕೆ) 12 ವಿಕೆಟ್

ಸಿಕ್ಕ ಅವಕಾಶದಲ್ಲಿ ಅಬ್ಬರಿಸಿದ ಕನ್ನಡಿಗ ಕರುಣ್

# ಡೆಲ್ಲಿ ಜಯದ ಓಟಕ್ಕೆ ಮುಂಬೈ ತಡೆ

**ನವದೆಹಲಿ (ಪಿಟಿಐ):** ಕನ್ನಡಿಗ ಕರುಣ್ ನಾಯರ್ ತಮಗೆ ಒದಗಿದ ಅವಕಾಶದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಗೆಲುವಿನ ಆಸೆ ಮೂಡಿಸಿದ್ದರು. ಆದರೆ, ಅವರ ನಿರ್ಗಮನದ ಬಳಿಕ ಮೇಲುಗೈ ಸಾಧಿಸಿದ ಮುಂಬೈ ಇಂಡಿಯನ್ಸ್ ತಂಡವು ಭಾನುವಾರ ನಡೆದ ಐಪಿಎಲ್‌ನ ಹೋರಾಟದ ಪಂದ್ಯದಲ್ಲಿ 12 ರನ್‌ಗಳ ರೋಚಕ ಜಯ ಸಾಧಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 206 ರನ್‌ಗಳ ಗುರಿಯನ್ನು ಪಡೆದಿದ್ದ ಡೆಲ್ಲಿ ತಂಡವು ಒಂದು ಹಂತದಲ್ಲಿ 10 ಓವರ್‌ಗಳಲ್ಲೇ 1 ವಿಕೆಟ್‌ಗೆ 113 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. ದೇಶಿಯ ಕ್ರಿಕೆಟ್‌ನಲ್ಲಿ ರನ್ ಹೊಳೆ ಹರಿಸಿದ್ದ ಕರುಣ್ ಈ ಬಾರಿ ದೊರೆತ ಮೊದಲ ಅವಕಾಶದಲ್ಲೇ ಮಿಂಚಿದರು. ಇಂಪ್ಯಾಕ್ಟ್ ಆಟಗಾರನಾಗಿ ಬಂದ ಅವರು 40 ಎಸೆತಗಳಲ್ಲಿ 89 ರನ್ ಸೂರೆ ಮಾಡಿದರು. ಅದರಲ್ಲಿ 12 ಬೌಂಡರಿ ಮತ್ತು ಐದು ಭರ್ಜರಿ ಸಿಕ್ಸರ್ ಸೇರಿತ್ತು.

ಮಿಚೆಲ್ ಸ್ಯಾಂಟನರ್ ಹಾಕಿದ 12ನೇ ಓವರ್‌ನಲ್ಲಿ ದೊಡ್ಡ ಹೊಡೆತಕ್ಕೆ ಮುಂದಾದ ಕರುಣ್ ಬೌಲ್ಡ್ ಆದರು. ಈ ಮಧ್ಯೆ ಸ್ಪಿನ್ನರ್ ಕರ್ಣ ಶರ್ಮಾ ಅವರು ಮೂವರು ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದ್ದರಿಂದ ಮುಂಬೈ ತಂಡ ಹಿಡಿತ ಸಾಧಿಸಿತು. ಕೊನೆಯ 58 ರನ್‌ಗಳ ಅಂತರದಲ್ಲಿ ಎಂಟು ವಿಕೆಟ್ ಪತನವಾದವು. ಹೀಗಾಗಿ, 19 ಓವರ್‌ಗಳಲ್ಲಿ 193 ರನ್ ಗಳಿಸಿ ಡೆಲ್ಲಿ ತಂಡವು ಹೋರಾಟವನ್ನು ಮುಗಿಸಿತು.

ಸತತ ನಾಲ್ಕು ಪಂದ್ಯಗಳನ್ನು ಗೆದ್ದು ಅಜೇಯವಾಗಿದ್ದ ಅಕ್ಷರ್ ಪಟೇಲ್ ಬಳಗಕ್ಕೆ ಇದು ಈ ಐಪಿಎಲ್ ಆವೃತ್ತಿಯಲ್ಲಿ ಮೊದಲ ಸೋಲು. ಹಾರ್ದಿಕ್ ಪಾಂಡ್ಯ ಬಳಗಕ್ಕೆ ಇದು ಆರು ಪಂದ್ಯಗಳಲ್ಲಿ ಎರಡನೇ ಜಯವಾಗಿದೆ.

**ತಿಲಕ್ ವರ್ಮಾ ಆಸರೆ:** ಇದಕ್ಕೂ ಮೊದಲು ತಿಲಕ್ ವರ್ಮಾ (59; 33ಎ, 4X6, 6X3) ಅವರ ಅಬ್ಬರದ ಅರ್ಧಶತಕದ ಬಲದಿಂದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 205 ರನ್ ಗಳಿಸಿತು. ರೋಹಿತ್ ಶರ್ಮಾ (18; 12ಎ, 4X2, 6X1) ಮತ್ತು ರಿಯಾನ್ ರಿಕೆಲ್ಟನ್ (41; 25ಎ, 4X5, 6X2) ಅವರು ಮೊದಲ ವಿಕೆಟ್‌ಗೆ 47 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಸೂರ್ಯಕುಮಾರ್ ಯಾದವ್ (40; 28ಎ) ಉಪಯುಕ್ತ ಕಾಣಿಕೆ ನೀಡಿದರು. ಮಧ್ಯಮ ಕ್ರಮಾಂಕದಲ್ಲಿ ಡೆಲ್ಲಿ ಬೌಲರ್‌ಗಳು ರನ್ ವೇಗಕ್ಕೆ ಕಡಿವಾಣ ಹಾಕಿದರೂ ನಂತರದಲ್ಲಿ ತಿಲಕ್ ಮತ್ತು ನಮನ್ ಧೀರ್ (ಔಟಾಗದೇ 38; 17ಎ, 4X3, 6X2) ತಂಡದ ಮೊತ್ತವನ್ನು ದ್ವಿಶತಕದ ಗಡಿ ದಾಟಿಸಿದರು.

**ಸಂಕ್ಷಿಪ್ತ ಸ್ಕೋರು:** ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5ಕ್ಕೆ205 (ರಿಯಾನ್ ರಿಕೆಲ್ಟನ್ 41, ಸೂರ್ಯಕುಮಾರ್ ಯಾದವ್ 40, ತಿಲಕ್ ವರ್ಮಾ 59, ನಮನ್ ಧೀರ್ ಔಟಾಗದೇ 38, ವಿಪ್ರಜ್ ನಿಗಂ 41ಕ್ಕೆ2, ಕುಲದೀಪ್ ಯಾದವ್ 23ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 19 ಓವರ್‌ಗಳಲ್ಲಿ 193 (ಅಭಿಷೇಕ್ ಪೊರೆಲ್ 33, ಕರುಣ್ ನಾಯರ್ 89; ಮಿಚೆಲ್ ಸ್ಯಾಂಟನರ್ 43ಕ್ಕೆ 2, ಕರ್ಣ ಶರ್ಮಾ 36ಕ್ಕೆ 3). ಪಂದ್ಯದ ಆಟಗಾರ: ಕರ್ಣ ಶರ್ಮಾ

ಕರ್ಣ ಶರ್ಮಾ

ಕರುಣ್ ನಾಯರ್ ಬ್ಯಾಟಿಂಗ್ ವೈಖರಿ ಪಿಟಿಐ ಚಿತ್ರ

# ಅಲ್ಕರಾಜ್‌ಗೆ ಸಿಂಗಲ್ಸ್ ಕಿರೀಟ

**ಮಾಂಟೆ ಕಾರ್ಲೊ (ಎಎಫ್‌ಪಿ):** ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಅಲ್ಕರಾಜ್ 3-6, 6-1, 6-0 ಯಿಂದ ಇಟಲಿಯ ಲೊರೆಂಝೊ ಮುಸೆಟ್ಟಿ ಅವರನ್ನು ಮಣಿಸಿ ಇಲ್ಲಿ ಮೊದಲ ಬಾರಿ ಚಾಂಪಿಯನ್ ಆದರು. ನಾಲ್ಕು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡೆಯನಾಗಿರುವ 21 ವರ್ಷ ವಯಸ್ಸಿನ ಅಲ್ಕರಾಜ್, ತಮ್ಮ ಆರನೇ ಮಾಸ್ಟರ್ಸ್ ಟ್ರೋಫಿಗೆ ಮುತ್ತಿಕ್ಕಿದರು.

ಪ್ರಶಸ್ತಿಯೊಂದಿಗೆ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್

ಈ ಗೆಲುವಿನೊಂದಿಗೆ ಅಲ್ಕರಾಜ್ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ಮೂರನೇ ಸ್ಥಾನದಲ್ಲಿದ್ದ ಅವರು, ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಏರಿದ್ದಾರೆ.